to judicial custody. the local Inspector was sent to judicial custody and a case under Section 302 IPC was taken against him. I assure that we will not hesitate to take action against the police officer.

ಅದು ಏನೇ ಇರಲಿ ನಾವು ಅಲ್ಲಿನ ಡಿ.ಐ.ಜಿ. ಯವರನ್ನು ಕರೆಸಿ ತನಿಖೆ ಮಾಡುತ್ತೇವೆ. ಇದಕ್ಕೆ ಮೊದಲೂ ಕೂಡ ಆತನ ಸಹೋದರನ ಕೊಲೆಯಾಯಿತು ಎಂದು ತಾವು ಹೇಳಿದಿರಿ. ಆ ಬಗ್ಗೆ ಕೂಡ ಒಂದು ವಿವರವಾದ ತನಿಖೆಯನ್ನು ವ್ಯವಸ್ಥೆಗೊಳಿಸುತ್ತೇವೆ. ಇನ್ನು ಪರಿಹಾರವನ್ನು ಕುರಿತಂತೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಚರ್ಚೆ ನಡೆಸಿ ವ್ಯವಸ್ಥೆ ಮಾಡುತ್ತೇನೆ.

6. ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯವನ್ನು ವಿರೋಧ ಮಾಡುತ್ತಾ ನಾನು ನನ್ನ ಮಾತುಗಳನ್ನು ಸಮರ್ಥಿಸಿಕೊಳ್ಳ ಬೇಕಾದರೆ ಎರಡು ಮಾತುಗಳನ್ನು ವಿಸ್ತರಿಸಿ ಹೇಳಬೇಕಾಗುತ್ತದೆ. ಒಂದು ರಾಜ್ಯದ ಅಭಿವೃದ್ಧಿಯ ದೃಷ್ಟಿಕೋನದಿಂದಲೂ ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ದೃಷ್ಟಿಯಿಂದಲೂ ಸರ್ಕಾರಕ್ಕೆ ತನ್ನದೇ ಆದಂತಹ ಕಾರ್ಯಕ್ರಮಗಳು ತತ್ವ ಸಿದ್ಧಾಂತಿಗಳು ಇರಬೇಕಾಗುತ್ತದೆ. ಇತ್ತೀಚೆಗೆ ನಡೆದಂತಹ 12ನೇ ಲೋಕಸಭಾ ಚುನಾವಣೆ ಈ ಸರ್ಕಾರಕ್ಕೆ ಒಂದು ಪಾಠವನ್ನು ಕಲಿಸಿತು. ಅದನ್ನು ಅವರೂ ಕೂಡ ಒಪ್ಪಿಕೊಳ್ಳುತ್ತಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎರಡು ಮಾತುಗಳನ್ನು ಹೇಳಿದ್ದಾರೆ. ಜನತೆಯ ಆಶೋತ್ತರಗಳು ಮೇಲಟ್ಟಕ್ಕೇರಿದ್ದು ಸರ್ಕಾರ ಇನ್ನೂ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು ಎಂದು ಜನ ನಿರ್ಣಯದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ನನ್ನ ಸರ್ಕಾರ ತುಂಬಾ ಗೌರವದಿಂದ ಸ್ವೀಕರಿಸಿದೆ. ಅಂದರೆ ಜನರ ನಿರೀಕ್ಷಣೆಗೂ ಸರ್ಕಾರದ ಸಾಧನೆಗೂ ಅಥವಾ ಅದು ಹೋಗತಕ್ಕಂತಹ ವೇಗಕ್ಕೂ ಅಜಗಜಾಂತರ ವ್ಯತ್ಯಾಸವಿರುವುದರಿಂದ ಜನರ ನಿರೀಕ್ಷಣೆಯನ್ನು ಮುಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಆದುದರಿಂದ ನೀವು ಸೋತಿದ್ದೀರಿ ಎನ್ನುವಂತಹ ಮಾತನ್ನು ಈ ವಾಕ್ಯದಿಂದ ನಾವು ಗುರುತಿಸಬಹುದು. ಆದರೆ ಒಂದು ಕೈಯಲ್ಲಿ ಸರ್ಕಾರ ಇಟ್ಟುಕೊಂಡು ಮೂರು ವರ್ಷ ಆಡಳಿತ ನಡೆಸಿ ತನ್ನದೇ ಆದಂತಹ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿದ್ದರೆ ನೀವು ಇಷ್ಟೊಂದು ಹೀನಾಯವಾಗಿ ಸೋಲಬೇಕಾದಂತಹ ಪರಿಸ್ಥಿತಿ ಈ ಸರ್ಕಾರಕ್ಕೆ ಬರುತ್ತಿರಲಿಲ್ಲ. ಒಂದು ದೃಷ್ಟಿಯಿಂದ ಸರ್ಕಾರ ತನ್ನ ತಪ್ಪನ್ನು ಒಪ್ಪಿಕೊಂಡ ಮೇಲೆ ಬಹಳ ಸೌಜನ್ಯದಿಂದ, ಗೌರವದಿಂದ ಮುಖ್ಯಮಂತ್ರಿಗಳು ತಮ್ಮ ಸ್ಥಾನವನ್ನು ತೆರವು ಮಾಡಿ ಮತ್ತೆ ಹೊಸ ಚುನಾವಣೆ ಕಡೆಗೆ ಹೋಗತಕ್ಕಂತಹ ಪ್ರಯತ್ನವನ್ನು ಮಾಡಬೇಕಾಗಿತ್ತು. ಆದರೆ ಆ ಕೆಲಸ ಅವರಿಂದ ಆಗಲಿಲ್ಲ. ಈಗ ಅವರು ಸದನದಲ್ಲಿಲ್ಲ. ಅವರು ಈ ಅವಧಿಯಾದ ಮೇಲೆ ರಾಜ್ಯದ ರಾಜಕಾರಣದಲ್ಲಿ ಸಕ್ರೀಯವಾಗಿ ಉಳಿಯಬೇಕೆಂದು ಉದ್ದೇಶವಿಟ್ಟುಕೊಂಡಿದ್ದಾರೋ ಅಥವಾ ಈ ಅವಧಿ ಮುಗಿದ ಮೇಲೆ ವಿಶ್ರಾಂತ ಜೀವನವನ್ನು ಕಳೆಯಬೇಕೆಂದು ಅಪೇಕ್ಷೆ ಇಟ್ಟುಕೊಂಡಿದ್ದಾರೋ ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು:- ತಾವು ಮತ್ತು ಅವರು ಒಂದೇ ಜಿಲ್ಲೆಯವರಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ತಾವು ಸುಮಾರು 40 ವರ್ಷಗಳ ಕಾಲ ಜೊತೆಯಲ್ಲಿದ್ದು ಅವರನ್ನು ನಿವೃತ್ತಿಯಾಗಿ ಎಂದು ಹೇಳುತ್ತಿರುವಿರಲ್ಲಾ, ಅದನ್ನು ನೀವು ಮನಃಪೂರ್ವಕವಾಗಿ ಹೇಳುತ್ತಿದ್ದೀರೋ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೇ, ಅವರು ಏನಾದರೂ ಒಳ್ಳೆಯ ಕೆಲಸವನ್ನು ಮಾಡಿ ಜನರ ನಿರೀಕ್ಷಣೆಗೆ ಮುಟ್ಟುತ್ತಾರೇನೋ ಎನ್ನುವ ಆಸೆ, ಹಂಬಲ ನನಗಿತ್ತು. ಆದರೆ ಅವರಿಗೆ ರಾಜಕೀಯದ ಸವಾಲುಗಳೇ ಇಲ್ಲ ಎನ್ನತಕ್ಕಂತಹ ಭಾವನೆ ನನಗೆ ಬಂದಿದೆ. ಮುಂದೆ ಅವರು ಹೇಗೆ ಸವಾಲುಗಳನ್ನು ಸ್ವೀಕಾರ ಮಾಡುತ್ತಾರೆ? ರಾಜಕೀಯವಾಗಿ ಅಧಿಕಾರಕ್ಕೆ ಬಂದ ಮೇಲೆ ರಾಜಕಾರಣದಲ್ಲಿ ಪ್ರಭಲವಾದಂತಹ ಉತ್ಕಟ ಇಚ್ಛೆ, ಛಲ ಇರಬೇಕಾಗುತ್ತದೆ. ಈ ರಾಜಕಾರಣದ ಛಲ ಅವರ ಹೃದಯದಲ್ಲಿ ಬತ್ತಿ ಹೋಗಿದ್ದರೆ ಅವರಿಂದ ನಾವು ಏನನ್ನು ನಿರೀಕ್ಷಣೆ ಮಾಡಬಹುದು? ಅದು ಸಾಧ್ಯವಾಗದಿರುವಂತಹ ಮಾತು ಎಂದು ನಾನು ಬಹಳ ವಿಷಾದದಿಂದ ಇವತ್ತು ಹೇಳುತ್ತಿದ್ದೇನೆ. ವಿಶ್ರಾಂತಿ ಪಡೆಯುವ ಆಸೆ ನಿಮಗಿದ್ದರೆ ನಾನು ಏನನ್ನೂ ಹೇಳಲಾರೆ.

ಶ್ರೀ ಹೆಚ್. ಶಿವಪ್ಪ:- ನಿಮಗೆ ಅದು ಇಷ್ಟವಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮಿಷ್ಟದಂತೆ ಯಾರೂ ನಡೆಯುವುದಕ್ಕಾಗುವುದಿಲ್ಲ ಶಿವಪ್ಪನವರೇ ಮುಖ್ಯಮಂತ್ರಿಗಳು ಅಧಿಕಾರದಲ್ಲಿ ಬಂದು ಎರಡು ವರ್ಷ ಪೂರೈಸಿದ್ದು ಸಿಕ್ಕಂತಹ ಸಮಯವನ್ನು ಒಂದು ಸವಾಲನ್ನಾಗಿ ಸ್ವೀಕಾರ ಮಾಡಿದ್ದರೆ ಅವರು ಇಷ್ಟೊಂದು ಹೀನಾಯವಾಗಿ ಸೋಲಬೇಕಾದ ಅವಶ್ಯಕತೆ ಇರಲಿಲ್ಲ. ಈ ಮಾತನ್ನು ನಾನು ನಿಮ್ಮ ಹೊಗಳಿಕೆಗಾಗಿ ಹೇಳುವಂಥದ್ದಲ್ಲ. ಆದುದರಿಂದ ಇವತ್ತು ತಾವು ಮಾಡಬೇಕಾದಂತಹ ಕೆಲಸ ಮಾಡದೇ ಇರುವುದರಿಂದ ಈ ಪರಿಸ್ಥಿತಿ ಬಂದಿದೆ.

ಶ್ರೀ ಹೆಚ್.ಎನ್. ನಂಜೇಗೌಡ:- ಈಗಾಗಲೇ ಅವರು ಎರಡು ಸಲ ಸವಾಲು ಹಾಕಿದ್ದರು. ಮೊದಲನೆಯದು ಏನೆಂದರೆ ಅವರು ನಮ್ಮ ಕಡೆಗೆ ಕೈತೋರಿಸುತ್ತಾ "ತಾಕತ್ತಿದ್ದರೆ ಅಲ್ಲಿ ಅಂದರೆ ಕೇಂದ್ರದಲ್ಲಿ ತೆಗೆಯಿರಿ. ಇಲ್ಲಿ ಏನು ಹೇಳುತ್ತೀರಿ" ಎಂದರು. ಅದೇನೋ ಆಗಿ ಹತ್ತು ದಿನಗಳಲ್ಲೇ ಸರ್ಕಾರಿ ಹೋಯಿತು. ಈಗ ಎರಡನೇ ಸಲ ಸವಾಲನ್ನು ಹಾಕಿದರು; 'ತಾಕತ್ತಿದ್ದರೆ ವಿಧಾನಸಭೆಯಲ್ಲಿ ನಮ್ಮನ್ನು ತೆಗೆಯಿರಿ' ಎಂದು. ಮತ್ತೆ ಇನ್ನೇನು ಸವಾಲನ್ನು ಅವರು ಹಾಕಬೇಕು?

ಶ್ರೀ ಕಾಗೋಡು ತಿಮ್ಮಪ್ಪ:- ನನಗೆ ಗೊತ್ತಿದೆ ಸವಾಲು ಹಾಕಿ ಯಾರೂ ತೆಗೆಯುವುದಿಲ್ಲ. ವಿಧಾನಸಭೆಯಲ್ಲಿ ಬಹುಮತ ಯಾರಿಗೆ ಇದ್ದರೆ ಅವರು ಇರುತ್ತಾರೆ ಇಲ್ಲದಿದ್ದರೆ ಹೋಗುತ್ತಾರೆ. ಹುಚ್ಚರು ಹೇಳುವಂಥ ಮಾತು. ಪ್ರಜ್ಞಾಪೂರ್ವಕವಾಗಿ ಹೇಳುವಂಥ ಮಾತುಗಳಲ್ಲ ಅವು. ಆದ್ದರಿಂದ ನಾನು ಏಕೆ ವೇದನೆಯಿಂದ ಈ ಮಾತನ್ನು ಹೇಳುತ್ತೇನೆ ಎಂದರೆ ಸಿಕ್ಕಂಥ ಅವಕಾಶವನ್ನು ಸದುಪಯೋಗಪಡಿಸಿಕೊಂಡಿದ್ದರೆ ಜನರ ನಿರೀಕ್ಷೆಗೆ ಮುಟ್ಟಬಹುದಿತ್ತು. ಆಗ ಇಂಥ ಚುನಾವಣೆ ಬಂದಂಥ ಸಂದರ್ಭದಲ್ಲಿ ಜನರ ಬೆಂಬಲವನ್ನು ಅವರು ಪಡೆಯಬಹುದು. ಈ ಕೆಲಸ ಅವರಿಂದ ಆಗಲಿಲ್ಲ ಎನ್ನುವ ಮಾತು ಈ ಒಂದು ಸನ್ನಿವೇಶದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕಳೆದ ಸಾರಿ ರಾಜ್ಯಪಾಲರು ಭಾಷಣವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರದವರು

ವಿಶೇಷವಾಗಿ ಜನರ ಕನಿಷ್ಠ ಕಾರ್ಯಕ್ರಮಗಳ ಬಗ್ಗೆ ಸ್ಪಷ್ಟವಾದ ಮಾತನ್ನು ಹೇಳಿದ್ದರು. ಸಾಮಾಜಿಕ ನ್ಯಾಯದ ಬಗ್ಗೆ ಆರ್ಥಿಕ ಸಮಾನತೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಎರಡೂ ಧೋರಣೆಗಳು ಇವತ್ತಿನ ರಾಜ್ಯಪಾಲರ ಭಾಷಣದಲ್ಲಿ ಮಾಯವಾಗಿದ್ದಾವೆ. ಅಂದರೆ ಅಂಥ ಕಲ್ಪನೆಗಳನ್ನು ಮರೆತಿರಬೇಕು. ಇಲ್ಲದಿದ್ದರೆ ಅವುಗಳನ್ನು ಜಾರಿಗೆ ತರತಕ್ಕಂಥ ಕೆಲಸ ನಮ್ಮಿಂದ ಆಗುವುದಿಲ್ಲ ಎಂದು ಹೇಳಿ ತೀರ್ಮಾನಕ್ಕೆ ಬಂದಿರಬೇಕು. ಇಲ್ಲದಿದ್ದರೆ ಅವುಗಳನ್ನು ಉಚ್ಚಾರ ಮಾಡಿ ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡುತ್ತಾ ಅವುಗಳ ಸಾಧನೆ ಬಗ್ಗೆ ಒಂದೆರಡು ಮಾತುಗಳನ್ನು ಈಗ ಪ್ರಸ್ತಾಪ ಮಾಡಿ ಉಳಿದಂಥ ಭಾಗವನ್ನು ಮಾಡುತ್ತೇನೆ ಅಥವಾ ಮುಂದೇನು ಮಾಡುವವರಿದ್ದೇವೆ ಎನ್ನುವ ಬಗ್ಗೆ ಸದನದಲ್ಲಿ ಹೇಳಿದ್ದರೆ ನಾವು ಕೂಡ ಅದನ್ನು ಪರಿಶೀಲನೆ ಮಾಡಬಹುದಿತ್ತು. ಆಲೋಚನೆ ಮಾಡಿ ಚರ್ಚೆಗೆ ಒಳಪಡಿಸಬಹುದಿತ್ತು. ಈ ಯಾವ ಕೆಲಸವನ್ನೂ ಮಾಡದೇ ಇರುವುದರಿಂದ, ನಾವು ಈ ಸರ್ಕಾರದ ದೃಷ್ಟಿಕೋನವನ್ನು ಯಾವ ಅಳತೆಗೋಲಿನಿಂದ ಅಳೆಯಬೇಕು ಎನ್ನುವ ಸಂಶಯ ಇವತ್ತು ಬಂದಿದೆ. ಏಕೆಂದರೆ ಅವರು ಹೋದವರ್ಷದ ರಾಜ್ಯಪಾಲರ ಭಾಷಣದಲ್ಲಿ ವಿಶೇಷವಾಗಿ ಹೇಳಿದ್ದರು. ಮೊದಲನೇ ಪ್ಯಾರಾದಲ್ಲಿ "ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಆಧರಿಸಿ ಕೇಂದ್ರದಲ್ಲಿ ಹೊಸ ಸರ್ಕಾರ ರಚನೆಯಾದ ಮೇಲೆ ಸಮುದಾಯ ಆರೋಗ್ಯ ಸೇವೆಗಳು, ಪ್ರಾಥಮಿಕ ಶಿಕ್ಷಣ, ಗ್ರಾಮೀಣ ರಸ್ತೆಗಳು, ತಮ್ಮ ಬಹುಸಂಖ್ಯಾತ ಜನರ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರಿಗಾಗಿ ಗೃಹನಿರ್ಮಾಣ ಹಾಗೂ ಪ್ರಮುಖ ಸಾಮಾಜಿಕ ಸೇವೆಗಳಿಗೆ ಇನ್ನು ಹೆಚ್ಚು ಹಾಗೂ ತೀವ್ರ ಗಮನವನ್ನು ಕೊಡಲಾಗುತ್ತಿದೆ" ಈ ಮಾತನ್ನು ಹೇಳಿದ್ದಾರೆ. ಇದನ್ನು ಎಷ್ಟರಮಟ್ಟಿಗೆ ಒಂದು ವರ್ಷದ ಅವಧಿಯಲ್ಲಿ ಸಾಧನೆ ಮಾಡಿದ್ದಾರೆ, ಇನ್ನಾದರೂ ನಾವು ನೋಡಬೇಕಲ್ಲವೇ? ಈಗ ಕನಿಷ್ಠ ಕಾರ್ಯಕ್ರಮಗಳು ಯಾವುವು? ಮಾನ್ಯ ಗೋವಿಂದೇಗೌಡರು ಇಲ್ಲಿ ಇದ್ದಾರೆ. ಆಮೇಲೆ ಮುಂದೆ ಎಲ್ಲಾದರೂ ಹೊರಗೆ ಹೋದರೆ ಹೇಳಿದರೆ ಆಗುವುದಿಲ್ಲ. ಇದ್ದಾಗಲೇ ಒಂದೆರಡು ಮಾತುಗಳನ್ನು ಅವರಿಗೂ ಹೇಳಿಬಿಡುತ್ತೇನೆ. ಈಗ ನಮಗೆ ಪ್ರಾಥಮಿಕ ಶಿಕ್ಷಣ ಒಂದು ಕನಿಷ್ಠ ಕಾರ್ಯಕ್ರಮ. ನಾಗರೀಕರಿಗೆ ಸಿಗಬೇಕಾದ ಒಂದು ಕನಿಷ್ಠ ಕಾರ್ಯಕ್ರಮ. ತಾವು ಈಗ ರಾಜ್ಯಪಾಲರ ಭಾಷಣದಲ್ಲಿ ಕೂಡ 9ನೇ ಯೋಜನೆಯಲ್ಲಿ ತಾವು ಒಂದರಿಂದ 14 ವರ್ಷದವರೆವಿಗೆ ಪ್ರತಿಯೊಬ್ಬ ಮಕ್ಕಳಿಗೂ ವಿಶೇಷವಾದ ಶಿಕ್ಷಣವನ್ನು ಕೊಡುವ ಕಾರ್ಯಕ್ರಮದಲ್ಲಿ ಬದ್ಧರಾಗಿದ್ದೇವೆ. ಅದಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಮಾಡತಕ್ಕಂಥವರಿಗೆ ಇಲ್ಲಿಯವರೆಗೆ ಇದ್ದಂಥ ವ್ಯವಸ್ಥೆ ಭೂಮಿಕೆ ಮೇಲೆ ಇನ್‌ಫ್ರಾಸ್ಟ್ರಕ್ಚರ್ ಎನ್ನುತ್ತೇವೆ, ಅದನ್ನು ಬಳಸಿಕೊಂಡು ಕೊಡುವಂಥ ಕೆಲಸವನ್ನು ಏಕೆ ಮಾಡಲಿಲ್ಲ? ಹೌದು ಒಂದು ಕೆಲಸ ಪ್ರಾಥಮಿಕ ಶಿಕ್ಷಕರನ್ನು ನೇಮಿಸಿರತಕ್ಕಂಥ ಕೆಲಸದಲ್ಲಿ, ಕೆಲಸ ಆಗಿದೆ. ಏಕೆ ಆಗಿದೆ? ಅದನ್ನು ನೇಮಕ ಮಾಡುವ ನಿಯಮಾವಳಿಯನ್ನು ಸರಳಗೊಳಿಸಿದ ಕಾರಣಕ್ಕಾಗಿ ಅದು ನಿಮ್ಮ ಕಾಲದಲ್ಲಿ ಬಂದದ್ದಲ್ಲ. ಗುಂಡುರಾಯರು ಮುಖ್ಯಮಂತ್ರಿಯಾಗಿದ್ದಾರಲ್ಲಾ, ಆ ಕಾಲದಲ್ಲಿ ಯಾವ ಸಂದರ್ಶನವನ್ನೂ ಮಾಡದೇ ಕೇವಲ ಅಂಕಗಳ ಆಧಾರದ ಮೇಲೆ ಮೀಸಲಾತಿಯನ್ನು ಇಟ್ಟುಕೊಂಡು ನೇಮಕಾತಿ ಮಾಡುವ ಪದ್ಧತಿ ಬಂದ ಕಾರಣಕ್ಕಾಗಿ ನೀವು ಅದನ್ನು ಅನುಸರಿಸಿ ಮಾಡಿದ್ದರಿಂದ ಈ ನೇಮಕಾತಿ ಬಹಳ ಶೀಘ್ರಗತಿಯಿಂದ ಮಾಡಿದ್ದಾರೆ, ತುಂಬಾ ಸಂತೋಷ ಮಾಡಿದ್ದೀರಿ.

ಇವತ್ತು 1997-98ನೇ ಸಾಲಿನಲ್ಲಿ ತಾವೇನು ಹೇಳಿದ್ದೀರಿ? ಎಂಟು ಸಾವಿರ ಕೊಠಡಿಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಎಂಟು ಸಾವಿರ ಕೊಠಡಿಗಳನ್ನು ಇವತ್ತಿನವರೆಗೆ ಈ ವರ್ಷದಲ್ಲಿ ಕಟ್ಟಲಿಕ್ಕಾಗಲಿಲ್ಲ. ಏಕೆಂದರೆ ನಾನು ಮೊನ್ನೆ ಪ್ರತಿಯೊಂದು ಜಿಲ್ಲಾ ಪಂಚಾಯತಿಯನ್ನು ನಮಗೆ ಕೊಟ್ಟಂಥ ಕೊಠಡಿಗಳನ್ನು, ಪಟ್ಟಿಮಾಡಿ ಮಂಜೂರಾತಿ ಕೊಟ್ಟಿದ್ದಾರೆ. ಈ ವರ್ಷ ಮಾರ್ಚ್. ಏಕೆಂದರೆ ಇನ್ನು 15 ದಿವಸ ಇದೆ. ಈ ಎಂಟು ಸಾವಿರ ಕೊಠಡಿಗಳನ್ನು ಮಾರ್ಚಿ ಅಂತ್ಯದೊಳಗೆ ಪೂರ್ಣಗೊಳಿಸಬೇಕಾಗಿತ್ತು. ಪೂರ್ಣಗೊಳಿಸಿಲ್ಲ. ಜೊತೆಗೆ ಅದಕ್ಕೆ ಬೇಕಾದಂಥ ಪೂರ್ಣ ಹಣವನ್ನು 42 ಕೋಟಿ ರೂಪಾಯಿಯನ್ನು ಪ್ರತಿಯೊಂದು ಜಿಲ್ಲಾ ಪಂಚಾಯಿತಿಯ ಕೈಗೆ ಕೊಟ್ಟಿಲ್ಲ. ಹಣ ಕೊಡದೇ ಕೆಲಸವಾಗುವುದಿಲ್ಲ. ಈ ಕೆಲಸದಲ್ಲಿ ತಪ್ಪಿದ್ದೀರಿ. ಒಂದು ಆಯಿತು. ಆಮೇಲೆ ತಾವು ಈ ಪ್ರಾಥಮಿಕ ಶಿಕ್ಷಣಕ್ಕೆ ಏನು ನೇಮಕ ಮಾಡಿದ್ದೀರಿ. ಅಷ್ಟೊಂದು ಬೇಡಿಕೆ ಕಡಿಮೆಯಾಗಿದೆ. ಆದರೆ ನಮ್ಮ ಪ್ರೌಢಶಾಲೆಗಳಿಗೆ ಬೇಕಾದಂಥ ಮುಖ್ಯೋಪಾಧ್ಯಾಯರು, ಅದಕ್ಕೆ ಬೇಕಾದಂಥ ಉಪಾಧ್ಯಾಯರು, ಕಿರಿಯ ಕಾಲೇಜುಗಳಿಗೆ ಬೇಕಾದಂಥ ಪ್ರಾಂಶುಪಾಲರು, ಅದಕ್ಕೆ ಬೇಕಾದಂಥ ಉಪಾಧ್ಯಾಯರು, ಆಮೇಲೆ ಕಾಲೇಜುಗಳಿಗೆ ಬೇಕಾದಂಥ ಉಪಾಧ್ಯಾಯರುಗಳನ್ನು ಇವತ್ತಿನವರೆಗೂ ಪೂರ್ಣವಾಗಿ ನೇಮಕ ಮಾಡಿಲ್ಲ. ಅದರಲ್ಲೂ ಹಳ್ಳಿ ಪ್ರದೇಶದಲ್ಲಿರುವ ಪ್ರೌಢಶಾಲೆಗಳು, ಕಿರಿಯ ಕಾಲೇಜುಗಳು ಇವತ್ತು ಹೇಳುವುದಕ್ಕಾಗದೇ ಇರುವ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಆ ಮಕ್ಕಳ ಪರದಾಟವನ್ನು ನಾವು ನೋಡುವುದಕ್ಕೆ ಆಗುತ್ತಿಲ್ಲ. ಎಲ್ಲಾದರೂ ನೇಮಕ ಮಾಡಿರುವ ಉಪಾಧ್ಯಾಯರುಗಳು ಇವತ್ತು ಪಟ್ಟಣದ ಕಡೆಗೆ ಹೋಗುತ್ತಿದ್ದಾರೆಯೇ ವಿನಹ ಹಳ್ಳಿಯ ಕಡೆಗೆ ಹೋಗುತ್ತಿಲ್ಲ. ಆದ್ದರಿಂದ ಈ ಒಂದು ವರ್ಷದ ಅವಧಿಯಲ್ಲಿ ಮಾಡಬೇಕಾದ ಕನಿಷ್ಠ ಕಾರ್ಯಕ್ರಮ ಎಂದು ಇತ್ತಲ್ಲ, ಅದನ್ನು ಸಾಧನೆ ಮಾಡುವ ಕೆಲಸದಲ್ಲಿ ಭಾಗಶಃ ಮಾಡಿದರೂ ಕೂಡ ತಾವು ಉಳಿದಂಥ ಕೆಲಸವನ್ನು ಮಾಡಲಿಲ್ಲ. ಅದಕ್ಕಾಗಿ ಮೊನ್ನೆ ಒಂದು ಖಾಸಗಿ ಶಾಲೆಯಲ್ಲಿ ವಂತಿಗೆಯನ್ನು ವಸೂಲು ಮಾಡುವ ಬಗ್ಗೆ ಪ್ರಶ್ನೆ ಕೂಡ ಬಂದಿತ್ತು ನಮಗೆ ಪ್ರೊಹಿಬಿಷನ್ ಆಫ್ ಕ್ಯಾಪಿಟೇಷನ್ ಫೀ ಎಂದು ಒಂದು ಕಾನೂನೇ ಇದೆ. ಆ ಕಾನೂನು ಇದ್ದೂ ಕೂಡ ಅದನ್ನು ಜಾರಿಗೊಳಿಸುವ ಕೆಲಸ ಆಗುತ್ತಿಲ್ಲ. ಏಕೆ ಅದಕ್ಕೆ ನಾನು ಒಂದು ಸಲಹೆ ಕೊಡುವುದಕ್ಕೆ ಬರುತ್ತೇನೆ. ಅಷ್ಟೆ. ಯಾರು ಕಾನೂನಿಗೆ ವಿರುದ್ಧವಾಗಿ ವಂತಿಕೆಯನ್ನು ವಸೂಲುಮಾಡುತ್ತಾರೆ, ಆ ಕೆಲಸ ಕಾಗ್ನಿಸಬಲ್ ಅಫೆನ್ಸ್ ಎಂದು ಮಾಡಿ. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಯಾರು ಪೊಲೀಸರು ಬೇಕಾದರೂ ಕೂಡ ಕೆಲಸವನ್ನು ರಿಜಿಸ್ಟರ್ ಮಾಡಿ ದಾಖಲು ಮಾಡುವುದಕ್ಕೆ ಕಾಗ್ನಿಸಬಲ್ ಆಫೆನ್ಸ್‌ನ್ನಾಗಿ ಮಾಡಿ. ಆಮೇಲೆ ಇನ್ನೊಂದು ಇವತ್ತು ನ್ಯಾಷನಲ್ ಹೈಸ್ಕೂಲ್ ಇದೆ. ಅದರಲ್ಲಿ ಫಾರಂ ಕೊಡುವುದಿಲ್ಲ. ಸೀಟು ಕೊಡುವುದು ಹೋಗಲಿ. ಅಂಕ ಇದ್ದರೆ ಕೊಡುತ್ತಾರೆ. ಇಲ್ಲದಿದ್ದರೆ ಕೊಡುವುದಿಲ್ಲ. ದೊಡ್ಡ ಶಾಲಿ. ಹೆಸರುವಾಸಿ ಶಾಲೆ. ಆದರೇನು? ಅಲ್ಲಿ ಹರಿಜನ ಮಕ್ಕಳು ಹಿಂದುಳಿದವರ ಮಕ್ಕಳು, ಕೊಳಚಿ ಪ್ರದೇಶದಲ್ಲಿರುವ ಮಕ್ಕಳು ಓದಬಾರದು ಎಂದೇನೂ ಇಲ್ಲವಲ್ಲಾ ಅವರು ಓದಬೇಕಲ್ಲ. ಫಾರಂ ಕೊಡುವುದಿಲ್ಲ. ಅದಕ್ಕೆ ಮೊದಲು ಇದನ್ನೂ ಕಾಗ್ನಿಸಬಲ್ ಅಫೆನ್ಸ್ ಮಾಡಿ. ಎರಡನೆಯದು ಫಾರಂ ಕೊಡುವ ಕೆಲಸವನ್ನು ಸರ್ಕಾರವೇ ಮಾಡಲಿ. ಸರ್ಕಾರದ ಇಲಾಖೆಯಿಂದ ಕೊಡಲಿ. ಯಾರು ಮೊದಲು ಹೋಗಿ ಅರ್ಜಿಕೊಡುತ್ತಾನೋ ಅವನಿಗೆ ಸೀಟು ಕೊಡಲಿ. ಬರೀ ಮೆರಿಟ್ ನೋಡಿ ಕೊಟ್ಟುಬಿಟ್ಟರೆ ಮೊದಲನೇ ಬಾರಿಗೆ ಒಬ್ಬ ಸ್ಲಂನವನು ಎಲ್ಲಿ? ಒಬ್ಬ ಹಿಂದುಳಿದ ಮಕ್ಕಳು, ಕೊಳಗೇರಿಯಲ್ಲಿರುವ ಮಕ್ಕಳೋ, ಅಥವಾ

ಹರಿಜನ ಗಿರಿಜನ ಮಕ್ಕಳೊ ಒಂದೇ ಸಾರಿ ನ್ಯಾಷನಲ್ ಹೈಸ್ಕೂಲಿಗೆ ಅಥವಾ ಬಾಲ್ವಿನ್ ಸ್ಕೂಲಿಗೆ ಸೇರುವಷ್ಟು ಅಂಕವನ್ನು ಪಡೆಯುವುದಕ್ಕಾಗಿರುವುದಿಲ್ಲ. ಆದರೆ ಅವರುಗಳಿಗೆ ಅನುದಾನ ಕೂಡ ಬರುತ್ತಾ ಇದೆ. ಹಾಗಿದ್ದಮೇಲೆ ಅವರು ಈ ಪಕ್ಷಭೇದ ಮಾಡುವ ಅಗತ್ಯವಿಲ್ಲ. ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಇನ್ನೊಂದು ಇದೆ. ವಿದ್ಯಾಕ್ಷೇತ್ರ ವರ್ಟಿಕಲ್ ಆಗಿ ಬೆಳೆಯುತ್ತಿದೆ, ಹಾರಿಜಾಂಟಲ್ ಆಗಿ ಬೆಳೆಯುತ್ತಿಲ್ಲ. ಸಮಾನವಾದ ವಿದ್ಯಾಭ್ಯಾಸ ನಮಗೆ ಇನ್ನೂ ಸಿಕ್ಕಿಲ್ಲ. ಸಮಾನವಾದ ವಿದ್ಯಾಭ್ಯಾಸ ಸಿಗಬೇಕಾದ ಅಗತ್ಯ ಇವತ್ತು ಇದೆ. ಅದಕ್ಕೆ ನಾವು ಪ್ರಯತ್ನವನ್ನು ಮಾಡಬೇಕು. ಆದ್ದರಿಂದ ತಾವು ಯಾವ ಖಾಸಲಿ ಶಾಲೆಗಳು ಇದನ್ನು ತಪ್ಪಿಸಬೇಕು ಎಂದು ಹೇಳಿದರೆ ಹೇಗೆ ಮಾಡುತ್ತಾರೆ ಎನ್ನುವುದಕ್ಕೆ ಯಾರು ಹಣ ಕೊಡುತ್ತಾರೋ ಅವರಿಗೆ ಮಾತ್ರ ಫಾರಂ ಕೊಡುತ್ತಾರೆ. ಹಣ ಕೊಡದಿದ್ದರೆ ಫಾರಂ ಕೊಡುವುದಿಲ್ಲ. ಫಾರಂ ಕೊಡದಿದ್ದರೆ ನಿಮಗೆ ಫಾರಂ ಕೊಟ್ಟಿಲ್ಲ ಎನ್ನುತ್ತಾರೆ ಇನ್ನು ಮೇಲೆ ಇದೇ. ಪ್ರತಿ ಶಾಲೆಯಲ್ಲೂ ಕೂಡ ಮೀಸಲಾತಿ ಇರಲೇಬೇಕು ಎಂದು ಇದೆ. ಬೇಕಾದರೆ ನ್ಯಾಷನಲ್ ಹೈಸ್ಕೂಲಿಗೆ ಹೋಗಿ. ಅಥವಾ ನಿಮ್ಮ ಬಾಲ್ಡ್‌ವಿನ್ ಹೈಸ್ಕೂಲಿಗೆ ಹೋಗಲಿ. ಅಥವಾ ಇನ್ಯಾವುದಾದರೂ ಹೈಸ್ಕೂಲುಗಳು ಇದ್ದಾವಲ್ಲ, ಸೆಂಟ್ ಜೋಸೆಫ್ ಹೈಸ್ಕೂಲಿಗೆ ಹೋಗಿ, ಪ್ರಾಥಮಿಕ ಶಾಲೆಗೆ ಹೋಗಿ, ಯಾರೂ ಕೂಡ ಮೀಸಲಾತಿಯನ್ನು ಪಾಲನೆ ಮಾಡುತ್ತಿಲ್ಲ. ಅದರ ಪ್ರಕಾರ ಅಡ್ಮಿಷನ್ ಆಗುತ್ತಿಲ್ಲ. ಅದನ್ನು ತಪ್ಪಿಸಬೇಕು. ಸಮಾನವಾದ ವಿದ್ಯಾಭ್ಯಾಸ ಬರಬೇಕು. 1 ರಿಂದ 14 ವರ್ಷದ ಮಕ್ಕಳಿಗೆ ಸಮಾನವಾದ ವಿದ್ಯಾಭ್ಯಾಸ ಸಿಗಬೇಕು, ಕಡ್ಡಾಯವಾದ ಶಿಕ್ಷಣ ಸಿಗಬೇಕು ಎನ್ನುವುದಾದರೆ ಇದನ್ನು ಜಾರಿಗೆ ತರಬೇಕು.

12.20 ಪಿ.ಎಂ.

ಎರಡನೆಯ ವಿಚಾರ ಎಂದರೆ ಶಾಲೆಗಳಿಗೆ ಅಡ್ಮಿಷನ್ ಆಗತಕ್ಕ ಸಂದರ್ಭದಲ್ಲಿ ಅಡ್ಮಿಷನ್ ನಮ್ಮ ಸರ್ಕಾರೀ ಕಛೇರಿಯಿಂದಲೇ ಇಶ್ಯೂ ಮಾಡಬೇಕು. ಆವಾಗ ಆಗುತ್ತದೆ. ಮುಂಬೈನಲ್ಲಿ ಈ ವ್ಯವಸ್ಥೆ ಇದೆ. ಆದ್ದರಿಂದ ದಯವಿಟ್ಟು ಈ ವ್ಯವಸ್ಥೆಯನ್ನು ಮಾಡಿ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಈ ಪ್ರಿಸ್ಟೀಜಿಯಸ್ ಸ್ಕೂಲ್ಸ್, ಏನು ಇವೆಯಲ್ಲಾ, ಅವಕ್ಕೆ ಗವರ್ನಮೆಂಟ್ ಏಡ್ ಇತ್ತು ಎಂದರೆ ನೀವು ಹೇಗೆ ಪ್ರೊಫೆಷನಲ್ ಕಾಲೇಜಸ್‌ಗೆ ಇಷ್ಟು ಗವರ್ನಮೆಂಟ್ ಸೀಟ್, ಇಷ್ಟು ಮ್ಯಾನೇಜ್‌ಮೆಂಟ್ ಸೀಟ್ ಎಂದು ಖೋಟಾ ಮಾಡಿದ್ದೀರಿ, ಹಾಗೆ ಏಕೆ ಮಾಡಿ ನೀವೇ ಏಕೆ ಅದಕ್ಕೆ ಒಂದು ಅಡ್ಮಿಷನ್ ಮಾಡುವ ಹಾಗೆ ಮಾಡಬಾರದು? ಅಂದರೆ ಎಲ್ಲರಿಗೂ ಅನುಕೂಲ ಆಗುತ್ತದೆ. ದಯವಿಟ್ಟು ಇದನ್ನು ಅಷ್ಟು ವಿಚಾರ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಮಹಾರಾಷ್ಟ್ರದಲ್ಲಿ ಈ ಪದ್ಧತಿ ಮಾಡಿದ್ದಾರೆ ಹಾಗೆ ಇಲ್ಲೂ ಮಾಡಿ, ಇದೊಂದು. ಎರಡನೆಯದು ಇವತ್ತು 50 ವರ್ಷ ಸ್ವಾತಂತ್ರ್ಯ ಬಂದು ಆಗಿದೆ. ನಮ್ಮ ರಾಜ್ಯಾಂಗದಲ್ಲಿ ಒಂದರಿಂದ ಹದಿನಾಲ್ಕನೆಯ ವರ್ಷದವರೆಗೆ ಕಡ್ಡಾಯ ಶಿಕ್ಷಣವನ್ನು ಕೊಡತಕ್ಕಂಥ ಪದ್ಧತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದು ಮೂಲಭೂತ ಹಕ್ಕಾಗಿದೆ. ಇದನ್ನು ಕೊಡತಕ್ಕಂಥ ಕೆಲಸದಲ್ಲಿ ಇನ್ನೂ ಮೀನಮೇಷ ಎಣಿಸತಕ್ಕದ್ದು ಸರಿಯಾದಂತಹ ಕೆಲಸ ಅಲ್ಲ. ಅದಕ್ಕೆ 1989-90

ನೇ ಸಾಲಿನಿಂದ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತನ್ನಿ. ಒಂದು ಕಾನೂನು ಇದೆ. ಆ ಕಾನೂನನ್ನು ಇನ್ನೂ ಪೂರ್ಣವಾಗಿ ಜಾರಿಗೆ ತಂದಿಲ್ಲ. ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಆ ಕಾನೂನನ್ನು ದಯವಿಟ್ಟು ಜಾರಿಗೆ ತಂದು ಪ್ರತಿ ಒಬ್ಬ ಮಕ್ಕಳೂ ಸಹ ಒಂದರಿಂದ ಹದಿನಾಲ್ಕು ವರ್ಷದವರೆಗೆ ಕಡ್ಡಾಯ ಶಿಕ್ಷಣವನ್ನು ಪಡೆಯುವಂತಹ ವ್ಯವಸ್ಥೆ ಮಾಡಿ. ಆದರೆ ಒಂದು ಸಂಕಟ ಇದೆ, ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇವತ್ತೂ ಕೂಡ ಬಡವರಿಗೆ ಕಷ್ಟ ಇದೆ. ರಸ್ತೆಯ ಮೇಲೆ ಕೆಲಸ ಮಾಡುತ್ತಾರೆ ಹಾಗೂ ಅವರ ಮಕ್ಕಳನ್ನು ಅಲ್ಲಿಯೇ ಇಟ್ಟುಕೊಳ್ಳುತ್ತಾರೆ. ಇವತ್ತು ಕೂಲಿಗೆ ಹೋಗುತ್ತಾರೆ, ಮಕ್ಕಳನ್ನು ಅವರ ಜೊತೆಯಲ್ಲಿಯೇ ಕರೆದುಕೊಂಡು ಹೇಗುತ್ತಾರೆ. ಕೆಳಚಿ ಪ್ರದೇಶದ ಬಹುತೇಕ ಮಕ್ಕಳಿಗೆ ಶಾಲೆಗಳಿಗೆ ಹೋಗಲು ಆಗುವುದಿಲ್ಲ. ಬಡವರಿಗೆ ಇರುವಂಥ ಕಷ್ಟವನ್ನು ಸರ್ಕಾರ ಗುರ್ತಿಸಬೇಕು. ಇವತ್ತು ರಸ್ತೆಯಲ್ಲಿ ಕೇಬಲ್ ಹಾಕುವಂಥ ಕೆಲಸದಲ್ಲಿ ತೊಡಗಿರುವವರರು ತಮ್ಮ ಮಕ್ಕಳನ್ನು ರಸ್ತೆ ಪಕ್ಕದಲ್ಲಿಯೇ ಇಟ್ಟುಕೊಳ್ಳುತ್ತಾರೆ. ಇಂಗ್ಲೇಂಡ್, ಅಮೇರಿಕಾ ಮುಂತಾದ ಅಭಿವೃದ್ಧಿ ದೇಶಗಳಲ್ಲಿ ಕೆಲಸಗಾರರು ಕೆಲಸಕ್ಕೆ ಹೋಗುವಾಗ ತಮ್ಮ ಮಕ್ಕಳನ್ನು "ಚೈಲ್ಡ್ ಕೇರ್" ನಲ್ಲಿ ಬಿಟ್ಟು ಹೋಗುತ್ತಾರೆ. ಆದರೆ ಈ ರೀತಿಯಾದ ವ್ಯವಸ್ಥೆ ಅಂದರೆ ಮಕ್ಕಳನ್ನು ನೋಡಿಕೊಳ್ಳುವವರ ಹತ್ತಿರ ಬಿಟ್ಟು ಕೆಲಸಕ್ಕೆ ಹೋಗುವಂಥ ವ್ಯವಸ್ಥೆ ನಮ್ಮ ಹಳ್ಳಿಗಳಲ್ಲಿಲ್ಲ.

ಶ್ರೀ ಎಚ್. ಶಿವಪ್ಪ:- ಅನುದಾನ ಪಡೆಯದೇ ಇರತಕ್ಕಂಥ ಖಾಸಗಿ ಶಾಲೆಗಳ ಬಗ್ಗೆ ನಿಮ್ಮದು ಏನು ಸಲಹೆ? ಖಾಸಗಿ ಶಾಲೆಗಳೇನು ಇದ್ದಾವಲ್ಲಾ, ಅದಕ್ಕೆ ನೀವೀಗ ಕಾಗ್ನಿಸಬಲ್ ಅಫೆನ್ಸ್ ಮಾಡಬೇಕೆಂದು ಹೇಳಿದಿರಿ. ಆದರ ಮೇಲೆ ಹಿಡಿತ ಹೇಗೆ? ಆದರ ಬಗ್ಗೆ ಸಲಹೆ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಅದಕ್ಕೂ ಬರಬೇಕು. ಏಕೆಂದರೆ ಹೇಳಿದರೆ ಯಾರೂ ಮನೆಗಳಿಗೆ ಹೋಗಿ ನೀವು ಶಾಲೆ ಮಾಡಿರಿ ಎಂದು ಹೇಳಲಿಲ್ಲ. ಸಮಾಜ ಸೇವೆ ಮಾಡುತ್ತೇವೆ, ದೇಶ ಉದ್ಧಾರ ಮಾಡುತ್ತೇವೆ, ಜನೋದ್ಧಾರ ಮಾಡುತ್ತೇವೆಂದು ಹೇಳಿ ಶಾಲೆ ಪ್ರಾರಂಭ ಮಾಡಿಕೊಂಡು ಕುಳಿತ ಮೇಲೆ ಜನರ ಸೇವೆ ಮಾಡಬೇಕೇ ವಿನಹ ಲಾಭ ಮಾಡುವುದಕ್ಕೆ ಅಲ್ಲ. ಅವರಿಗೂ ಅದು ಅನ್ವಯಿಸಬೇಕಾಗುತ್ತದೆ. ಅನುದಾನ ಬರಲಿ, ಅನುದಾನ ಬಾರದಿರಲಿ. ತಮ್ಮನ್ನು ತಾವು ಸಮಾಜಕ್ಕೆ ಒಡ್ಡಿಕೊಂಡ ಮೇಲೆ ಅದರ ಸಾಧಕ ಭಾದಕಗಳಿಗೆ ಅವರು ತಲೆ ಕೊಡಲೇಬೇಕಾಗುತ್ತದೆ. ಆ ಅನ್ವಯ ಎಲ್ಲರಿಗೂ ಆಗಬೇಕಾಗುತ್ತದೆ.

ಉಪಾಧ್ಯಕ್ಷರು:- ಸರ್ಕಾರೀ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಒಳ್ಳೆಯದಾದರೆ ಈ ಖಾಸಗಿ ಶಾಲೆಗಳಿಗೆ ಹೋಗುವಂತಹ ಅವಶ್ಯಕತೆ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಗುಣಮಟ್ಟ ಎಲ್ಲಾ ಕಡೆಗೆ ಬರುವುದಿಲ್ಲ.

ಉಪಾಧ್ಯಕ್ಷರು:- ಗುಣಮಟ್ಟ ಒಳ್ಳೆಯದಾದರೆ ಸರ್ಕಾರೀ ಶಾಲೆ ಬಿಟ್ಟು ಖಾಸಗಿ ಶಾಲೆಗಳಿಗೆ ಹೋಗುವಂತಹ ಪ್ರಶ್ನೆ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಗುಣಮಟ್ಟ ಎಲ್ಲಾ ಕಡೆಗೆ ಬರುತ್ತದೆ. ಏಕೆಂದರೆ ಕೇಳಿದರೆ ಹೇಳುತ್ತೇನೆ. ಕುವೆಂಪುರವರು ಇದ್ದಾರೆ, ದ.ರಾ.ಬೇಂದ್ರೆಯವರು ಇದ್ದಾರೆ. ಅಡಿಗರು ಇದ್ದಾರೆ,

ಅವರೇನು ಕಾನ್ವೆಂಟ್ ಸ್ಕೂಲಿನಲ್ಲಿ ಓದಿದ್ದಾರಾ? ಕಾನ್ವೆಂಟ್ ಸ್ಕೂಲಿನಲ್ಲಿ ಓದಲಿಲ್ಲ, ನಾವೂ ಕಾನ್ವೆಂಟ್ ಸ್ಕೂಲಿನಲ್ಲಿ ಓದಿಲ್ಲ.

ಶ್ರೀ ಚಂದ್ರಕಾಂತ ಬೆಲ್ಲದ:- ಈಗ ಯಾರೂ ಕಾನ್ವೆಂಟ್ ಸ್ಕೂಲಿನಿಂದ ಓದಿದಂತಹವರು ಈ ದೇಶಕ್ಕಾಗಲೀ, ರಾಜ್ಯಕ್ಕಾಗಲೀ, ಜನತೆಗಾಗಲೂ, ಹಿತ ಮಾಡಿಲ್ಲ. ಎಲ್ಲರೂ ಸಾಮಾನ್ಯ ಶಾಲೆಯಲ್ಲಿ ಓದಿದಂತಹವರೇ, ಕನ್ನಡ ಶಾಲೆಯಲ್ಲಿ ಓದಿದಂತಹವರೇ, ಈ ದೇಶಕ್ಕೆ ದೊಡ್ಡ ದೊಡ್ಡ ಸೇವೆಯನ್ನು ಮಾಡಿದ್ದಾರೆ. ಆದರೆ ನಮ್ಮ ಉಪಾಧ್ಯಾಯರು ಹೇಳುತ್ತಿರುವುದು ಇವತ್ತು ಏನೆಂದರೆ ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನಡೆಯುತ್ತಾ ಇಲ್ಲ. ಅದಕ್ಕೆ ಖಾಸಗಿ ಶಾಲೆಗಳು ಬರುತ್ತಿವೆ ಎನ್ನುವಂತಹ ವಿಚಾರವನ್ನು ಹೇಳುತ್ತಿದ್ದಾರೆ. ಆದೃಷ್ಟಿಯಲ್ಲಿ ಗುಣಮಟ್ಟದ ಶಿಕ್ಷಣ ನಮ್ಮ ಸರ್ಕಾರಿ ಶಾಲೆಗಳಲ್ಲಿ ಸಿಗಲಿಕ್ಕೆ ಏನು ವ್ಯವಸ್ಥೆಗಳು ಬೇಕೋ ಅವೆಲ್ಲಾ ವ್ಯವಸ್ಥೆಗಳು ಆಗಬೇಕು. ಆದರ ಬಗ್ಗೆ ಹೆಚ್ಚು ಗಮನ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಏನೂ ತೊಂದರೆ ಇಲ್ಲ. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಕೂಡ ಅರ್ಹತೆ ಇರತಕ್ಕಂಥವರು ಶಿಕ್ಷಕರಿದ್ದಾರೆ. ಈಗ ಎಸ್.ಎಸ್.ಎಲ್.ಸಿ. ಪಿ.ಯು.ಸಿ. ಮತ್ತು ಟಿಸಿಎಚ್ ಆಗಲೇಬೇಕು. ಎಲ್ಲರೂ ಕಲಿಯುವುದೂ ಒಂದೇ ಶಾಲೆಯಲ್ಲಿ. ಒಬ್ಬ ಇಂಗ್ಲೀಷ್‌ನಲ್ಲಿ ಮಾತನಾಡಲು ಚೆನ್ನಾಗಿ ಬಂದಿರಬಹುದು, ಇನ್ನೊಬ್ಬರಿಗೆ ಕನ್ನಡ ಚೆನ್ನಾಗಿ ಮಾತನಾಡಲು ಬಂದಿರಬಹುದು. ಆದರೆ ಮೂಲಭೂತವಾದಂತಹ ಕ್ವಾಲಿಫಿಕೇಷನ್, ಅರ್ಹತೆ ಇದೆಯಲ್ಲಾ, ಎಲ್ಲಾ ಶಾಲೆಗಳಲ್ಲಿಯೂ ಒಂದೇ ಅರ್ಹತೆ ಇರತಕ್ಕಂಥ ಉಪಾಧ್ಯಾಯರು ನೇಮಕ ಆಗುತ್ತಾರೆ. ನೇಮಕವಾದ ಮೇಲೆ ಕಲಿಸತಕ್ಕ ಸಂದರ್ಭದಲ್ಲಿ ಶ್ರದ್ಧೆ, ಪ್ರಾಮಾಣಿಕತನ ಅವನಿಗೆ ಬಂದು ಬಿಟ್ಟರೆ ಮಕ್ಕಳಿಗೆ ಯಾವ್ಯಾವ ಹಂತದಲ್ಲಿ ಯಾವ್ಯಾವ ಅಕ್ಷರ ಭಾಗವನ್ನು ಸರಿ ಮಾಡಬೇಕು, ಯಾವ ಪಾಠವನ್ನು ಓದಬೇಕು ಎಂದು ಕಲಿಸುವಂತಹ ಒಂದು ವಾತಾವರಣ ಸೃಷ್ಟಿ ಆಗಬೇಕು.

ಉಪಾಧ್ಯಾಯರು:- ಬೆಂಗಳೂರು ಶಾಲೆಯಲ್ಲಿ ಕಲಿಯತಕ್ಕ ಮಕ್ಕಳು 98 ಗುಣಗಳನ್ನು ಗಳಿಸುತ್ತಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿದ್ದಂತಹ ಮಕ್ಕಳು ಬೆಂಗಳೂರಿಗೆ ಹೋಲಿಕೆ ಆಗಬಹುದಾ? ಯಾವಾಗ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ:- ಹೋಲಿಕೆ ಆಗುತ್ತದೆ ಎಂದರೆ, ಇವತ್ತು ಏನಾಗಿದೆ? ಎಲ್ಲಾ ಕಡೆಗೆ ಉಪಾಧ್ಯಾಯರು ವಾಸ ಮಾಡುವುದಿಲ್ಲ. ಇವತ್ತು ಬಸ್‌ಗಳು ಜಾಸ್ತಿ ಆಗಿದ್ದಾವೆ. ಹತ್ತು ಇಪ್ಪತ್ತು ಮೈಲಿ ಆದರೂ ಸಹ ಶಾಲೆಗೆ ಹೋಗುತ್ತಾರೆ, ವಾಪಸ್ ಮತ್ತೆ ಬಂದು ಪಟ್ಟಣಕ್ಕೆ ಸೇರುತ್ತಾರೆ. ಕಡ್ಡಾಯವಾಗಿ ಎಲ್ಲಿ ಶಾಲೆಗಳು ಇದ್ದಾವೆ ಅಲ್ಲಿ ವಾಸ ಮಾಡಬೇಕು ಎಂದು ಹೇಳಬೇಕಾಗುತ್ತದೆ. ಹಾಗೆ ವಾಸ ಮಾಡುವುದಕ್ಕೆ ತೊಂದರೆ ಏನು ಎಂದರೆ ಅಲ್ಲಿ ವಾಸಕ್ಕೆ ಅನುಕೂಲತೆಗಳು ಇಲ್ಲ. ವಾಸದ ಅನುಕೂಲತೆಗಳನ್ನು ಮಾಡಬೇಕಾಗುತ್ತದೆ. ಏಕೆಂದು ಹೇಳಿದರೆ ನಮ್ಮೆಲ್ಲರ ಗಮನ ಇದುವರೆಗೆ ಕ್ರೋಢೀಕರಣ ಆಗಿರತಕ್ಕದ್ದು ಪಟ್ಟಣದ ಬಗ್ಗೆ ಹಳ್ಳಿಗಳಲ್ಲಿ ಇಲ್ಲ. ಆದ್ದರಿಂದ ಎಲ್ಲಿ ವಸತಿ ಸೌಕರ್ಯ ಬೇಕಾಗುತ್ತದೆ? ಆ ವಸತಿ ಸೌಕರ್ಯ ಇಲ್ಲದೇ ಅವರು ವಾಸ ಮಾಡಲು ಆಗುತ್ತಿಲ್ಲ. ಅಂತಹ ಕಡೆಗೆ ಕನಿಷ್ಟ ಪ್ರಮಾಣದ ಒಂದು ಕಾರ್ಯಕ್ರಮವನ್ನು ರೂಪಿಸಬೇಕು.

ರೂಪಿಸಿ ಎಲ್ಲೆಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಉಪಾಧ್ಯಾಯರು ಕಡ್ಡಾಯವಾಗಿ ವಾಸ ಮಾಡುವುದಕ್ಕೆ ಅವರಿಗೆ ಬೇಕಾದಂತಹ ವಸತಿಯನ್ನು ಕೊಡುವಂತಹ ಕಾರ್ಯಕ್ರಮವನ್ನು ರೂಪಿಸಬೇಕು. ಈಗ ಏನಾಗಿದೆ ಎಂದರೆ ಈ ಪ್ರಯತ್ನವನ್ನೇ ಮಾಡದೇ ವ್ಯವಸ್ಥೆ ಹೇಗೆ ಬರುತ್ತದೆ. ನಾನು ಹೋದ ಸಾರಿ ಕಂದಾಯ ಇಲಾಖೆಯ ಮೇಲೆ ಮಾತನಾಡುವಾಗ ಹೇಳಿದೆ ಒಬ್ಬ ವಿಲೇಜ್ ಅಕೌಂಟೆಂಟ್‌ನ್ನು ಆ ಗ್ರಾಮದಲ್ಲಿ ವಾಸ ಮಾಡುವಂತಹ ವ್ಯವಸ್ಥೆ ಮಾಡು. ಹುಡ್ಕೋದಿಂದ ನೆರವು ಕೊಡುತ್ತಾರೆ. ಪಡೆದು, ಮಾಡಿರಿ ಎಂದರೆ ಏನೂ ಆಗಲಿಲ್ಲ. ಈ ಕಿವಿಯಿಂದ ಕೇಳುವುದು, ಆ ಕಿವಿಯಿಂದ ಬಿಡುವುದು. ನಾವೆಲ್ಲಾ ಇಲ್ಲಿ ಹೇಳುವುದು ಅರಣ್ಯ ರೋಧನವಾಗಿ ಏನೂ ಪ್ರಯೋಜನ ಇಲ್ಲ. ಅದಕ್ಕೋಸ್ಕರ ನಾನು ಇವತ್ತು ಮಾನ್ಯ ಗೋವಿಂದೇ ಗೌಡರಿಗೆ ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಈಗ ಹೇಳುವ ಪ್ರಕಾರ ಗುಣಮಟ್ಟದ ವಿದ್ಯಾಭ್ಯಾಸ ನಮ್ಮ ಮಕ್ಕಳಿಗೂ ಬರಬೇಕು ಎನ್ನುವುದಾದರೆ ಇವತ್ತು ಆ ಉಪಾಧ್ಯಾಯರುಗಳು ಅಲ್ಲಿ ಕಡ್ಡಾಯವಾಗಿ ವಾಸ ಮಾಡಲೇ ಬೇಕು. ಕಡ್ಡಾಯವಾಗಿ ವಾಸ ಮಾಡಬೇಕು ಎಂದು ಹೇಳುವಂತಹ ಕಾನೂನನ್ನು ತಂದಾಗ ಆ ಮಾನವೀಯತೆಯ ದೃಷ್ಟಿಯಿಂದ ಕೆಲವು ವ್ಯವಸ್ಥೆಗಳನ್ನು ಮಾಡಬೇಕಲ್ಲ. ಅದಕ್ಕೆ ಪರ್ಯಾಯವಾಗಿ ಮಾಡಬೇಕು. 50 ವರ್ಷ ಸ್ವಾತಂತ್ರ್ಯವನ್ನು ಕಳೆದು ಬಿಟ್ಟಿದ್ದೇವೆ. ಇವತ್ತು 51ನೆಯ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಈ ವ್ಯವಸ್ಥೆಗೆ ಹೋಗಬೇಕಾದರೆ ನಾವು ಹೊಸ ಭೂಮಿಕೆಯನ್ನು ಸಿದ್ಧ ಮಾಡಿಕೊಂಡು ಹೋಗದೇ ಇದ್ದರೆ ಸಮಾಜ ಕೂಡ ನಮ್ಮನ್ನು ಕ್ಷಮಿಸುವುದಿಲ್ಲ, ಜನರೂ ಕೂಡ ಕ್ಷಮಿಸುವುದಿಲ್ಲ. ಅದಕ್ಕೋಸ್ಕರವಾಗಿ ತಾವು ಒಂದು ಕಾರ್ಯಕ್ರಮವನ್ನು ರೂಪಿಸಿ ಬೇರೆ ಬೇರೆ ಸಂಸ್ಥೆಗಳಿಂದ, ಬ್ಯಾಂಕುಗಳಿಂದ ಸಾಲವನ್ನು ಪಡೆದುಕೊಳ್ಳಿರಿ. ಏಕೆಂದರೆ ಅವರ ಸಂಬಳದಿಂದ ನೀವು ವಾಪಸ್ ತೆಗೆದುಕೊಳ್ಳುತ್ತೀರಿ. ಅವರಿಗೇನೂ ಪುಕ್ಕಟೆ ಕೊಡುವುದಿಲ್ಲ. ಅವರ ಸಂಬಳದಲ್ಲಿ ಡಿಡಕ್ಷನ್ ಮಾಡಿಕೊಳ್ಳುತ್ತೀರಿ. ಆದ್ದರಿಂದ ದಯವಿಟ್ಟು ಈ ವರ್ಷ ನೀವು 25 ಸಾವಿರ ಮನೆಗಳನ್ನು ಕಟ್ಟಿ. ಪ್ರಾರಂಭ ಮಾಡಲು 40 ಕೋಟಿ ಅಥವಾ 50 ಕೋಟಿ ರೂಪಾಯಿಗಳು ಬೇಕಾಗಬಹುದು. ಈ ವರ್ಷ 25 ಸಾವಿರ ಮನೆಗಳನ್ನು ಕಟ್ಟಿ. ಮೊದಲು ಬಹಳ ದೂರದಲ್ಲಿರತಕ್ಕದ್ದು, ಮೂಲೆ ಮೂಲೆಯಲ್ಲಿ ಅಲ್ಲಿಗೆ ಹೋಗಲು ಅವಕಾಶ ಇಲ್ಲದೇ ಇರತಕ್ಕಂಥಹ ಕಡೆಗಳಲ್ಲಿ ಕನಿಷ್ಠ 25 ಸಾವಿರ ಮನೆಗಳನ್ನು ಕಟ್ಟತಕ್ಕಂಥ ಯೋಜನೆಯನ್ನು ಸಿದ್ಧಪಡಿಸಿ. ಕಾರ್ಯಕ್ರಮವನ್ನು ಮಾಡಿ, ಅದಕ್ಕೆ ಹಣವನ್ನು ಹುಡ್ಕೋದಿಂದ ಪಡೆದುಕೊಳ್ಳಿರಿ. ಹುಡ್ಕೋದಿಂದ ಟೀಚರ್ಸ್ ಕ್ವಾರ್ಟರ್ಸ್ ಕಟ್ಟುವುದಕ್ಕೋಸ್ಕರ ಹಣ ಕೊಡುತ್ತಾರೆ. ಇವತ್ತು ಅಧ್ಯಕ್ಷರು ಇದ್ದಾರೆ. ಅವರು ಹಿಂದೆ ಕೆಲಸ ಮಾಡಿದವರು. ಅವರಿಗೆ ಸಂಪೂರ್ಣವಾದ ವಿಚಾರ ಗೊತ್ತಿದೆ. ಅವರು ವಿಶೇಷವಾಗಿ ಉಪಾಧ್ಯಾಯರ ವಸತಿ ಸೌಕರ್ಯಕ್ಕೋಸ್ಕರ ಸಹಾಯ ಮಾಡುತ್ತಾರೆ. ದಯವಿಟ್ಟು ನಾಳೆ ಕುಳಿತುಕೊಂಡು ಸಂಬಂಧಪಟ್ಟವರ ಜೊತೆಗೆ ಒಂದು ಯೋಜನೆ ಸಿದ್ಧ ಮಾಡಿಕೊಂಡು ನೀವು ಹುಡ್ಕೋಗೆ ಹೋಗಿರಿ. ಕೆಲಸ ಮಾಡಿದರೆ ಆಗ ಉಪಾಧ್ಯಾಯರು ಇರುತ್ತಾರೆ. ಒಳ್ಳೆಯ ಸೌಕರ್ಯವೂ ಸಿಗುತ್ತದೆ. ಇದೊಂದು ಮಾತು. ಮುಂಚೆ ಹೇಳಿದ ಹಾಗೆ ಈ ಕಡ್ಡಾಯ ಶಿಕ್ಷಣವನ್ನು ತರತಕ್ಕ ಸಂದರ್ಭದಲ್ಲಿ ನಾಳೆ ಶಿಕ್ಷೆಗೆ ಗುರಿಯಾಗಬೇಕಾದಂತಹ ತಂದೆ ತಾಯಿಗಳು ಇದ್ದಾರೆ, ಕೂಲಿಗೆ ಹೋಗತಕ್ಕಂಥವರು, ಬಡವರಿಗೆ. ಎಕೆಂದರೆ ಮನೆ ಕದ ಹಾಕಿಕೊಂಡು ಮಕ್ಕಳನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗಬೇಕು. ಇಲ್ಲ ಒಂದು ಸಣ್ಣ ಮಗು ಇರುತ್ತದೆ. ಅದನ್ನು

ಆಡಿಸುವುದಕ್ಕೆ ಇನ್ನೊಂದು ಹಿರಿಯ ಮಗುವನ್ನು ಅಲ್ಲಿ ಬಿಟ್ಟು ಹೋಗಬೇಕಾಗುತ್ತದೆ. ಏಕೆಂದರೆ ಚೈಲ್ಡ್ ಕೇರ್ ವ್ಯವಸ್ಥೆ ನಮ್ಮಲ್ಲಿ ಇಲ್ಲದೇ ಇರುವುದರಿಂದ, ಆ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದು. ಪ್ರತಿ ಒಂದು ಅಂಗನವಾಡಿಗಳು ಇದ್ದಾವೆ ಇವತ್ತು. ಆ ಅಂಗನವಾಡಿಗಳು ಇದ್ದಲ್ಲಿ ಮಕ್ಕಳನ್ನು ಇಟ್ಟು ಶಿಕ್ಷಣ ಕೊಡಿಸಬಹುದು. ಸ್ವಲ್ಪ ಹೆಚ್ಚು ಹಣ ಖರ್ಚಾಗಬಹುದು. ಹೆಚ್ಚು ಹಣ ಕೊಡಬಹುದು. ಆದರೆ ಈ ವ್ಯವಸ್ಥೆ ಬೇಕು ಏಕೆಂದರೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ತಕ್ಷಣ ಯಾವ ತಂದೆ ತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲವೋ ಅವರಿಗೆ ಶಿಕ್ಷೆ ಕೊಡಬೇಕಾಗುತ್ತದೆ. ಆ ಶಿಕ್ಷೆ ಕೊಡತಕ್ಕ ಸಂದರ್ಭದಲ್ಲಿ ನಾವೂ ಮನುಷ್ಯರಾಗಿ ಈ ಸಮಾಜದ ಒಂದು ಭಾಗವಾಗಿ ಆ ಬಡವರಿಗೆ ಬರಬಹುದಾದಂತಹ ಸಾಧಕ ಭಾದಕಗಳನ್ನು ಆಲೋಚನೆ ಮಾಡಬೇಕಾದಂತಹ ಒಂದು ಜವಾಬ್ದಾರಿ ಇದೆ. ಅದಕ್ಕೋಸ್ಕರವಾಗಿ ಜೊತೆ ಜೊತೆಗೆ ಅವರ ಕಷ್ಟಕ್ಕೆ, ಅವರು ಯಾವುದೇ ಕಾರಣದಿಂದ ಶಿಕ್ಷೆಗೆ ಒಳಗಾಗದೇ ಇರುವಂತಹ ರೀತಿಯಲ್ಲಿ ಎಲ್ಲಿ ಮಕ್ಕಳು ಇರುತ್ತಾರೆ, ಅಂತಹ ಕಡೆಗೆ ಶಿಕ್ಷಣ ಕೊಡಬೇಕು. ಉದಾಹರಣೆಗೆ ಯಾವುದೋ ಒಬ್ಬ ಗುತ್ತಿಗೆದಾರ ಹತ್ತು ಜನರನ್ನು ಕರೆದುಕೊಂಡು ಹೋಗಿ ಕೆಲಸ ಮಾಡಿಸುತ್ತಿರುತ್ತಾನೆ. ಅವನಿಗೆ ಕಡ್ಡಾಯ ಹಾಕಬೇಕಾಗುತ್ತದೆ. ನೀವು ಉಪಾಧ್ಯಾಯರನ್ನು ಇಟ್ಟುಕೊಂಡು ಮಕ್ಕಳಿಗೆ ಅಕ್ಷರ ಹೇಳಿಕೊಡು ಎಂದು ಹೇಳಬೇಕಾಗುತ್ತದೆ. ಇವತ್ತು ಯಾರದ್ದಾದರೂ ಗದ್ದೆಗೆ ಕೂಲಿಗೆ ಹೋಗುತ್ತಾರೆ. ಜಮೀನಿನ ಕೂಲಿಗೆ ಕರೆದುಕೊಂಡಿರತಕ್ಕ ಮನುಷ್ಯನಿಗೆ ಹೇಳಬೇಕಾಗುತ್ತದೆ. ನೀವು ಕೂಲಿಗೆ ಕರೆದುಕೊಂಡು ಹೋಗಿ, ಮಕ್ಕಳು ಅಲ್ಲಿಗೆ ಬಂದರೆ ವಿದ್ಯಾಭ್ಯಾಸ ಹೇಳಬೇಕಾಗುತ್ತದೆ. ಇದಕ್ಕೊಂದು ಸಮಗ್ರವಾದಂತಹ ಕಾರ್ಯಕ್ರಮವನ್ನು ರೂಪಿಸಿ ಈ ವರ್ಷದಿಂದಲೇ ಕಡ್ಡಾಯವಾದಂತಹ ಶಿಕ್ಷಣವನ್ನು ತರತಕ್ಕಂಥಹ ಕೆಲಸವನ್ನು ತಾವು ಮಾಡಲೇ ಬೇಕಾಗುತ್ತದೆ. ಇಲ್ಲದೇ ಹೋದರೆ ಏನಾಗುತ್ತದೆ? ನೋಡಿ. ಈ ಬಾಲ ಕಾರ್ಮಿಕರ ಪದ್ಧತಿಯನ್ನು ನಾವು ನಿಷೇಧ ಮಾಡಿ ಕಾನೂನನ್ನು ತಂದಿದ್ದೇವೆ. ಅದೂ ಕೂಡ ರಾಜ್ಯಾಂಗದಲ್ಲಿರತಕ್ಕದ್ದು; ಇವತ್ತು ಸುಪ್ರಿಂ ಕೋರ್ಟಿನವರು ತೀರ್ಮಾನ ಕೊಟ್ಟಾದ ಮೇಲೆ ನಾವೆಲ್ಲಾ ಹುಡುಕುತ್ತಿದ್ದೇವೆ. ಸೆನ್ಸಸ್ ಮಾಡಿ ಅದನ್ನು ಮಾಡಿ, ಇದನ್ನು ಮಾಡಿ, ಎಲ್ಲಿದ್ದಾರೋ ಏನೋ ಎಂದು ಹೇಳುತ್ತಿದ್ದೇವೆ. ಇನ್ನೂ ಒಂದು ವರ್ಷವಾದರೂ ಕೂಡ ಸೆನ್ಸಸ್ ಮಾಡಿ ಐಡೆಂಟಿಫಿಕೇಷನ್ ಕಾರ್ಡ್ ಕೊಟ್ಟಿಲ್ಲ. ನಾವು ಏಕೆ ಕೋರ್ಟಿನಿಂದ ಹೇಳಿಸಿಕೊಳ್ಳಬೇಕು? ಕಾರ್ಯಾಂಗ ತನ್ನ ಕರ್ತವ್ಯವನ್ನು ನಿರ್ವಹಿಸಿದರೆ ನ್ಯಾಯಾಂಗ ನಮ್ಮನ್ನು ಏಕೆ ತಟ್ಟಿ ಎಬ್ಬಿಸಬೇಕು; ಎಚ್ಚರಿಸಬೇಕು? ಅದಕ್ಕೆ ಏಕೆ ಅವಕಾಶ ಕೊಡಬೇಕು? ಸ್ವಾತಂತ್ರ್ಯ ಬಂದು ಇವತ್ತಿಗೆ 50 ವರ್ಷ ಆಯಿತು. ನಮಗೆ ಬುದ್ಧಿ ಬಂದಿದೆ, ವಿಚಾರ ಬಂದಿದೆ, ಪ್ರಜ್ಞೆ ಬಂದಿದೆ, ಆಳವಾಗಿ ಅಭ್ಯಾಸ ಮಾಡಿದ್ದೇವೆ, ಅನುಭವ ಬಂದಿದೆ. ಇವತ್ತು ನಾವು ಕೆಲಸ ಮಾಡದಿದ್ದರೆ ನ್ಯಾಯಾಂಗ ನಮ್ಮನ್ನು ಎಚ್ಚರಿಸುತ್ತದೆ. ಶಾಸಕಾಂಗ ತಪ್ಪು ಮಾಡಿದ್ದರೆ ನ್ಯಾಯಾಂಗ ಎಚ್ಚರಿಸುತ್ತದೆ. ಆದುದರಿಂದ ಇವತ್ತು ಕಾರ್ಯಾಂಗದ ತಪ್ಪಿನಿಂದಾಗಿ ನ್ಯಾಯಾಂಗ ಅನಾವಶ್ಯವಾಗಿ ಅಥವಾ ಅನಿವಾರ್ಯವಾಗಿ ಪ್ರವೇಶ ಮಾಡತಕ್ಕಂತಹ ಸನ್ನಿವೇಶ ಮತ್ತು ಸಂದರ್ಭವನ್ನು ಉಂಟು ಮಾಡಿದ್ದರೆ ಇದು ಕಾರ್ಯಾಂಗದ ವಿಫಲತೆ ಎಂದು ಹೇಳಬೇಕಾಗುತ್ತದೆ. ಆದುದರಿಂದ ಇದು ನಾಳೆ ಬಂದೇ ಬರುತ್ತದೆ. ಅದಕ್ಕಾಗಿ ಇವತ್ತು ಕಡ್ಡಾಯ ಶಿಕ್ಷಣವನ್ನು ಕೊಡಿ. ಇವತ್ತು ಹೇಗೆ

Directive Principles of the State policy ಯೊಳಗೆ ನಾವು ಹೇಗೆ ಎಲ್ಲಾ ತತ್ವಗಳನ್ನು ಅಳವಡಿಸಿಕೊಂಡಿದ್ದೇವೋ ಅದರಲ್ಲಿ ಕಡ್ಡಾಯ ಶಿಕ್ಷಣ ಕೂಡ ಒಂದು. ಈ ಕಡ್ಡಾಯ ಶಿಕ್ಷಣವನ್ನು

ನೀವು ಜಾರಿಗೆ ತರದೆ ಹೋದರೆ ನಾಳೆ ದಿವಸ ನ್ಯಾಯಾಂಗ ಕೂಡ ಪ್ರವೇಶ ಮಾಡಿ ನಿಮಗೆ ತಾಖೀತು ಮಾಡಬಹುದು. ಆಗ ಜಗತ್ತಿನ ಮುಂದೆ ನಿಮಗೆ ತಲೆ ತಗ್ಗಿಸುವಂತಹ ಪ್ರಸಂಗ ಬರಬಹುದು. ಅದಕ್ಕೆ ತಾವು ಅವಕಾಶ ಕೊಡಬೇಡಿ.

Sri H. Shivappa:- Directive Principles of the State Policy is nonjusticiable.

Sri Kagodu Thimmappa:- It is almost like Fundamental Rights now.

ಹೀಗಿರುವಾಗ ನೀವು ಏಕೆ ಹೋಗುತ್ತಿರಿ? ಬಾಲ ಕಾರ್ಮಿಕರ ವಿಚಾರದಲ್ಲಿ ಏಕೆ ತಲೆ ತಗ್ಗಿಸುತ್ತಿದ್ದೀರಿ, ಮಿನಿಮಂ ವೇಜಸ್‌ನಲ್ಲಿ ಏಕೆ ತಲೆ ತಗ್ಗಿಸುತ್ತಿದ್ದೀರಿ, ಬೋನಸ್ ವಿಚಾರದಲ್ಲಿ ಏಕೆ ತಲೆ ತಗ್ಗಿಸುತ್ತಿದ್ದೀರಿ, ಸೋಷಿಯಲ್ ಸೆಕ್ಯೂರಿಟಿ ವಿಚಾರದಲ್ಲಿ ಏಕೆ ತಲೆ ತಗ್ಗಿಸುತ್ತೀರಿ? ಅಸ್ಪೃಷ್ಯತೆ ಯಾವ ಆ್ಯಕ್ಟ್ ಪ್ರಕಾರ ಬಂದಿದೆ? ಈ ಎಲ್ಲಾ ಕಾನೂನುಗಳು ಆ ಪ್ರಿನ್ಸಿಪಲ್ ಕೆಳಗೆ ಮಾಡಿರುವಂತಹ ಕಾನೂನುಗಳು. ಆದುದರಿಂದ ಇವತ್ತಿನಿಂದ ದಯವಿಟ್ಟು ನೀವು ಜಾರಿಗೆ ತರುವುದರ ಮುಖಾಂತರ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಪ್ರಯತ್ನವಾಗಿ ಬೇರೆಯವರಿಗೆ ಮಾದರಿ ಆಗುವಂತಹ ಕೆಲಸ ತಮ್ಮ ಸರ್ಕಾರದಲ್ಲಿ ಆಗಬೇಕು ಎಂಬ ವಿಷಯವನ್ನು ನಾನು ಶ್ರೀ ಗೋವಿಂದೇ ಗೌಡರಿಗೆ ಹೇಳುತ್ತೇನೆ. ಆದಕಾರಣ ಕಡ್ಡಾಯ ಶಿಕ್ಷಣ ಜಾರಿಗೆ ತರುವುದರಲ್ಲಿ ವಿಳಂಬ ಮಾಡಬೇಡಿ. ವಿಳಂಬ ಮಾಡಿದರೆ ನೀವು ಸಮಾಜದ ದೂಷಣೆಗೆ ಒಳಗಾಗುತ್ತೀರಿ, ಅದಕ್ಕೆ ತಾವು ಭಾಗಿ ಆಗಬಾರದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆರೋಗ್ಯದ ವಿಚಾರವಾಗಿ ಹೇಳಬೇಕು ಎಂದರೆ, ಈ ಸಮಯದಲ್ಲಿ ಶ್ರೀ ಮಹದೇವಪ್ಪನವರು ಇಲ್ಲ, ಆರೋಗ್ಯದ ವ್ಯವಸ್ಥೆ ನಾಗರೀಕನಿಗೆ ಸಿಗಬೇಕಾದ ಕನಿಷ್ಟ ಕಾರ್ಯಕ್ರಮ ಅಲ್ಲವೇ? ಇವತ್ತು ಹೊಸದಾಗಿ ಆಸ್ಪತ್ರೆ ಕಟ್ಟಬೇಕು ಎಂದು ನಾನು ಹೇಳುವುದಿಲ್ಲ. ಇರುವ ಆಸ್ಪತ್ರೆಗೆ, ಅಂದರೆ ಇವತ್ತಿನವರೆವಿಗೂ ನಮ್ಮಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸುಮಾರು 1,509 ಇದ್ದರೆ, ಪ್ರಾಥಮಿಕ ಆರೋಗ್ಯ ಘಟಕಗಳು 596 ಇವೆ. ಸಾರ್ವಜನಿಕ ಆಸ್ಪತ್ರೆ 176 ಇದೆ. ಈ ವಿಚಾರವನ್ನು ಕಳೆದ ರಾಜ್ಯಪಾಲರ ಭಾಷಣದಲ್ಲಿ ಹೇಳಿದರು. ವೈದ್ಯಕೀಯ ಹುದ್ದೆಯಲ್ಲಿ ಪ್ರಸ್ತುತ 600 ಹುದ್ದೆಗಳು ಖಾಲಿ ಇವೆ. ಪ್ಯಾರಾ ಮೆಡಿಕಲ್ ಸ್ಟ್ಯಾಪ್ ಎಂದು ನಾವು ಏನು ಹೇಳುತ್ತೇವೆ, ಅದರಲ್ಲಿ ಸುಮಾರು 4,500 ಹುದ್ದೆಗಳು ಖಾಲಿ ಇವೆ, ಅಂದರೆ ಅದರಲ್ಲಿ ಕಾಂಪೌಂಡರ್, ಸ್ವೀಪರ್ ಇನ್ನು ಇತ್ಯಾದಿಗಳು ಖಾಲಿ ಇವೆ. ಕಳೆದ ವರ್ಷದಲ್ಲೂ ಸಹ ಇಷ್ಟೇ ಇತ್ತು. ಈ ಒಂದು ವರ್ಷದಲ್ಲಿ ಕನಿಷ್ಠ ಸೌಕರ್ಯದ ಕಾರ್ಯಕ್ರಮವನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ ಇವರು ಮಾಡಿದ ಸಾಧನೆ ಏನು? ಇವರ ಸಾಧನೆ ಸೊನ್ನೆ ಎಂದು ಹೇಳಬಹುದೇ? ಇದರಿಂದ ಜನ ಸಿಟ್ಟಾಗುತ್ತಾರೆ ಜನ ಹೊಡೆಯುವುದಕ್ಕೆ ಬರುತ್ತಾರೆ; ಏನ್ರಿ ಊರಿನಲ್ಲಿ ಒಂದು ಆಸ್ಪತ್ರೆ ಇದೆ, ಅದರಲ್ಲಿ ಒಬ್ಬ ವೈದ್ಯ ಇಲ್ಲ, ಒಬ್ಬ ಕಾಂಪೌಂಡರ್ ಇಲ್ಲ, ಒಬ್ಬ ಕಸ ಗುಡಿಸುವನು ಇಲ್ಲ, ಎಂದು ಹೇಳಿದರೆ, ಜನರಿಗೆ ನಾವು ಉತ್ತರ ಏನು ಹೇಳಬೇಕು ಶಿವಪ್ಪನವರೇ. ಇಲ್ಲಿ ಬೇಡಿಕೆ ಹೆಚ್ಚಾಗಿಲ್ಲ, ಹೆಚ್ಚಾಗಿದ್ದರೆ ಜನ ನಿಮ್ಮ ಕುತ್ತಿಗೆ ಹಿಸುಕುತ್ತಿದ್ದರು. ಇರುವ ವ್ಯವಸ್ಥೆಗೆ ಬೇಕಾದಂತಹ ಅನುಕೂಲ ಮಾಡಿ ಕೊಡಿ. ನೀವೇನೂ ಹೊಸದಾಗಿ ಪೋಸ್ಟ್ ಕ್ರಿಯೇಟ್ ಮಾಡಬೇಕಾಗಿಲ್ಲ, ಅಥವಾ ಹೊಸದಾಗಿ ಏನು ಆಸ್ಪತ್ರೆ ಕಟ್ಟಬೇಕಾಗಿಲ್ಲ, ಇರುವಂತಹ

ಆಸ್ಪತ್ರೆ, ಕಟ್ಟಿದಂತಹ ಆಸ್ಪತ್ರೆಗೆ ಪೋಸ್ಟ್ ಕ್ರಿಯೇಟ್ ಮಾಡಾಗಿದೆ. ಅದಕ್ಕೆ ನೇಮಕ ಮಾಡುವುದಕ್ಕೆ ಏನು ತೊಂದರೆ ಆಗಿದೆ ಮಾನ್ಯ ಶ್ರೀ ಗೋವಿಂದೇ ಗೌಡರೇ? ನಿಮ್ಮ ನಿಯಮಾವಳಿಯನ್ನು ಯಾವ ಮನುಷ್ಯರು ಮಾಡಿದ್ದುದು? ಯಾವ ಸರ್ಕಾರ ಮಾಡಿದ್ದುದು? ಆ ನಿಯಮಾವಳಿಯನ್ನು ಬದಲಾವಣೆ ಮಾಡಿ ನೇಮಕ ಮಾಡುವುದಕ್ಕೆ ಆಗುವುದಿಲ್ಲವೇ? ನಿಯಮಾವಳಿ ಏನು ಮೇಡ್ ಅಥವಾ ಮ್ಯಾನ್ ಮೇಡಾ? ಇದನ್ನು ಮಾಡುವುದಕ್ಕೆ ಇಚ್ಛೆ ಬೇಕು, ಇಚ್ಛಾ ಶಕ್ತಿ ಇದ್ದರೆ ಇದನ್ನೆಲ್ಲಾ ಮಾಡಬಹುದಾಗಿತ್ತು. ಇಚ್ಛಾ ಶಕ್ತಿ ಇಲ್ಲದೇ ಇದ್ದರೆ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಹಳ್ಳಿಯಲ್ಲಿ ಇರುವಂತಹ, ಗ್ರಾಮಾಂತರ ಪ್ರದೇಶದಲ್ಲಿ ಇರುವಂತಹ ಜನರಿಗೆ, ಏನು ಆರೋಗ್ಯ ಸೇವೆ ಕೊಡೋಣ ಸ್ವಾಮಿ? ಇವತ್ತಿನ ದಿವಸ ಆಸ್ಪತ್ರೆಯಲ್ಲಿ ಒಂದು ಮಾತ್ರೆ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಔಷಧಿ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಈಗಿರುವಾಗ 650 ಆಸ್ಪತ್ರೆಗಳ ಕಥೆ ಏನಾಗಿರಬೇಕು? ದಯವಿಟ್ಟು ತಾವು ಇದರ ಬಗ್ಗೆ ಹೇಳಿ ಸ್ವಾಮಿ. ನೀವೇನಾದರೂ ಇಂತಹ ಕೆಲಸ ಮಾಡಿದ್ದೇವೆ ಎಂದು ಸಾಧನೆ ಹೇಳಿದ್ದರೆ, ಆಗ ಜನರ ಮುಂದೆ ಹೇಳುತ್ತಿದ್ದರು, ನಿಮ್ಮ ಊರಿಗೆ ಡಾಕ್ಟರನ್ನು ಕಳುಹಿಸಿದ್ದೇವೆ, ಔಷಧಿ ಕೊಟ್ಟಿದ್ದೇವೆ ಚಲೋ ಆಯಿತಲ್ಲೋ ತಮ್ಮ ಎಂದು ಹೇಳಿದ್ದರೆ, ಊರಿನ ಜನ ಹೌದು ಇವತ್ತಿನಿಂದ ನಮ್ಮ ಊರಿಗೆ ಡಾಕ್ಟರ್ ಬಂದಿದ್ದಾರೆ, ಔಷಧಿ ಕೊಡುತ್ತಾ ಇದ್ದಾರೆ ಎಂದು ಮೆಚ್ಚಿದ್ದರೆ, ನಿಮಗೆ ನಾಲ್ಕು ಓಟು ಜಾಸ್ತಿ ಸಿಗುತ್ತಿತ್ತು. ಓಟು ಕೊಡಲಿಲ್ಲ ಎಂದು, ತಪ್ಪನ್ನು ಸರಿಪಡಿಸಿಕೊಳ್ಳುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ಇಂತಹ ಕೆಲಸ ಮಾಡುವುದರಲ್ಲಿ ನಾವು ವಿಫಲರಾಗಿದ್ದೇವೆ ಎಂದು ಹೇಳಬೇಕಾಗಿತ್ತು. ಸತ್ಯವಾದಂತಹ ಮಾತನ್ನು ಹೇಳಬೇಕಾಗಿತ್ತು. ಮಾನ್ಯ ಶ್ರೀ ಗೋವಿಂದೇಗೌಡರೇ, ಈ ಕೆಲಸವನ್ನು ಈಗಲಾದರೂ ಮಾಡಿ. ಈ ಕೆಲಸವನ್ನು ಮಾಡುವುದಕ್ಕೆ ಮೂರು ತಿಂಗಳು ಸಾಕು, ಇದಕ್ಕೇನೂ ವರ್ಷ ಬೇಡ. ಇವತ್ತಿನ ದಿವಸ ಎಷ್ಟು ಜನ ಡಾಕ್ಟರ್ ಇದ್ದಾರೆ ಗೊತ್ತಿದೆಯೇ? ಉದ್ಯೋಗ ಇಲ್ಲದೆ ಇರುವಂತಹ ಡಾಕ್ಟರ್ಸ್ ಎಷ್ಟು ಜನ ಇದ್ದಾರೆ ಎಂಬ ವಿಷಯ ಗೊತ್ತಿದೆಯೇ? ಉದ್ಯೋಗ ಇಲ್ಲದೆ ಇರುವಂತಹ ಪ್ಯಾರಾ ಮಿಲಿಟರಿ ಸ್ಟ್ಯಾಫ್ ಎಷ್ಟು ಜನ ಇದ್ದಾರೆ ಎಂಬ ವಿಷಯ ಗೊತ್ತಿದೆಯೇ? ಇದಕ್ಕೆ ವರ್ಷ ಬೇಕಾ? ನೀವು ಹೇಗೆ ನೇಮಕ ಮಾಡಿಸುತ್ತಿದ್ದೀರಾ, ಆ ವ್ಯವಸ್ಥೆ ಮಾಡುವುದಕ್ಕೆ ಬರುವುದಿಲ್ಲವೇ? ಜಿಲ್ಲಾ ಮಟ್ಟದಲ್ಲಿ ಪ್ಯಾರಾ ಮೆಡಿಕಲ್ ನೇಮಕ ಮಾಡುವುದಕ್ಕೆ ಬರುವುದಿಲ್ಲವೇ? ಡಾಕ್ಟರ್ಸ್ ನೇಮಕ ಮಾಡುವುದಕ್ಕೆ ಬರುವುದಿಲ್ಲವೇ? ಅಲ್ಲಿ ಒಂದು ಕಥೆ ಹೇಳಿದ್ದೀರಿ, ಅರ್ಜಿ ಸ್ವೀಕಾರ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ ಎಂದು. ಎಲ್ಲಿ ಕೊಟ್ಟಿದ್ದಾರೆ? ಅರ್ಜಿಸ್ವೀಕಾರ ಮಾಡುವುದಕ್ಕೆ. ಪುನಃ ಇಲ್ಲಿಗೆ ಬರಬೇಕಂತೆ. ಏಕೆಂದರೆ ಗೆಜೆಟೆಡ್ ಅಫೀಸರ್‌ನಿಂದ ಚೀಫ್ ಸೆಕ್ರೆಟರಿ ರುಜು ಆಗಬೇಕಂತೆ. ಅದು ಒಂದು ನಿಯಮ. ಅದು ಯಾವ ದೊಡ್ಡ ನಿಯಮ. ಜನರಿಗೆ ಬೇಕಾದಂತದ್ದನ್ನು ಕೊಡುವುದಕ್ಕೆ ನಿಯಮ ಅಡ್ಡ ಬಂದರೆ, ಆ ನಿಯಮವನ್ನು ತೆಗೆದುಹಾಕಿ, ಬೇರೆ ನಿಯಮವನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲವೇ? ನಾವು ಇನ್ನೂ ಇರುಸವಿಕೆಗಳನ್ನು ಬದಲಾವಣೆ ಮಾಡಿಕೊಳ್ಳಲಿಲ್ಲ ಎಂದರೆ ಜನರ ಆಚಾರಕ್ಕೆ ತಕ್ಕ ಹಾಗೆ ನಾವು ಹೇಗೆ ನಿಲ್ಲುತ್ತೇವೆ? ಜನ ನಮ್ಮಿಂದ ಏನು ನಿರೀಕ್ಷಣೆ ಮಾಡಿದ್ದಾರೆ? ಏನು ಬಿಳಿ ಆನೇನಾ ಇಳಿಸಿ ಎಂದು ಕೇಳಿದ್ದಾರಾ? ಮನೆ ಬಾಗಿಲಿಗೆ ಒಂದು ಸಣ್ಣ ಶಿಕ್ಷಣ, ಮನೆ ಬಾಗಿಲಿಗೆ ಒಂದು ಸಣ್ಣ ಆರೋಗ್ಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ. ಇರುವಂತಹ ವ್ಯವಸ್ಥೆಯಲ್ಲಿ ಅದನ್ನೂ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ, ಇದಕ್ಕಿಂತ ತಪ್ಪು ಇನ್ನೇನಿದೆ ನಮ್ಮದು? ಇನ್ನು ಔಷಧಿ ವಿಚಾರವಾಗಿ ಹೇಳಬೇಕು ಎಂದರೆ, ಆರೋಗ್ಯ

ಕೇಂದ್ರಕ್ಕೆ, ಘಟಕಕ್ಕೆ ಇವುಗಳಿಗೆ ಔಷಧಿಗಳನ್ನು ಕೊಡುವ ಪ್ರಮಾಣವನ್ನು ಜಾಸ್ತಿ ಕೊಡುವುದನ್ನು 1993-94ನೇ ಸಾಲಿನಲ್ಲಿ ಜಾಸ್ತಿ ಮಾಡಿದರು. ಅಂದರೆ ಇಲ್ಲಿಗೆ ಐದು ವರ್ಷವಾಯಿತು. ಅವತ್ತಿನ ದಿವಸ ಒಂದು ಇನ್‌ಜೆಕ್ಷನ್‌ಗೆ 10 ರೂಪಾಯಿ ಇದ್ದಿದ್ದು ಇವತ್ತು ಅದೇ ಇನ್‌ಜೆಕ್ಷನ್ ಬೆಲೆ 20 ರೂಪಾಯಿ ಆಗಿದೆ. ನಮ್ಮ ಡಾಕ್ಟರ್ ಇಲ್ಲೇ ಇದ್ದಾರೆ, ನೀವೇ ಹೇಳಿಬಿಡಿ ಸ್ವಾಮಿ. 1993-94ನೇ ಸಾಲಿನಲ್ಲಿ ಮೆಡಿಸನ್ ಕಾಸ್ಟ್ ಎಷ್ಟು ಇತ್ತು, ಎಕ್ಸ್‌ಕ್ಲೇಷನ್ ಎಷ್ಟು ಆಗಿದೆ ಎನ್ನುವುದನ್ನು ನೀವೇ ಹೇಳಿಬಿಡಿ. ಐದು ವರ್ಷಕ್ಕೆ ಶೇ. 10 ರಷ್ಟು ಜಾಸ್ತಿ ಆದರೆ, ಶೇ 50 ರಷ್ಟು ಜಾಸ್ತಿಯಾದಂತೆ ಅಲ್ಲವೇ ಸ್ವಾಮಿ? ಹತ್ತು ಸಾವಿರ ರೂಪಾಯಿ ಔಷಧಿ ಕೊಡತಕ್ಕಂತಹ ಆಸ್ಪತ್ರೆಗಳಿಗೆ, ಇವತ್ತು ಹದಿನೈದು ಸಾವಿರ ರೂಪಾಯಿಗಳ ಔಷಧಿ ಕೊಡಬೇಕು ಅಲ್ಲವೇ? ಹದಿನೈದು ಸಾವಿರ ಅಲ್ಲ, ಕೊಡುವ ಔಷಧಿನೇ ಕೊಡುತ್ತಾ ಇಲ್ಲ. 1997-98ನೇ ಸಾಲಿಗೆ ಕೊಡಬೇಕಾದಂತಹ ಔಷಧಿಯನ್ನು ಇವತ್ತಿನವರೆವಿಗೂ ಕೊಟ್ಟಿಲ್ಲ. ಎಸ್‌ಪಿಡಿ ರೇಟ್ ಕಾರಿಟ್ರ್ಯಾಕ್ಟ್‌ನ್ನು ಇವತ್ತಿನವರೆವಿಗೂ ಒಪ್ಪಿಗೆ ಕೊಟ್ಟಿಲ್ಲ, ಹೀಗಿರುವಾಗ ಅವರು ಹೇಗೆ ಸ್ಕೈ ಮಾಡುತ್ತಾರೆ? ಮತ್ತು ಅದಕ್ಕೆ ಬಜೆಟ್‌ನಲ್ಲಿ ಇಟ್ಟಂತಹ ಹಣ ಏನಾಯಿತು? ಅಂದರೆ ನಾವು ಏನು ನಡೆಸುತ್ತಾ ಇದ್ದೇವೆ ಬಜೆಟ್‌ಅನ್ನು ನಾವು ಮಾರ್ಚಿ 31ರೊಳಗೆ ಪಾಸ್ ಮಾಡುತ್ತೇವೆ ಅಥವಾ ಓಟ್ ಆನ್ ಅಕೌಂಟ್ ತೆಗೆದುಕೊಂಡರೆ 3 ತಿಂಗಳು ಪಾಸ್ ಮಾಡುತ್ತೇವೆ. 1998-99ನೇ ರೇಟ್ ಕಂಟ್ರಾಕ್ಟನ್ನು ಅಂದರೆ, ಮಾರ್ಚಿ ತಿಂಗಳಲ್ಲಿ ಮಾಡಿಕೊಂಡರೆ ಆಗುವುದಿಲ್ಲವೇ? ನಮ್ಮ ಇರಿಸವಿಕೆಗಳು ಇನ್ನೂ ಬದಲಾವಣೆ ಆಗಿಲ್ಲ. ಕೊಡುವ ಔಷಧಿ ಆದರೂ ಮಾರ್ಚಿ ತಿಂಗಳು ಬಂದರೂ ಇನ್ನೂ ಕೊಟ್ಟಿಲ್ಲ ಅಂದರೆ ನಮಗೆ ನಾಚಿಕೆ ಆಗುವುದು ಬೇಡವೇ, ಜನ ಏನು ಹೇಳುತ್ತಾರೆ? ಮೊನ್ನೆ ದಿವಸ ನಾನು ಸಂದರ್ಶನ ಸಮಿತಿಗೆ ಕರೆದಿದ್ದೆ. ನಮ್ಮ ಆಸ್ಪತ್ರೆ ಮುಂದೆ ನಿಲ್ಲುವ ಕಾರ್ ಡ್ರೈವರ್, ಟ್ಯಾಕ್ಸಿ ಡ್ರೈವರ್‌ಗಳು ಸಂದರ್ಶನ ಸಮಿತಿ ಸೇರುತ್ತದೆ ಎಂದು ತಿಳಿದು ಎಲ್ಲರೂ ಚೀಟಿಗಳನ್ನು ಹಿಡಿದುಕೊಂಡು ಬಂದರು. ಸಾರ್, ನೋಡಿ, ಎಲ್ಲಾ ವೈದ್ಯರು ಚೀಟಿಗಳನ್ನು ಕೊಡುತ್ತಾರೆ ಎಂದು ತೋರಿಸಿದರು. ಆ ಸಮಯದಲ್ಲಿ ಏಕೆ ಈ ರೀತಿ ಮಾಡುತ್ತೀರಾ ಎಂದು ಡಾಕ್ಟರ್ಸ್‌ನ ಕೇಳಿದರೆ, ಅವರು ಸಾರ್ ಈ ಔಷಧಿ ನಮ್ಮಲ್ಲಿ ಇಲ್ಲ ಎಂದು ಹೇಳುತ್ತಾರೆ. ಏಕೆಂದರೆ ರೇಟ್ ಕಾಂಟ್ರ್ಯಾಕ್ಟ್ ಅವರು ಒಪ್ಪದೆ ಹೋದರೆ ಅವರು ಏನು ಮಾಡುತ್ತಾರೆ.

ಏತಕ್ಕೆಂದರೆ ಇವತ್ತಿನವರೆಗೂ ನಮಗೆ ಔಷಧಿ ಬಂದಿಲ್ಲ. ಏನು ಮಾಡಬೇಕು ನಾವು? ಇದರಿಂದ ನಾವು ತಲೆತಗ್ಗಿಸಬೇಕಾ ಬೇಡವೇ? ಏನು ಸ್ವಾಮಿ ಸರ್ಕಾರದ ಆಸ್ಪತ್ರೆ ಎಂದು ನಾವು ಹೋದರೆ ಇಲ್ಲಿ ಬರೀ ಚೀಟಿ ಕೊಡುತ್ತಾರೆ, ನಾವು ಬಡವರು, ಡ್ರೈವರಿದ್ದೇವೆ ನಮಗೆ ಸಂಬಳ ಒಂದು ಸಾವಿರ ರೂ ಬರುತ್ತದೆ. ಮಕ್ಕಳಿಗೆ ಔಷಧಿ ಕೊಡುವುದಕ್ಕೆ ತಿಂಗಳಿಗೆ 200 300 ಖರ್ಚು ಮಾಡಲು ನಾನು ಎಲ್ಲಿ ಹೋಗಲಿ ಎಂದು ಕೇಳಿದರೆ ನಾವು ಏನು ಹೇಳಬೇಕು ಸ್ವಾಮಿ? ಇದರಿಂದ ಜನ ಸಿಟ್ಟಾಗುತ್ತಾರೋ ಅಥವಾ ಇವರನ್ನು ಮಂಗಳಾರತಿ ಮಾಡುತ್ತಾರೋ? ಅದಕ್ಕೇ ಮಂಗಳಾರತಿ ಮಾಡಿದ್ದಾರೆ. ನೀವ್ಯಾಕೆ ಸಿಟ್ಟಾಗಬೇಕು. ಎಲ್ಲೆಲ್ಲಿ ಸಾಮಾನ್ಯ ಜನರು ಸಿಟ್ಟಾಗುವುದು ಎಲ್ಲೆಲ್ಲಿ ಅಂದರೆ ನೀರು ವಿಧಾನಸೌಧಕ್ಕೆ ಬಂದಾಗ ಮಾತನಾಡಿಸಲಿಲ್ಲ ಎಂದು ಸಿಟ್ಟಾಗುವುದಿಲ್ಲ ಅವರು, ಸಿಟ್ಟಾಗುವುದು ತಾಲ್ಲೂಕು ಆಫೀಸ್ ನೋಡಿ, ಪೋಲಿಸ್‌ನವರನ್ನು ನೋಡಿ ಆಸ್ಪತ್ರೆ ನೋಡಿ, ನಮ್ಮ ಶಾಲೆ ನೋಡಿ. ಹಾಗೆ ಸಿಟ್ಟಾಗುವಂತಹ ಕೆಲಸ ಮಾಡಿದವರು ಯಾರು? ಈ

ಸರ್ಕಾರ ಅಲ್ಲವೇ? ಇವರಿಂದ ನಾವೂ ಬೈಸಿಕೊಳ್ಳುವುದಿಲ್ಲವೇ? ನಾವು ಹೇಗೆ ಮುಖ ತೋರಿಸುವುದು? ಜೊತೆಗೆ, ಹಿಂದೆ ಇವರ ಸರ್ಕಾರವೇ ಮಾಡಿತ್ತು. ಸರ್ಕಾರಿ ಆಸ್ಪತ್ರೆಗಳ ವೈದ್ಯರು ಖಾಸಗಿಯಾಗಿ ಮಾಡಬಹುದು ಎಂದು. ಅದಂತೂ ಹೆಚ್ಚಾಗಿಹೋಗಿದೆ. ಯಾರೂ ಆಸ್ಪತ್ರೆಯಲ್ಲಿ ಕೂತುಕೊಳ್ಳುವ ಹಾಗಿಲ್ಲ, ಬಂದವರಿಗೆಲ್ಲಾ ನಮ್ಮ ಮನೆಗೆ ಬನ್ನಿರಿ ಎಂದು ಹೇಳುತ್ತಾರೆ ಇಲ್ಲ ಖಾಸಗಿ ನರ್ಸಿಂಗ್ ಹೋಂ ತೋರಿಸುತ್ತಾರೆ. ಅವರಿಗೆ ಅಡಿಶನಲಾಗಿ ಏನಾದರೂ ಕೊಡುವುದಾದರೆ ಕೊಡಿ, ಇದನ್ನು ತೆಗೆದುಹಾಕದೇ ಹೋದರೆ ಮಾನ ಮರ್ಯಾದೆ ಬರುವುದಿಲ್ಲ. ಈಗ ಸಣ್ಣ ಸಣ್ಣ ಊರುಗಳಲ್ಲೂ ನರ್ಸಿಂಗ್ ಹೋಂ ಆಗಿಬಿಟ್ಟಿವೆ. ಆಪರೇಷನ್‌ಗೆ ಅಲ್ಲಿಗೆ ಬನ್ನಿ ಎನ್ನುತ್ತಾರೆ. ಇಲ್ಲಿ ಮಾಡುವುದಿಲ್ಲ, ಅಲ್ಲಿಗೆ ಹೋಗುತ್ತಾರೆ. ಅಂದಮೇಲೆ ದಯವಿಟ್ಟು ಸರ್ಕಾರ ತೀರ್ಮಾನ ಮಾಡಿ ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವುದನ್ನು ರದ್ದು ಮಾಡದೇ ಹೋದರೆ ಒಬ್ಬನೇ ಒಬ್ಬ ಸರ್ಕಾರಿ ವೈದ್ಯನೂ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಿಲ್ಲ. ಜನರಿಗೆ ಅವರ ಸೇವೆ ಸಿಗುವುದಿಲ್ಲ ದಯವಿಟ್ಟು ಈ ಕೆಲಸ ಒಂದು ಮಾಡಬೇಕು. ಸಧ್ಯಕ್ಕೆ ಇಷ್ಟು ನಾನು ಹೇಳುತ್ತೇನೆ. ನಮ್ಮ ಆಸ್ಪತ್ರೆಗಳು ಬಡವರಿಗೋಸ್ಕರ ಬಾಗಿಲು ತೆರೆದಿರಲಿ. ಅಲ್ಲಿ ಕನಿಷ್ಟ ಪ್ರಮಾಣದ ಔಷಧಿಗಳು ಅವರಿಗೆ ಸಿಗಲಿ. 1993-94ರ ಸಾಲಿನಲ್ಲಿ ಹೆಚ್ಚಿನವವಿ ಔಷಧಿ ಸರಬರಾಜು ಮಾಡಿದ್ದೀರಲ್ಲಾ ಐದು ವರ್ಷ ಆಗಿಹೋಗಿದೆ ಅದನ್ನು ಡಬಲ್ ಮಾಡುವುದಕ್ಕೆ ಆಗದಿದ್ದರೂ ಕೂಡ ಒಂದೂವರೆಯಷ್ಟಾದರೂ ಮಾಡಿರಿ ಎಂದು ನಾನು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ. ಇಲ್ಲದಿದ್ದರೆ ನಾವು ಹಳ್ಳಿ ಆಸ್ಪತ್ರೆಗೆ ಖಂಡಿತ ಹೋಗುವುದಕ್ಕೆ ಆಗುವುದಿಲ್ಲ. ಎರಡು ಕೆಲಸ ಮಾಡಿರಿ. ಒಂದು, ವೈದ್ಯರುಗಳನ್ನು ತುಂಬಿರು, ಇನ್ನೊಂದು, ಖಾಲಿ ಇರುವ ಎಲ್ಲಾ ಪ್ಯಾರ ಸಿಬ್ಬಂದಿಯನ್ನು ಭರ್ತಿಮಾಡಿ ಆಸ್ಪತ್ರೆ ಸರಬರಾಜನ್ನು ಜಾಸ್ತಿ ಮಾಡಿರಿ, ವರ್ಷ ಆರಂಭವಾಗುವ ಮುಂಚಿತವಾಗಿ ಆ ರೇಟ್ ಕಾಂಟ್ರಾಕ್ಟ್ ನೀವು ಒಪ್ಪಿ ಮಾರ್ಚಿ ಏಪ್ರಿಲ್ ತಿಂಗಳಿಂದಲೇ ಔಷಧಿಗಳು ಸರಬರಾಜಾಗುವ ರೀತಿ ಮಾಡಿರ - ಇಷ್ಟು ಕೆಲಸ ಮಾಡಿದರೆ ಹೊಸ ಆಸ್ಪತ್ರೆಗಳನ್ನು ಕೊಡುವ ಬದಲು ಇರುವ ಆಸ್ಪತ್ರೆಗಳನ್ನು ದುರಸ್ತಿಪಡಿಸಿ, ಬಡಜನರಿಗೆ ಸರಿಯಾಗಿ ಆಸ್ಪತ್ರೆಯಲ್ಲಿ ಸಿಗಬೇಕಾದ ಸವಲತ್ತು ಸಿಗುವಂತಹ ಕೆಲಸ ನೀವು ಮಾಡಿದರೆ ಆಗ ಈಗೇನೋ ಪ್ರಾಯಶ್ಚಿತ ಎಂದು ಹೇಳುತ್ತಿದ್ದೀರಲ್ಲಾ ಆ ತಪ್ಪಿಗೆ ನೀವು ಧರ್ಮಸ್ಥಳಕ್ಕೇನೂ ಹೋಗಬೇಕಾಗಿಲ್ಲ ತಿರುಪತಿಗೆ ಹೋಗಬೇಕಾಗಿಲ್ಲ, ಜನಸೇವೆಯೇ ಜನಾರ್ಧನ ಸೇವೆ ಅನ್ನುವಂತೆ ಈ ಸೇವೆ ಮಾಡಿ ಪುಣ್ಯ ಕಟ್ಟಿಕೊಳ್ಳಿರಿ.

ಆಮೇಲೆ, ಬಸವಣ್ಣನವರು ಇಲ್ಲೇ ಇದ್ದಾರೆ, ಬಡವರಿಗೆ ಅವರ ಕೈಗೆಟುಕುವಂತೆ ಆಹಾರ ಪದಾರ್ಥಗಳೆಲ್ಲಾ ಸಿಕ್ಕಬೇಕಲ್ಲಾ ಅದಕ್ಕೆ ಸಹಾಯ ಅವರಿಂದ ಆಗಬೇಕಲ್ಲಾ. ಇವರು ಏನು ಹೇಳುತ್ತಾರೆ, ಕೇಂದ್ರಸರ್ಕಾರದಿಂದ ಅಳತೆ ಪ್ರಕಾರ ನಮ್ಮಲ್ಲಿ ಸುಮಾರು 28 ಲಕ್ಷ ಕುಟುಂಬಗಳು ಬಡತನದ ರೇಖೆ ಕೆಳಗಿವೆ. ರಾಜ್ಯ ಸರ್ಕಾರದ ಅಳತೆ ಪ್ರಕಾರ 59 ಲಕ್ಷ ಕುಟುಂಬಗಳು ಬಡತನದ ರೇಖೆ ಕೆಳಗಿವೆ. ಕೇಂದ್ರದ ಅಳತೆ ಸಮೀಕ್ಷೆ ಮಾಡಿದವರು ಯಾರು? ಕೇಂದ್ರ ಸರ್ಕಾರದವರು ಇಲ್ಲಿ ಕಚೇರಿಗಳನ್ನು ತೆಗೆದು ಅವರ ಸಿಬ್ಬಂದಿ ಅಲ್ಲಿ ನೇಮಕ ಮಾಡಿ ಅವರ ಮೂಲಕ ಗುರ್ತಿಸಿದ್ದಾರೋ ಅಥವಾ ರಾಜ್ಯಸರ್ಕಾರದ ಸಿಬ್ಬಂದಿವರ್ಗದಿಂದ ಗುರ್ತಿಸಿದ್ದಾರೋ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಹೊಸ ಆಹಾರ ಪಡಿತರವನ್ನು 1997 ರಿಂದ ಜಾರಿಗೆ ತಂದರು. ಇದನ್ನು ಜಾರಿಗೆ ತರಬೇಕಾದರೆ ಬಡತನದ ಕುಟುಂಬಗಳು ರಾಷ್ಟ್ರದಲ್ಲಿ ಎಷ್ಟಿವೆ ಎನ್ನುವುದಕ್ಕೆ ಡಾ: ಲೋಕಡವಾಲ ಸಮಿತಿ ವರದಿ ಆಧಾರದ ಮೇಲೆ ಅಂದಾಜು ಮಾಡಿದರು ಅದರ ಪ್ರಕಾರ ನಮ್ಮ ರಾಜ್ಯದಲ್ಲಿ 28 ಲಕ್ಷ ಬಡ ಕುಟುಂಬಗಳು ಅವರು ಮಾಡಿದ್ದಾರೆ. ಈ ಕಾರ್ಯಕ್ರಮವನ್ನು ನಾವು 85 ರಿಂದ ಜಾರಿಗೆ ತಂದೆವು ಮತ್ತೆ 95ರಿಂದ ಜಾರಿಗೆ ತಂದೆವು. ಇಲ್ಲಿ, ಬಡತನದ ರೇಖೆ ಕೆಳಗಿರುವವರನ್ನು ವೈಜ್ಞಾನಿಕವಾಗಿ ಸರ್ವೆ ಮಾಡದೆ ಅಂದಾಜು 60 ಲಕ್ಷ ಎಂದು ಮಾಡಿದ್ದರು. ನಾನು ಈಗ ಇದರಲ್ಲಿ ಎಲಿಜಿಬಲ್ ಕುಟುಂಬಗಳು ಎಷ್ಟು ಬಿಟ್ಟುಹೋಗಿವೆ ಇನೆಲಿಜಿಬಲ್ ಕುಟುಂಬಗಳು ಎಷ್ಟು ಬಂದಿವೆ ಎಂದು ರೀ ಸರ್ವೆ ಮಾಡಬೇಕೆಂಧು ಮೊದಲಿನಿಂದ ಪ್ರಯತ್ನ ಪಟ್ಟೆ. ಅದು ಆಗಲಿಲ್ಲ. ಈಗ ಶಾಸನಸಭೆಯಲ್ಲಿ ತೀರ್ಮಾನ ಮಾಡಿದ ಪ್ರಕಾರ ಮೇ ಅಂತ್ಯಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟು 6 ಲಕ್ಷ ಬಡತನದ ರೇಖೆ ಕೆಳಗಿರುವ ಕುಟುಂಬಗಳಿಗೆ ಹಸಿರುಕಾರ್ಡು ಕೊಡಬೇಕೆಂದು ಮಾಡಿದ್ದೇವೆ. ಡಾ: ಲೋಕಡವಾಲ ಕಮಿಟಿ ವರದಿ ಮೇಲೆ 28 ಲಕ್ಷ ಎಂದು ಮಾಡಿದ್ದು, ಆದರೆ ರಾಜ್ಯ ಸರ್ಕಾರ ವೈಜ್ಞಾನಿಕವಾಗಿ ಸರ್ವೆ ಮಾಡಿಲ್ಲ, ಹಾಗೆ ಮಾಡಿದರೆ 40 ಲಕ್ಷ ಬಡ ಕುಟುಂಬಗಳು ನಮ್ಮ ರಾಜ್ಯದಲ್ಲೇ ಇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಕೇಂದ್ರ ಸರ್ಕಾರಕ್ಕೆ ಒಂದು ವಿಜ್ಞಾನ, ರಾಜ್ಯಸರ್ಕಾರಕ್ಕೆ ಒಂದು ವಿಜ್ಞಾನ, ಇದು ಆಶ್ಚರ್ಯ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೂಲಕವೇ ವೈಜ್ಞಾನಿಕವಾಗಿ ಗುರ್ತಿಸುವಂತಹ ಕೆಲಸ ಮಾಡಲಾಗಿದೆ. ಕೇಂದ್ರಸರ್ಕಾರಕ್ಕೆ ಕಳುಹಿಸುವುದಕ್ಕಾಗಿ ವೈಜ್ಞಾನಿಕವಾಗಿ ಯಾವ ಕೆಲಸ ನೀವು ಮಾಡಿದ್ದಿರೋ ಅದೇ ಅಧಿಕಾರಿಗಳ ಮೂಲಕವೇ ರಾಜ್ಯಸರ್ಕಾರ ಕೂಡ ಗುರ್ತಿಸುವಂತಹ ಕೆಲಸ ಮಾಡಿರಬೇಕು. ಹೌದು ತಾನೇ? ಬಡತನದ ರೇಖೆ ಕೆಳಗಿರುವುದರ ಒಂದು ಗಜಕಡ್ಡಿ ಇದೆಯಲ್ಲಾ, ಯಾರ್ಡ್‌ಸ್ಟಿಕ್ ಇದೆಯಲ್ಲಾ.

ಡಾ: ಎಂ.ಪಿ. ಕರ್ಕಿ:- ಕೇಂದ್ರಸರ್ಕಾರ ಬಹುತೇಕ 1991ರ ಸೆನ್ಸಸ್ ಆಧಾರದ ಮೇಲೆ ಮಾಡಿರಬಹುದು.

ಶ್ರೀ ಕಾಗೋಡು ತಿಮ್ಮಪ್ಪ:- ಇಲ್ಲ, ಕೇಂದ್ರಸರ್ಕಾರದ ಒಬ್ಬ ಮಂತ್ರಿಗಳು ಬರೆದಿರುವ ಪತ್ರ ನಿಮಗೂ ನಮಗೂ ಎಲ್ಲರಿಗೂ ಬಂದಿದೆ. ಜನವರಿ 1997, ತಾ: 25, ಅವರು ಏನು ಹೇಳುತ್ತಿದ್ದಾರೆ ಅಂದರೆ,

"... the implementation and success of this new streamlined system thus depends upon how quickly and cautiously the population below the povertyline is identified and thereafter special ration cards are issued to them. You will agree with me that without this minimum process, this system would fail to ensure the interest of the targetted group. Being a public representative, I would request you to kindly use your good offices to ensure quick and proper identification *of the* below line population.'

ಸ್ವಾಮಿ, ಇಂತಹ ಒಂದು ಪ್ರಯೋಗಾಲಯದಲ್ಲಿ ಯಾವನೇ ಒಬ್ಬ ಶಾಸಕನನ್ನು ಆಳವಡಿಸಿಕೊಳ್ಳುವ ಕೆಲಸ ಅಥವಾ ಪ್ರಯತ್ನ ಸರ್ಕಾರ ಮಾಡಿದೆಯೇನು? ಹೇಗೆ ಬಂದಿದೆ, ನಿಮ್ಮದೇನಾದರೂ ಸಲಹೆ ಇದೆಯಾ ಗುರುತು ಹಚ್ಚುವ ಕೆಲಸ ಹೇಗೆ ಮಾಡಬೇಕೆಂಬ ಬಗ್ಗೆ ಯಾವ ಶಾಸಕರನ್ನೂ ಆಳವಡಿಸಿಕೊಳ್ಳಲಿಲ್ಲ. ಐಡೆಂಟಿಫಿಕೇಷನ್ ಕೆಲಸ ಮಾಡಲು ಒಂದು ವರ್ಷದ ಹಿಂದೆ ಅವರಿಗೂ ಬಂದಿರಬೇಕು ತಾನೇ; ಆ ಗುರುತು ಹಚ್ಚುವ ಕೆಲಸವಾದ ಮೇಲೆ ಅದರ ಪ್ರಕಾರ ಅವರು ಕಾರ್ಡ್ ಕೊಡಿರಿ ಎಂದು ಹೇಳುತ್ತಾರೆ. ಈ ಗುರುತು ಹಚ್ಚುವ ಕೆಲಸ ಕೇಂದ್ರ ಮಾಡಿದರೂ ಅಷ್ಟೇ ತಾನೆ? ಆದ್ದರಿಂದ ಕೇಂದ್ರ ಸರ್ಕಾರ ಇಷ್ಟೊಂದು ಪ್ರಾಮಾಣಿಕವಾಗಿ ಈ ಕೆಲಸ ಮಾಡಬೇಕು ಮತ್ತು ಬಡವರಿಗೆ ಆಹಾರಪದಾರ್ಥ ಸಿಕ್ಕಬೇಕು ಅನ್ನುವ ಪ್ರಯತ್ನ ನಡೆಸಿದರೂ ಕೂಡ ಇದರಿಂದ ಇವತ್ತಿನವರೆಗೂ ಈ ಪ್ರಯೋಗದ ಕೆಲಸ ಆಗದೇ ಇದ್ದರೆ, ಕೇಂದ್ರಸರ್ಕಾರಕ್ಕೊಂದು ಲೆಕ್ಕ, ರಾಜ್ಯ ಸರ್ಕಾರಕ್ಕೊಂದು ಲೆಕ್ಕ ಅಂದರೆ ಯಾವ ತರಹ? ಒಂದು ರಾಮನ ಲೆಕ್ಕ ಒಂದು ಕೃಷ್ಣನ ಲೆಕ್ಕ. ಕೃಷ್ಣನ ಲೆಕ್ಕ ರಾಜ್ಯಕ್ಕೆ, ರಾಮನ ಲೆಕ್ಕ ಕೇಂದ್ರಕ್ಕೆ. ಅಂದರೆ ರಾಮನ ಲೆಕ್ಕ ಮಾಡಿದ ಅಧಿಕಾರಿಗಳ್ಯಾರು, ಕೃಷ್ಣನ ಲೆಕ್ಕ ಮಾಡಿದ ಅಧಿಕಾರಿಗಳ್ಯಾರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಎರಡು ಲೆಕ್ಕ ಬೇಡ ಅಂತಲೇ ರಾಮಕೃಷ್ಣರ ಕಡೆ ಹೋಗಬೇಕೆಂದು ಮಾಡಿದ್ದಾರೆ.

12.50 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ:- ಕಂದಾಯ ಇಲಾಖಾಧಿಕಾರಿಗಳಿಗೂ ಮತ್ತು ಆಹಾರ ಇಲಾಖಾಧಿಕಾರಿಗಳಿಗೂ ಇನ್ನೂ ಸಂಬಂಧವೇರ್ಪಟ್ಟಿಲ್ಲ. ಕಂದಾಯ ಇಲಾಖಾಧಿಕಾರಿಗಳು ನಾವು ಮಾಡುವುದಿಲ್ಲವೆಂದು ಹೇಳುತ್ತಾರೆ. ಉಪಾಧ್ಯಾಯರ ಹತ್ತಿರ ಜಮೀನಿನ ಲೆಕ್ಕವಿರುತ್ತದೆಯೇ? ನಿಜವಾಗಿಯೂ ಅರ್ಹತೆ ಇರುವವರನ್ನು ಹಸಿರು ಕಾರ್ಡ್ ಕೊಡುವ ಲಿಸ್ಟ್‌ನಲ್ಲಿ ಸೇರಿಸಿಲ್ಲ, ಯಾರಿಗೆ ಅರ್ಹತೆ ಇಲ್ಲವೋ ಅವರನ್ನು ಸೇರಿಸಿದ್ದಾರೆ. ಇವತ್ತು ಕಂದಾಯ ಇಲಾಖಾಧಿಕಾರಿಗಳು ಮಾತ್ರ ಎಲ್ಲಾ ದಾಖಲೆಗಳನ್ನೂ ಇಟ್ಟುಕೊಂಡಿರುವ ವ್ಯವಸ್ಥೆ ಇದೆ. ಅವರ ಮುಖಾಂತರ ಮಾಡಿಸುವುದಕ್ಕೆ ಈ ಸರ್ಕಾರಕ್ಕೇನಾಗಿದೆ? ಶ್ರೀ ಬಸವಣ್ಣೆಪ್ಪನವರು ವಹಿಸಿಕೊಂಡಿರುವ ಖಾತೆ ಅಮೆರಿಕಾ ದೇಶಕ್ಕೆ ಸೇರಿದೆಯೇ ಅಥವಾ ಕಂದಾಯ ಇಲಾಖೆ ಇನ್ನೊಂದಕ್ಕೆ ಸೇರಿದೆಯೇ? ಒಬ್ಬ ಮುಖ್ಯ ಮಂತ್ರಿಗಳು, ಒಂದು ಸರ್ಕಾರ ಕೈಯಲ್ಲಿರುವ ಒಬ್ಬ ಆಹಾರ ಮಂತ್ರಿ, ಒಂದು ಆಹಾರ ಇಲಾಖೆ, ಇನ್ನೊಂದು ಕಂದಾಯ ಇಲಾಖೆ. ಒಂದು ಇಲಾಖೆಯಿಂದ ಕೆಲಸ ಮಾಡಿಸುವುದಕ್ಕೆ ಆಗಲಿಲ್ಲವೆಂದ ಮೇಲೆ ಇವರು ಆಡಳಿತ ನಡೆಸುತ್ತಾರಾ? ಗುರುತಿಸುವ ಕೆಲಸವನ್ನೇ ಅಕ್ಷರಶಃ ಮಾಡಲಾಗಲಿಲ್ಲವೆಂದರೆ, ಇವರು ನಡೆಸಿರುವ ಆಡಳಿತ ಯಾವುದು?

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮಂತ್ರಿಗಳು):- 1985ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ನಾನು ಆಹಾರ ಮಂತ್ರಿಯಾಗಿದ್ದೆ. 1985ರಲ್ಲಿ ಪಡಿತರ ಪದ್ಧತಿ ನಗರ ಮತ್ತು ಪಟ್ಟಣಗಳಿಗೆ ಮಾತ್ರ ಸೀಮಿತವಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗಡೆ ಇರುವ ಕುಟುಂಬಗಳಿಗೆ ಸುಲಭ ದರದಲ್ಲಿ ಆಹಾರ ಧಾನ್ಯ ಕೊಡಬೇಕೆಂದು ಈ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೆವು. ಈಗ ವೈಜ್ಞಾನಿಕವಾಗಿ ಹೌಸ್ ಸರ್ವೆ ಮಾಡಿ, 30 ಲಕ್ಷ ಬಡ ಕುಟುಂಬಗಳಿಗೆ ಬಹಳ ಪರಿಣಾಮಕಾರಿಯಾಗಿ ಕೊಟ್ಟಿದ್ದೇವೆ. 1989ರಲ್ಲಿ ಬಂದ ನಿಮ್ಮ ಸರ್ಕಾರ ಇದನ್ನು ರದ್ದು ಮಾಡಿತು.

ಶ್ರೀ ಕಾಗೋಡು ತಿಮ್ಮಪ್ಪ:- ಹಸಿರು ಕಾರ್ಡಿಗೆ ಬದಲಾಗಿ ಶ್ರೀಮತಿ ಇಂದಿರಾ ಗಾಂಧಿ ಫೋಟೋ ಇರುವ ಕಾರ್ಡ್ ತಂದರೇ ಹೊರತು, ರದ್ದು ಮಾಡಲಿಲ್ಲ.

ಶ್ರೀ ಜಿ. ಬಸವಣ್ಣಪ್ಪ:- ಆಮೇಲೆ, 94ರಲ್ಲಿ ಶ್ರೀ ದೇವೇಗೌಡರವರು ಮುಖ್ಯ ಮಂತ್ರಿಗಳಾದ ಮೇಲೆ ಗಾಂಧೀಜಿ ಫೋಟೋ ತಂದರು. 1995ರಲ್ಲಿ We have reintroduced that. ಆ ಸಂದರ್ಭದಲ್ಲಿ ಸರ್ವೆ ಮಾಡುವಾಗ, ರೆವಿನ್ಯೂ ಅಧಿಕಾರಿಗಳಿಗೂ, ಆಹಾರ ಇಲಾಖಾಧಿಕಾರಿಗಳಿಗೂ ಸಂಘರ್ಷವಾಯಿತು. ಏಕೆಂದರೆ, 50 ಪರ್ಸೆಂಟ್ ರೆವಿನ್ಯೂ ಅಫಿಷಿಯಲ್ಸ್‌ನ್ನು ನಾವು ಡೆಪ್ಯುಟೇಷನ್ ಮೇಲೆ ತೆಗೆದುಕೊಳ್ಳುತ್ತೇವೆ. ಸಿ ಅಂಡ್ ಆರ್ ರೂಲ್ಸ್ ಆದಮೇಲೆ, ಡಿಪಾರ್ಟ್‌ಮೆಂಟ್ ಅಫಿಷಿಯಲ್ಸ್‌ನ್ನು ತೆಗೆದುಕೊಳ್ಳಬೇಕು, ರೆವಿನ್ಯೂ ಅಫಿಷಿಯಲ್ಸ್‌ನ್ನು ರೀ-ಪ್ಯಾಟ್ರಿಯೇಟ್ ಮಾಡಬೇಕೆಂದಾಗ ಸಂಘರ್ಷ ಉಂಟಾಗಿ, they have not co-operated in survey work.

ಆದ್ದರಿಂದ ಹ್ಯಾಪ್‌ಹೆಝರ್ಡ್ ಆಗಿ ಡಿಸ್ಟ್ರಿಬ್ಯೂಟ್ ಮಾಡಿದರು. 60 ಲಕ್ಷ ಬಡ ಕುಟುಂಬಗಳಿಗೆ ಕೊಟ್ಟರು. ಆಗ ಶ್ರೀ ನಂಜಪ್ಪನವರು ಆಹಾರ ಮಂತ್ರಿಗಳಾಗಿದ್ದರು. ಅನರ್ಹರು ಬಂದು, ಅರ್ಹರು ಬಿಟ್ಟುಹೋಗಿದ್ದಾರೆ. ಇನ್ನೂ 6 ಲಕ್ಷ ಬಡ ಕುಟುಂಬಗಳು ಬಿಟ್ಟುಹೋಗಿವೆ ಎಂದು ನಾನು ತಮಗೆ ಹೇಳುತ್ತಿದ್ದೇನೆ. What you are pleading is correct.

ವೈಜ್ಞಾನಿಕವಾಗಿ ಅರ್ಹ ಕುಟುಂಬಗಳಿಗೆ ಕೊಡಬೇಕು. ಆದರೆ, ಅದು ತಪ್ಪಿಹೋಗಿದೆ. ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ರೆವಿನ್ಯೂ ಅಫಿಷಿಯಲ್ಸ್‌ಗೂ, ಫುಡ್ ಡಿಪಾರ್ಟ್‌ಮೆಂಟಿಗೂ ವ್ಯತ್ಯಾಸ ಬಂದು ಅವರು ಸಹಕಾರ ಕೊಡಲಿಲ್ಲ, ಅದನ್ನು ನಾನು ಒಪ್ಪುತ್ತೇನೆ. ಆದಾದಮೇಲೆ, ಗುರುತಿಸುವುದಕ್ಕೆ ನೀವು ಮಾಡಿರುವ ವಿಧಾನವಾವುದು? ಇದು ಹೊಲಸಾಗಿದೆ. ನೀವು ವಿಲೇಜ್ ಅಕೌಂಟೆಟ್‌ರಿಂದ ಪಟ್ಟಿ ತರಿಸಿ ರೇಷನ್ ಕಾರ್ಡ್ ಇಷ್ಯೂ ಮಾಡಿದರೆ ಯಾವ ಸಮಸ್ಯೆಯೂ ಬರುತ್ತಿರಲಿಲ್ಲ. ನೀವು ಹೇಳುವ ರೀತಿಯಲ್ಲಿ ಲಕ್ಷಾಂತರ ಕೋಟಾ ಕಾರ್ಡ್ ಬರುತ್ತಿರಲಿಲ್ಲ. ಯಾರ ಹತ್ತಿರ ನೀವು ಐಡೆಂಟಿಫೈ ಮಾಡಿಸುತ್ತಿದ್ದೀರೆಂದರೆ ಅಂಗನವಾಡಿ ಕಾರ್ಯಕರ್ತೆಯರಿಂದ. ಒಂದು ವ್ಯವಸ್ಥೆ ಫೇಲ್ಯೂರ್ ಆದರೆ, ಬೇರೆ ರೀತಿಯಲ್ಲಿ ಹೇಗೆ ಇಫೆಕ್ಟೀವ್ ಆಗಿ ಮಾಡುತ್ತೀರಿ? ಅದು ಮಾಡುತ್ತಿಲ್ಲ. ಹಾಗಾಗಿ ಎಂಪಿಡಿ ಪಾಯಿಂಟ್ ಯಾರದು ಇದೆಯೋ, ಅವನೇ ಕುಳಿತುಕೊಂಡು ಕಾರ್ಡ್ ಹಂಚುವ ಪರಿಸ್ಥಿತಿ ಬಂದಿದೆ.

ಉಪಸಭಾಧ್ಯಕ್ಷರು:- ಅವರು ಉತ್ತರಿಸಲಿ. ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಪಡಿತರ ಚೀಟಿಯನ್ನು ಅರ್ಹ ವ್ಯಕ್ತಿಗಳಿಗೆ ಕ್ರಮವಾಗಿ, ಶುದ್ಧವಾಗಿ ಗುರುತಿಸಿ ಕೊಡುವ ಕೆಲಸವನ್ನು ಈ ಒಂದು ವರ್ಷದ ಅವಧಿಯಲ್ಲಿ ಮಾಡಲಿಲ್ಲವೆಂದರೆ, ಜನರು ನಿಮಗೆ ಪಾಠ ಕಲಿಸಿದರೆ ನಿಮಗೆ ಸಿಟ್ಟೇಕೆ ಬರಬೇಕು?

Accept the failure.

ಅಂದರೆ, ನೀವು ಸೋತಿದ್ದೇವೆಂದು ಹೇಳಿ. ಇದೇನೂ ದೊಡ್ಡ ಕೆಲಸವಲ್ಲ. ಸುಮ್ಮನೆ ಕೆಲಸಕ್ಕೆ ಬಾರದ ಮಾತು ಹೇಳಿಕೊಂಡು, 6 ತಿಂಗಳಿನಿಂದ ಇದೇ ಮಾತು, ಉತ್ತರ, ಈಗಲೂ ಅದೇ ಉತ್ತರ.

(ಈ ಹಂತದಲ್ಲಿ ಶ್ರೀ ಕೆ. ಶರಣಪ್ಪನವರು ಪೀಠವನ್ನಲಂಕರಿಸಿದರು)

ಇನ್ನು, ಮನೆಗೆ ಸೂರು ಕೊಡುವ ವಿಚಾರ. ಇದು ಕನಿಷ್ಠ ಕಾರ್ಯಕ್ರಮ ತಾನೇ. ಕನಿಷ್ಠ ಕಾರ್ಯಕ್ರಮಕ್ಕೆ ನಾವು ಬದ್ಧರಾಗಿದ್ದೇವೆಂದು ನೀವೇ ಹೇಳಿದ್ದೀರಿ. ಅದನ್ನು ಕಾರ್ಯಗತ ಮಾಡಿದ್ದೀರಾ? ಕಾರ್ಯಗತ ಮಾಡಿ ಹೇಳಿದಕೆ ನಾನು ಇಷ್ಟು ಹೇಳಬೇಕಾಗಿರಲಿಲ್ಲ. ಈ ಒಂದು ವರ್ಷದಲ್ಲಿ ಇಂದಿರಾ ಆವಾಸ್ ಯೋಜನೆಗಳಲ್ಲಿ ಮನೆಗಳನ್ನು ಕೊಟ್ಟಿದ್ದೀರಿ, ಅದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಂದಿದೆ. ಅಂಬೇಡ್ಕರ್ ಯೋಜನೆ ಪ್ರಕಾರ ಮನೆ ಕೊಟ್ಟಿದ್ದಾರೆ, ಅದೂ ಬಂದಿದೆ, ಸೂರಿನ ವಿಚಾರದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಭಾಷಣ ಮಾಡುವ ಕಾಲದಲ್ಲಿ ಒಂದು ವರ್ಷದಲ್ಲಿ ಎಷ್ಟು ನೀವೇಶನ ಹಂಚಿದ್ದೀರೆಂಬ ಬಗ್ಗೆ ಪಟ್ಟಿ ಕೊಟ್ಟರು. ಅದೇ ಸಾಕು. ಇನ್ನು ಆಶ್ರಯ ಮನೆ. ನಾನು ದಾಖಲೆ ತಂದಿದ್ದೇನೆ. 1997-98 ಅಂದರೆ ಚಾಲ್ತಿ ವರ್ಷ ತಾನೇ. ಈ ವರ್ಷಕ್ಕೆ ಪ್ರತಿ ಶಾಸನ ಸಭಾ ಕ್ಷೇತ್ರಕ್ಕೆ 175 ಮನೆ ಕೊಟ್ಟಿದ್ದಾರೆ. ನನಗೂ ಕೊಟ್ಟಿದ್ದಾರೆ, ನಿಮಗೂ ಕೊಟ್ಟಿದ್ದಾರೆ. ಇದಕ್ಕೆ ದುಡ್ಡು ಬಂದಿದೆಯೇ? ನಮ್ಮ ಜಿಲ್ಲಾ ಪಂಚಾಯತ್‌ನಿಂದ ಸರ್ಕಾರದ ಸುತ್ತೋಲೆ ಪ್ರಕಾರ ಗುರಿ ನಿಗದಿಪಡಿಸಿ ಎಲ್ಲಾ ತಾಲ್ಲೂಕುಗಳಿಗೆ ಕೊಟ್ಟಿದ್ದಾರೆ. ಇದನ್ನು 11.6.97 ರಲ್ಲಿ ಹೊರಡಿಸಿದ್ದು. ಈ ಗುರಿ ನಿಗದಿಪಡಿಸಿರುವ ಮನೆಗಳಿಗೆ ಜಿಲ್ಲಾ ಪಂಚಾಯತ್ ನಿಂದ ಹಣ ಬಿಡುಗಡೆ ಆದನಂತರವೇ ಮನೆಗೆ ಕಟ್ಟಡ ಪ್ರಾರಂಭಿಸತಕ್ಕದ್ದು. ಯಾವುದೇ ಕಾರಣಕ್ಕೂ ಹಣದ ನಿರೀಕ್ಷಣೆಯಿಂದ ಮನೆ ನಿರ್ಮಾಣ ಕೈಗೆತ್ತಿಕೊಳ್ಳುವಂತಿಲ್ಲ. ಒಂದವೇಳೆ, ಕೈಗೊಂಡಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ಅದಕ್ಕೆ ಜವಾಬ್ದಾರರಾಗಿರುತ್ತಾರೆ. 1997-98ನೇ ಸಾಲಿನ ಮನೆ ಪ್ರಾರಂಭವಾಗಿಲ್ಲ. ಏಕೆ ಆಗಿಲ್ಲವೆಂದರೆ ಹಣ ಬಿಡುಗಡೆಯಾಗಿಲ್ಲ. ಆದ್ದರಿಂದ, ಈ ವರ್ಷಕ್ಕೆ ಆಶ್ರಯ ಮನೆಗಳನ್ನು ಸರ್ಕಾರದವರು ಏನು ನಿಗದಿಪಡಿಸಿದ್ದರು, ಇದನ್ನು ಪ್ರಾರಂಭಿಸಿಯೇ ಇಲ್ಲ. ಹಣ ಕೊಡಲೇ ಇಲ್ಲ. ಅಂದರೆ, ಜನ ಸಿಟ್ಟಾಗದೇ ಇರುತ್ತಾರೆಯೇ ನೀವು ಏಕೆ ಹೀಗೆ ಮಾಡುತ್ತೀರಿ? ಆಗುವುದಿಲ್ಲವೆಂದು ಹೇಳಿ. ನಾವೇನೂ ಒತ್ತಾಯ ಮಾಡುತ್ತಿದ್ದೇವೆಯೇ? ಸೂರು, ಆರೋಗ್ಯ, ಶಿಕ್ಷಣ ಇದೆಲ್ಲಾ ನಮ್ಮ ಕನಿಷ್ಠ ಕಾರ್ಯಕ್ರಮದ ಪ್ರಯತ್ನ, ಇದಕ್ಕೆ ನಾವು ಕಟ್ಟುಬಿದ್ದಿದ್ದೇವೆಂದು ಹೇಳಿದ್ದೀರಿ. ಸೂರು ಕೊಡುವ ವಿಚಾರದಲ್ಲಿ ಇಡೀ ವರ್ಷದಲ್ಲಿ ಕೊಡಬೇಕಾದ 175 ಮನೆಗಳನ್ನು ನಮ್ಮ ತಾಲ್ಲೂಕಿನಲ್ಲಿ ನೀವು ಇವತ್ತಿನವರೆಗೆ ಪ್ರಾರಂಭಿಸಿಲ್ಲ. ಹಣ ಕೊಟ್ಟಿಲ್ಲವೆಂದರೆ ಇದು ನ್ಯಾಯವೇ? ಈ ಕಾಲದಲ್ಲಿ ಈ ರೀತಿ ಸುಳ್ಳು ಹೇಳಬಹುದೇ? ಸುಳ್ಳು ಹೇಳಿ ಬಚಾವಾದರೆ ಜನ ಏನು ಮಾಡುತ್ತಾರೆ? ಆದ್ದರಿಂದ, ಸರ್ಕಾರ ಈ ತರಹ ಮಾಡಬಾರದು. ಬಡವರಿಗೆ ಹೇಳಿ, ನಂಬಿಸಿ ಮೋಸ ಮಾಡಬಾರದು. ಇಲ್ಲದಿದ್ದರೆ, ಮಾಡುವುದಕ್ಕಾಗುವುದಿಲ್ಲ, ಹಣವಿಲ್ಲವೆಂದು ಏನಾದರೂ ಕಾರಣ ಹೇಳಿ ನಮಗೇನೂ ಬೇಸರವಿಲ್ಲ. ಸರ್ಕಾರ ನಡೆಸುವವರಿಗೆ ಸಾಧ್ಯವಾದರೆ ಆಗುತ್ತದೆ ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿ. ಆದ್ದರಿಂದ, ಬಡವರಿಗೆ ನೆರಳನ್ನು ಕೊಡುವ ಕೆಲಸದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿಲ್ಲ. ಆದ್ದರಿಂದಲೇ, ಕನಿಷ್ಠ ಕಾರ್ಯಕ್ರಮ ಕುರಿತು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವೇ ಮಾಡಿಲ್ಲ. ಕಾರಣವೇನೆಂದರೆ, ಬಡವರ, ಕನಿಷ್ಠ

ಕಾರ್ಯಕ್ರಮದ ಬಗ್ಗೆ ಇವರಿಗೆ ಏನು ಅಭಿಮಾನವಿತ್ತು, ಅದು ಬತ್ತಿಹೋಗಿದೆ. ಜೀವಂತವಾಗಿ ಉಳಿದಿಲ್ಲ.

ಹಣಕಾಸಿನ ಸಚಿವರನ್ನು ಜರಿಬೇಕೋ ಅಥವಾ ನಿಮ್ಮನ್ನು ಜರಿಬೇಕೋ ನನಗೆ ಗೊತ್ತಾಗುತ್ತಾ ಇಲ್ಲ. ಇಲ್ಲ ನೀವು ಪ್ರಯತ್ನವನ್ನು ಮಾಡದೇ ಇರಬಹುದು. ಇಲ್ಲ ನೀವು ಪ್ರಯತ್ನ ಮಾಡಿದರೂ ಸಹ ಹಣಕಾಸಿನ ಸಚಿವರು ಗೋರ್ಕಲ್ಲ ಮೇಲೆ ನೂರುಕಾರ ಮಳೆಬಿದ್ದಂತೆ ಅವರು ಬಂಡೆ ಕಲ್ಲಿನಂತೆ ಅವರು ಕುಳಿತಿದ್ದಾರೆ. ರಾಜ್ಯದ ಎಲ್ಲಾ ಭಾಗಗಳಲ್ಲೂ ಸುಮಾರು 59 ಕಾಲೇಜು ಕಟ್ಟಡಗಳನ್ನು ಪ್ರಾರಂಭ ಮಾಡಿದ್ದೀರಿ. ಅವುಗಳಿಗೆ ಬೇಕಾಗಿರತಕ್ಕ ಅಂದಾಜು ಹಣ ಒಟ್ಟು 18 ಕೋಟಿ, 75 ಲಕ್ಷ ರೂಪಾಯಿ, ಇದುವರೆಗೆ ಅದಕ್ಕೆ 8 ಕೋಟಿ ಹಣ ಖರ್ಚಾಗಿದೆ. ಅವುಗಳನ್ನು ಪೂರೈಸಬೇಕಾದರೆ ಇನ್ನೂ ಸಹ 11 ಕೋಟಿ ರೂಪಾಯಿಗಳು ಬೇಕು. ಆ 11 ಕೋಟಿಯಲ್ಲಿ 97-98ನೇ ಸಾಲಿನಲ್ಲಿ ಕೊಟ್ಟಂತಹ ಹಣ ಕೇವಲ 2 ಕೋಟಿ ಮಾತ್ರ. ಈ ಕಟ್ಟಡಗಳ ಕೆಲಸ ಪ್ರಾರಂಭವಾಗಿ ಎರಡು, ಮೂರು ವರ್ಷಗವು ಸಂದಿವೆ, ಲಿಂಟ್ಲು ಲೆವಲ್‌ಗೆ ಬಂದಿವೆ. ಸ್ಲಾಬ್ ಹಾಕಿದ್ದಾರೆ, ಆದರೆ ಕಿಟಕಿ ಬಾಗಿಲು ಯಾವುದನ್ನೂ ಹಾಕಿಲ್ಲ. ಇಲ್ಲಿತನಕ ಏನೂ 7 ಕೋಟಿ 90 ಲಕ್ಷದಷ್ಟು ಹಣ ಖರ್ಚು ಮಾಡಿದ್ದಾರೆ, ಅದೆಲ್ಲಾ ವ್ಯರ್ಥ. ನಾನು ಒಬ್ಬರ ಪರವಾಗಿ ಮಾತ್ರ ಇಲಾಖೆಗೆ ಹೋಗಿರಲಿಲ್ಲ. ಇದರ ವಿವರವನ್ನೆಲ್ಲಾ ನನಗೆ ಇಲಾಖೆಯವರೇ ಕೊಟ್ಟರು. ಅವರು ನಮ್ಮ ಕೈಯಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ 5 ಲಕ್ಷ ಬೇಕಾಗಿದ್ದ ಕಡೆ ಒಂದು ಲಕ್ಷ, ಐವತ್ತು ಸಾವಿರ ಈ ರೀತಿ ಹಣ ನೀಡಿದ್ದಾರೆ, ಕಟ್ಟಡ ಕೆಲಸ ಪ್ರಾರಂಭ ಆಗಿ ನಿಂತಿವೆ, ಪ್ರಾರಂಭಗೊಂಡು ಎರಡು ಮೂರು ವರ್ಷಗಳಾದ ಕಾರಣ ಕಬ್ಬಿಣ ಎಲ್ಲಾ ಬಾಯಿ ಬಿಟ್ಟಿವೆ, ಮಕ್ಕಳು ಬೀದಿಯಲ್ಲಿ ತಿರುಗುತ್ತಿದ್ದಾರೆ, ಓದಲಿಕ್ಕೆ ಅವರಿಗೆ ಜಾಗ ಇಲ್ಲ ಎಂದು ಹೇಳಿದರೆ, ಇಲ್ಲದ ಸಲ್ಲದ ಸಬೂಬು ಹೇಳಿಕೊಂಡು, ಪ್ರಿಯಾರಿಟಿ ಸೆಕ್ಟರ್ ಅಲ್ಲ, ಆ ಸೆಕ್ಟರೆ ಈ ಸೆಕ್ಟರ್ ಅಲ್ಲ ಎಂದು ಕೆಲಸ ಪ್ರಾರಂಭ ಮಾಡಿ ಎರಡು ಮೂರು ವರ್ಷಗಳಿಂದ ಹಾಗೆ ಬಿಟ್ಟುಕೊಂಡು ಕುಳಿತ್ತಿದ್ದೀರಲ್ಲಾ ಇದರಿಂದ ನಿಮಗೆ ಮರ್ಯಾದೆ ಬರುತ್ತದಾ? ನಾಚಿಕೆ ಆಗುವುದಿಲ್ಲವಾ ನಿಮಗೆ ಅರ್ಧಂಭರ್ದ ಕೆಲಸಕ್ಕೆ ಏಕೆ ಹಣ ಖರ್ಚು ಮಾಡಿದ್ದೀರಿ? ಹಣ ಇಲ್ಲದೆ ಕೆಲಸವನ್ನು ಏಕೆ ಪ್ರಾರಂಭ ಮಾಡಿದಿರಿ? ಅದನ್ನು ನಿಮಗೆ ಪೂರ್ಣ ಮಾಡಲಿಕ್ಕೆ ಯೋಗ್ಯತೆ ಇಲ್ಲದೆ ಹೋಜರೆ ಅದನ್ನು ಒಡೆದು ಹಾಕಿ. ಆ ಜಾಗ ಮುನ್ಸಿಪಲ್‌ದು ಯಾರಿಗಾದರೂ ದೊರೆತರೆ ಅವರೇ ಬೇರೇನಾದರೂ ಮಾಡುತ್ತಾರೆ. ವರ್ಷಕ್ಕೆ 4-5 ಕೋಟಿ ಹಣ ಕೊಟ್ಟು ಅದನ್ನು ಪೂರ್ಣ ಮಾಡಲಿಕ್ಕೆ ಆಗಲಿಲ್ಲ ಎಂದರೆ ಯಾರಿಗೂ ಶ್ರದ್ದೆ ಇಲ್ಲ. ಅದರ ಬಗ್ಗೆ ಆಲೋಚನೆ ಮಾಡುವುದಿಲ್ಲ, ವಿಚಾರ ಚರ್ಚೆ ಮಾಡುವುದಿಲ್ಲ. ನಾನೇ ಎರಡು ಬಾರಿ ಹಣಕಾಸಿನ ಸಚಿವರನ್ನು ಕರೆದು ಮಾತನಾಡಿದೆ, ಸಭೆ ಕರೆಯೋಣ ಎಂದು, ನಾವು ಮಾತನಾಡದಿದ್ದರೆ ಕೆಲಸ ಹೇಗೆ ಆಗುತ್ತದೆ? ಅವರು ಮನೆ ಬಾಗಲಿಗೆ ಬಂದು ಯಾರು ಹಣ ಕೊಡುತ್ತಾರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು):- ತಮ್ಮ ಹಲವಾರು ಸಲಹೆಗಳು ನನ್ನ ಗಮನವನ್ನು ಸೆಳೆದಿವೆ. ಕಾಲೇಜು ಶಿಕ್ಷಣವು ಅಷ್ಟೆ. 2-3 ವರ್ಷಗಳಿಂದ ಸ್ಪಿಲ್ ಓವರ್ ಆದಂಥ ಅನೇಕ ಕಟ್ಟಡಗಳು ಇವೆ. ಅದಕ್ಕೋಸ್ಕರ 1997-98ನೇ ಸಾಲಿನಲ್ಲಿ ಹೆಚ್ಚಿನ ಹಣವನ್ನು ಒದಗಿಸಿ, ಆದಷ್ಟು ಬೇಗ ಪೂರ್ತಿ ಮಾಡಲು ಕ್ರಮ ಕೈಗೊಂಡಿದ್ದೇವೆ. ಇದರ ಬಗ್ಗೆ ಹೆಚ್ಚಿಗೆ ಆಯವ್ಯಯ ಭಾಷಣ ಮಾಡುವಾಗ ತಮಗೆ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾಡಿ, ದೇವರು ನಿಮಗೆ ಒಳ್ಳೆಯದು ಮಾಡಲಿ. ಏಕೆಂದರೆ ಇದು ನಗೆಪಾಟಲು. ಹಣ ಇಲ್ಲದಿದ್ದರೆ ಯಾವುದೇ ಕೆಲಸವನ್ನು ಪ್ರಾರಂಭ ಮಾಡಬಾರದು. ಪ್ರಾರಂಭ ಮಾಡಿದರೆ ಮಧ್ಯದಲ್ಲೇ ನಿಲ್ಲಿಸಬಾರದು. ಅತ್ಯಂತ ವ್ಯಸನದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಉಳಿದಿದ್ದು ಏನೆಂದರೆ ನಮ್ಮ ಮೇಲೆ ಅಪಾರವಾದ ನಿರುದ್ಯೋಗದ ಸಮಸ್ಯೆ ಇದೆ. ಏಕೆಂದರೆ ಕನಿಷ್ಠ ಕಾರ್ಯಕ್ರಮಗಳನ್ನು ಕೊಡುವುದರಲ್ಲಿ ಸರ್ಕಾರವು ಬದ್ಧವಾಗಿದ್ದು, ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ವಿದ್ಯುಚ್ಛಕ್ತಿಯನ್ನು ಜಾಸ್ತಿ ಮಾಡಿ, ರಸ್ತೆ ಜಾಸ್ತಿ ಮಾಡಿ, ನೀರಾವರಿಯನ್ನು ಜಾಸ್ತಿ ಮಾಡಿ, ಕಾರ್ಖಾನೆಗಳನ್ನು ತಂದು ನಮ್ಮ ಯುವಕರಿಗೆ ಆರು ತಿಂಗಳು ವರ್ಷದಲ್ಲಿ ಉದ್ಯೋಗ ಕೊಡುತ್ತೇವೆ ಎಂದರೆ ಅದು ಆಗತಕ್ಕ ಕೆಲಸವಲ್ಲ. ಏಕೆಂದರೆ ಅದು ಮಾಯಾಬಜಾರ್ ಕೆಲಸವಲ್ಲ. ನಾನು ಏತಕ್ಕೆ ಈ ರೀತಿ ಹೇಳುತ್ತಿದ್ದೇನೆಂದರೆ, ಆಗಲೇ ನಮ್ಮ ಸಚಿವರು ಮಾತನಾಡುತ್ತಾ ಹೇಳಿದರು, ಸುಮಾರು 5400 ಕೋಟಿ ರೂಪಾಯಿಗಳ ಬಂಡವಾಳ ಬಂದಿದೆ ಎಂದು, ಅದು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಆ ಬಂಡವಾಳದಲ್ಲಿ ಕಾರ್ಖಾನೆಗಳು ಪ್ರಾರಂಭವಾಗಿವೆಯೋ ಅಥವಾ ಅದು ಬರೀ ಪುಸ್ತಕದಲ್ಲಿ ಇದೆಯೋ ನನಗೆ ಗೊತ್ತಿಲ್ಲ. ಏಕೆಂದರೆ ಹೋದ ಸಾಲಿನಲ್ಲಿ ಹೇಳಿದ ಮಾತುಗಳನ್ನು ಈ ವರ್ಷದಲ್ಲೂ ಹೇಳುತ್ತಿದ್ದಾರೆ. ಮಾನ್ಯ ಮಹಾದೇವಪ್ಪನವರು ಇಲ್ಲಿ ಇರಬೇಕಾಗಿತ್ತು, ಏಕೆಂದರೆ ಇದು ಡಿಮ್ಯಾಂಡಿನಲ್ಲಿ ಇರತಕ್ಕ ಚರ್ಚೆ, ಕೇವಲ ಒಂದು ಇಲಾಖೆ ಅಥವಾ ಒಂದು ಕ್ಷೇತ್ರಕ್ಕೆ ಸಂಬಂಧಿಸಿದ್ದು ಅಲ್ಲ. ಇಡೀ ರಾಜ್ಯದ ವಸ್ತುಸ್ಥಿತಿಯನ್ನು ಮುಂದಿಟ್ಟುಕೊಂಡು ಇಲ್ಲಿ ಮಾತನಾಡುತ್ತಿದ್ದೇವೆ. ಹೋದಸಲ ಹರಿಜನ ಗಿರಿಜನರಿಗೆ ಹಳದಿ ಕಾರ್ಡ್ ಕೊಡುತ್ತೇವೆ ಎಂದು ಹೇಳಿದರು, ಕೊಟ್ಟಿರಾ? ಹಳದಿ ಕಾರ್ಡ್ ಇಲ್ಲ ಗೆಳದಿ ಕಾರ್ಡ್ ಇಲ್ಲ. ಅಧ್ಯಕ್ಷರೇ, ನಾನೂ ಸಹ ಏಳು ತಿಂಗಳು ಸಮಾಜ ಕಲ್ಯಾಣದಲ್ಲಿದ್ದೆ ಮತ್ತು ಈ ಅಂಗವಿಕಲರಿಗೆ ಗುರುತಿನ ಚೀಟಿಗಳನ್ನು ಕೊಡುತ್ತೇವೆಂದು ತೀರ್ಮಾನ ಮಾಡಿದ್ದರು. ಅದನ್ನು ಇದುವರೆಗೆ ಹಂಚಿಲ್ಲ. ಸುಮಾರು ನಾಲ್ಕು ಲಕ್ಷ ಜನರಿಗೆ ಹಂಚಬೇಕಾಗಿತ್ತು, ಪ್ರಿಂಟ್ ಆಗಿರುವುದನ್ನು ಇನ್ನೂ ಕೂಡ ಹಂಚಿಲ್ಲ. ಇದು ನಮ್ಮ ವ್ಯವಸ್ಥೆ. ಆದುದರಿಂದ ಇವತ್ತು ನಮಗೆ ಆ ಬಂಡವಾಳ ಎಲ್ಲಿದೆ ಎನ್ನತಕ್ಕ ಮಾತನ್ನು ಹೇಳಬೇಕು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಇದೇ ಕುರ್ಚಿಯಲ್ಲಿ ಕುಳಿತುಕೊಂಡು ಈ ಒಂದು ವರ್ಷದಲ್ಲಿ ಸಾವಿರ ಮೆಗಾವ್ಯಾಟ್ ಕೊಡುತ್ತೇವೆ ಎಂದು ಹೇಳಿದರು. ಆದರೆ ಈ ಒಂದು ವರ್ಷದಲ್ಲಿ ಅವರು ಮಾಡಿದ್ದು ಏನು? ಸಾವಿರ ಎಲ್ಲಿ ಹೋಯಿತು? ಏಕೆ ಹೇಳಬೇಕು ಮಾಡದಿದ್ದ ಮೇಲೆ? ಅದಕ್ಕೆ ಹೇಳುವುದು ಇಚ್ಛಾಶಕ್ತಿ ಇಲ್ಲವೆಂದು, ಹಾಕಿಕೊಂಡಿದ್ದ ಕಾರ್ಯಕ್ರಮದ ಅನುಷ್ಠಾನ ಏಕೆ ಆಗಲಿಲ್ಲವೆಂದು, ಅದರ ಕಾರಣವನ್ನು ಜನರಿಗೆ ಹೇಳಿ.

ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 15 ಲಕ್ಷ ನಿರುದ್ಯೋಗಿಗಳು ಇದ್ದಾರೆ. ಅವರಿಗೆಲ್ಲಾ ಉದ್ಯೋಗವನ್ನು ಒದಗಿಸಿ ಕೊಡಬೇಕಾದರೆ, ಕೈಗಾರಿಕೆಗಳು ವಿಸ್ತಾರವಾಗಿ ಬೆಳೆಯಬೇಕು. ಆದರೆ ಅವು ವಿಸ್ತಾರವಾಗಿ ಬೆಳೆಯಲಿಕ್ಕೆ ಬೇಕಾದಂಥ ಪ್ರಯತ್ನಗಳು ನಡೆಯುತ್ತಾ ಇಲ್ಲ. ನಮ್ಮ ವಿಮಾನ ನಿಲ್ದಾಣದ ಕಥೆ ಹೇಳಿದರೆ, ಆಗೇ ಹೋಯಿತು ಎಂದರೂ ಅದು ಆಗಲಿಲ್ಲ ಅದೇ ರೀತಿ ಇದು ಆಗಬಾರದು. ಕೈಗಾರಿಕೆಗಳನ್ನು ಬೆಳೆಸತಕ್ಕಂಥದ್ದು ಅಷ್ಟೊಂದು ಸುಲಭದ ಕೆಲಸವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ವರ್ಷಗಳಿಂದ ನಮ್ಮ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ರಾಜ್ಯ ಸಚಿವರ ಮತ್ತು ಕೇಂದ್ರ

ಸಚಿವರ ಜಗಳದಲ್ಲೇ ಹೋಯಿತು. ಒಬ್ಬರೂ ಟಾಟಾಗೆ ಕೊಡುತ್ತೇವೆ ಎಂದು, ಇಬ್ರಾಹಿಂ ಬೇರೆಯವರಿಗೆ ಕೊಡುತ್ತೇವೆ ಎಂದು, ಹಾಗೆ ರಾಜ್ಯ ಮಂತ್ರಿ ಮತ್ತು ಕೇಂದ್ರ ಮಂತ್ರಿಗಳ ಜಗಳದಲ್ಲಿ, ಎರಡು ಕಡೆ ಒಂದೇ ಸರ್ಕಾರವಿದ್ದರೂ, ಆತ್ಮೀಯವಾಗಿದ್ದರೂ ವಿಮಾನ ನಿಲ್ದಾಣ ಆಗಲಿಲ್ಲ. ಸುಮ್ಮನೆ ಏಕೆ ಮಾತನ್ನು ಹೇಳುತ್ತೀರಿ,

ಶ್ರೀ ಕಾಗೋಡು ತಿಮ್ಮಪ್ಪ:- ಈಗಲಾದರೂ ವಾಸ್ತವವನ್ನು ಮಾಡಿಕೊಂಡು ಕೆಲಸ ಮಾಡಿ, ನಿಮ್ಮ ಕೈಯಲ್ಲಿ ಮಾಡಲಿಕ್ಕೆ ಆದರೆ ಮಾಡಿ ಇಲ್ಲದೆ ಹೋದರೆ ರಾಜೀನಾಮೆಯನ್ನು ಕೊಡಿ, ಜನ ಹೊಸ ಸರ್ಕಾರ ಆರಿಸಿ ಆಡಳಿತ ನಡೆಸುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವ್‌ದುರ್ಗ)**:- ಮಾನ್ಯವೈಸ್ ಛೇರ್ಮನ್‌ರವರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ನಿರ್ಣಯಕ್ಕೆ ನನ್ನ ಸಹಮತವನ್ನು ಸೂಚಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಹಲವಾರು ವಿಷಯಗಳು ಪ್ರಸ್ತಾಪವಾಗಿದೆ. ರಾಜ್ಯದ ಆರ್ಥಿಕ ವ್ಯವಸ್ಥೆ, ಜನರಿಗೆ ಮೂಲಭೂತ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ, ವಿದ್ಯುಚ್ಛಕ್ತಿ ಬಗ್ಗೆ, ಕೈಗಾರಿಕೆ, ಜಿಲ್ಲಾ ವಿಭಜನೆ, ರಾಜ್. ಹೆದ್ದಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಬಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದಲ್ಲದೆ ಕೆಲವು ಅತ್ಯಂತ ಮಹತ್ವದ ವಿಚಾರಗಳನ್ನೂ ಸಹ ಅದರಲ್ಲಿ ಹೇಳಿದ್ದಾರೆ ಎಂದು ಹೇಳುವಲ್ಲಿ ಬೇರೆ ಮಾತಿಲ್ಲ. ಎಲ್ಲರೂ ಹೇಳಿರುವ ವಿಚಾರವನ್ನೇ ಮತ್ತೇ ಮತ್ತೇ ಹೇಳುವುದರ ಬದಲಾಗಿ ನಾನು ವಿಶೇಷವಾಗಿ ನನ್ನ ಭಾಗವಾದ ಹೈದರಾಬಾದ್ ಕರ್ನಾಟಕದ ಬಗ್ಗೆ ಕೆಲವು ವಿಚಾರವನ್ನು ಹೇಳಬಯಸುತ್ತೇನೆ. ಹೈದರಾಬಾದ್ ಕರ್ನಾಟಕದ ಭಾಗವು ಸುಮಾರು 600-700 ವರ್ಷಗಳ ಕಾಲ ಪರರ ಆಳ್ವಿಕೆಯಲ್ಲಿತ್ತು. ಆ ಗುಲಾಮಗಿರಿಯನ್ನು ಅನುಭವಿಸಿದಂಥ ನೋವು ಆ ಜನರಲ್ಲಿ ಈವತ್ತಿಗೂ ಇದೆ. ಆ ಭಾಗ ಇದುವರೆಗೂ ಸಹ ಚೇತರಿಸಿಕೊಂಡಿಲ್ಲ. ಭಾರತಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದರೆ ಭಾರತಕ್ಕೆ ಈ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸ್ವಾತಂತ್ರ್ಯ ಬಂದದ್ದು 18-9-1948ರಲ್ಲಿ ಸ್ವಾತಂತ್ರ್ಯವು ಭಾರತಕ್ಕೆ ಬಂದಿದ್ದರೂ ಸಹ 13 ತಿಂಗಳ ಕಾಲ ನಿಜಾಮರ ಆಳ್ವಿಕೆಯಲ್ಲಿ ಇದು ಇತ್ತು. ಈ ರೀತಿ ನೋವನ್ನು ಉಂಡಿದ್ದಂಥ ಭಾಗಕ್ಕೆ ಸರ್ಕಾರವೇನೇನೂ ಸೌಲಭ್ಯವನ್ನು ಒದಗಿಸಿಕೊಡಬೇಕಾಗಿತ್ತೋ ಅದನ್ನು ಒದಗಿಸಿ ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾಮಾನ್ಯವಾಗಿ ಎಲ್ಲರಿಗೂ ಏನು ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತೇವೆ, ಅದನ್ನೇ ಆ ಭಾಗದ ಜನರಿಗೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಅದು ಹಿಂದುಳಿದ ಪ್ರದೇಶವೆಂದಾದಾಗ ಅಲ್ಲಿ ರಾಜಕೀಯವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹೆಚ್ಚು ಸೌಲಭ್ಯವನ್ನು ಮಾಡಿಕೊಟ್ಟಾಗ ಸಮಾನತೆ ಬರಲು ಸಾಧ್ಯವಾಗುತ್ತದೆ. ಕೃಷ್ಣ ಮೇಲ್ದಂಡೆ ಎನ್ನುವಂಥ ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡಂಥ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈಗಿನ ಮುಖ್ಯ ಮಂತ್ರಿಯವರನ್ನೂ ಅಭಿನಂದಿಸುತ್ತೇನೆ. ಏಕೆಂದರೆ ಆ ಕೆಲಸ 97ನೇ ಕಿಲೋಮೀಟರ್ ವರೆಗೆ ಬಂದಿದೆ. ಸಾವಿರಾರು ಕೋಟಿ ಹಣವನ್ನು ಖರ್ಚು ಮಾಡಿ ಆ ಪ್ರದೇಶದ ಜನರಿಗೆ ನೀರಾವರಿ ಸೌಲಭ್ಯವನ್ನು ಒದಗಿಸತಕ್ಕ ಕೆಲಸವನ್ನು ಮಾಡಿದಂಥ ಸರ್ಕಾರವನ್ನು ವಿರೋಧ ಪಕ್ಷದವರೂ ಸಹ ಮೆಚ್ಚುಗೆ ವ್ಯಕ್ತಪಡಿಸಬೇಕಾಗುತ್ತದೆ.

ಆದರೆ ಆ ಕೆಲಸವನ್ನು ಎರಡು ಸಾವಿರ ವರ್ಷದೊಳಗೆ ಪೂರ್ಣಮಾಡಿ ಮುಗಿಸುವ ನಿಟ್ಟಿನಲ್ಲಿ ಕೆಲಸ ಕೈಗೊಳ್ಳಬೇಕಾಗಿದೆ. ಇಲ್ಲದಿದ್ದರೆ ಆ ಕೆಲಸ ಮಾಡಿ ಸಹ ವ್ಯರ್ಥ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಇನ್ನು ಶೌಚಾಲಯಗಳನ್ನು ಮಾಡಿರುವಂಥದ್ದು, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮಾಡಿರುವ ಕೆಲಸ ಕಾರ್ಯಗಳಲ್ಲಿ ಬಹಳಷ್ಟು ಕಾಳಜಿ ವಹಿಸಿ ಮಾಡಬೇಕಾದದ್ದು ಒಂದಿದೆ. ಕೇಂದ್ರ ಸರ್ಕಾರದಿಂದ ಇಂದು ಪೌಷ್ಠಿಕವಾದ ಆಹಾರವನ್ನು ಕೊಡುವಂಥ ಕಾರ್ಯಕ್ರಮವಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಸೌದೆಯನ್ನು ಕೊಡುವುದಿಲ್ಲ. ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿಯವನ್ನು ಕೇಳಿರಿ ಎನ್ನತಕ್ಕ ಮಾತು ಇದೆ. ಸಾವಿರಾರು ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರು ಅಪೌಷ್ಠಿಕ ಆಹಾರವನ್ನು ಪಡೆಯುತ್ತಿದ್ದಾರೆ. ಆದರೆ ಅದು ಯಾವ ರೀತಿಯಾಗಿ ಫಲಾನುಭವಿಗಳಿಗೆ ಮುಟ್ಟಬೇಕೋ ಆ ರೀತಿಯಲ್ಲಿ ಮುಟ್ಟುತ್ತಿಲ್ಲ. ಆದ್ದರಿಂದ ಈ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಸರ್ಕಾರದಲ್ಲಿ ಮತ್ತು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಆಹಾರವನ್ನು ಕೊಡುವಾಗ ಈರುಳ್ಳಿ, ಎಣ್ಣೆ, ಆಲೂಗಡ್ಡೆ, ಮಸಾಲೆ ಮುಂತಾದುವನ್ನು ತೆಗೆದುಕೊಳ್ಳಲು ಸ್ವಲ್ಪ ಹಣವನ್ನು ಕೊಡುತ್ತಾರೆ. ಅದರಲ್ಲಿ ಎಷ್ಟೋ ಕಚ್ಚಾಮಾಲುಗಳು ಕಳುವಾಗಿಬಿಡುತ್ತದೆ. ಎಲ್ಲಾ ಅಧಿಕಾರಿಗಳು ಪ್ರಾಮಾಣಿಕರಾಗಿರುತ್ತಾರೆಂದು ಹೇಳಲು ಬರುವುದಿಲ್ಲ. ಎಣ್ಣೆ, ಅಕ್ಕಿ ಮುಂತಾದವನ್ನು ಅವರು ಮಾಡಿಕೊಳ್ಳಬಹುದು. ಇದರಲ್ಲಿ ಬಹಳಷ್ಟು ಅನ್ಯಾಯವಾಗುತ್ತಿದೆ. ಆದ್ದರಿಂದ ಎಣ್ಣೆ, ಮಸಾಲೆ, ಇತರೆ ಪದಾರ್ಥಗಳನ್ನಾವುದನ್ನೂ ತೆಗೆದುಕೊಳ್ಳದಂತೆ ಸಿದ್ಧಪಡಿಸಿದ ಆಹಾರವನ್ನು ತೆಗೆದುಕೊಂಡು ಅದನ್ನು ಅನ್ನದಲ್ಲಿ ಬೆರೆಸಿಕೊಳ್ಳುವ ಪದ್ಧತಿಯನ್ನು ತರಬೇಕು. ಒಟ್ಟಿನಲ್ಲಿ ಹಾಗೆ ಕಳುವಾಗುವುದನ್ನು ತಡೆಗಟ್ಟಿ ಪೌಷ್ಠಿಕ ಆಹಾರವು ಫಲಾನುಭವಿಗಳಿಗೆ ತಲುಪತಕ್ಕ ವ್ಯವಸ್ಥೆ ಮಾಡಿದಾಗ ಸಾವಿರಾರು ಮಕ್ಕಳುಗಳೇನು ಹುಟ್ಟುವ ಮೊದಲೇ, ನಂತರ ಮರಣ ಹೊಂದುತ್ತವೆ. ಅದನ್ನು ತಡೆಗಟ್ಟಬಹುದು ಮತ್ತು ಬಡವರಿಗೆ ಇದರಿಂದ ಅನುಕೂಲ ಸಹ ಆಗುತ್ತದೆ. ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಸಾಕಷ್ಟು ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿರುವುದು ನಿಜ. ಆದರೂ ನಮ್ಮ ಭಾಗಕ್ಕೆ ವೈದ್ಯರುಗಳು ಬರಲು ತಯಾರಾಗಿಲ್ಲ. ಏಕೆಂದರೆ ಅಲ್ಲಿ ಸರಿಯಾದ ರಸ್ತೆಗಳಿಲ್ಲ. ರಸ್ತೆಗಳಿಲ್ಲವೆಂದರೆ ಬಸ್ಸುಗಳು ಬರುವುದಿಲ್ಲ, ವಾಹನದ ವ್ಯವಸ್ಥೆ ಸರಿಯಾಗಿಲ್ಲವೆಂದರೆ ಯಾವ ಅಧಿಕಾರಿಯೂ ಅಲ್ಲಿಗೆ ಬರಲು ತಯಾರಾಗಿರುವುದಿಲ್ಲ, ಇದರಿಂದಾಗಿ ನಮ್ಮಲ್ಲಿ ಒಬ್ಬರು ವೈದ್ಯರನ್ನು ಕಂಡರೆ ಸಾಕ್ಷಾತ್ ಭಗವಂತನನ್ನೇ ಕಂಡಷ್ಟು ಸಂತೋಷಪಡುವಂತಾಗಿದೆ. ವರ್ಷಾನುಗಟ್ಟಲೆ ವೈದ್ಯರುಗಳು ಇರುವುದಿಲ್ಲ. ಆದ್ದರಿಂದ ವೈದ್ಯರುಗಳು ಇಲ್ಲದಿರುವುದಕ್ಕೂ, ರಸ್ತೆಗಳಿಗೂ ಮತ್ತು ಬೇರೆ ಬೇರೆಯದಕ್ಕೂ ಒಂದಕ್ಕೊಂದು ಸಂಬಂಧವಿದೆ. ಒಣ ಪ್ರದೇಶ ಬಡತನದಿಂದ ನರಳುತ್ತಿರುವ ಹಿಂದುಳಿದ ಪ್ರದೇಶಕ್ಕೆ ನಾವು ಹೋಗಲು ಮನಸ್ಸಿಲ್ಲವೆಂಬ ಕಾರಣಕ್ಕಾಗಿ ವೈದ್ಯರಾಗಲಿ, ಶಿಕ್ಷಕರಾಗಿಲಿ ಇತರರಾಗಲಿ ಅಲ್ಲಿ ಬರುವುದಿಲ್ಲ. ಆದ್ದರಿಂದ ಅಲ್ಲಿನ ಜನರ ಅಭಿವೃದ್ಧಿಯಾಗಬೇಕಾದರೆ, ಆರ್ಥಿಕವಾಗಿ ಬಲಿಷ್ಠರಾಗಬೇಕಾದರೆ ಈಗ ತೆಗೆದುಕೊಂಡಿರುವ ಎಲ್ಲಾ ಕಾರ್ಯಕ್ರಮಗಳನ್ನು ಆದಷ್ಟು ಬೇಗ ಪೂರ್ಣ ಮಾಡಬೇಕಾಗುತ್ತದೆ. ಪ್ರಾಥಮಿಕ ಶಾಲೆಗಳಿಗೆ 35 ಸಾವಿರ ಶಿಕ್ಷಕರನ್ನು ನೇಮಕ ಮಾಡುವ ಕಾರ್ಯಕ್ರಮವೊಂದನ್ನು ನಿಗದಿ ಪಡಿಸಿದೆ. ಆದರೆ ಅವರೆಲ್ಲಾ ಈ ಪ್ರದೇಶವನ್ನು ಬಿಟ್ಟು ಬೇರೆ ಕಡೆ ಹೋಗುತ್ತಾರೆ. ಆ ಕಡೆ ಬರಲು ಇಷ್ಟಪಡುವುದಿಲ್ಲ. ಆದ್ದರಿಂದ ಇಂಥ ಕಡೆಗೆ ನಿರ್ದಿಷ್ಟವಾದಂಥ ಶಿಕ್ಷಕರು ನೇಮಕವಾಗಬೇಕು ಎನ್ನತಕ್ಕ ಯೋಜನೆ ಸರ್ಕಾರದಲ್ಲಿ ಆಗಬೇಕು. ಶಿಕ್ಷಕರನ್ನು ನೇಮಕ

ಮಾಡುವುದಷ್ಟೇಲ್ಲ ಆ ಶಿಕ್ಷಕರು ಇಡೀ ರಾಜ್ಯದ ಎಲ್ಲಾ ಭಾಗಗಳಿಗೂ ಸಮಾನವಾಗಿ ಹಂಚಿಕೆಯಾಗಿದ್ದಾರಾ ಹೋಗಿದ್ದಾರಾ ಎಂಬ ಬಗ್ಗೆ ಸಹ ಗಮನಿಸಬೇಕು. ನನ್ನ ದೇವದುರ್ಗ ಕ್ಷೇತ್ರದಲ್ಲಿ ಒಂದು ವರ್ಷದಿಂದ ಒಂದು ಉಪನ್ಯಾಸಕರ ಹುದ್ದೆ ಖಾಲಿ ಇದೆ. ಒಂದು ವರ್ಷದಿಂದ ಮೂರು ನಾಲ್ಕು ಶಿಕ್ಷಕರು ಬಂದು ಕೇವಲ ಸಹಿ ಮಾಡಿ ಸಂಬಳ ತೆಗೆದುಕೊಂಡು ಹೋಗಿದ್ದಾರೆ. ಆದರೆ ಅಲ್ಲಿಗೆ ಬರಲು ಅವರು ತಯಾರಾಗಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ಹಲವಾರು ಸಾರಿ ತರುತ್ತಿದ್ದೇನೆ. ಇದನ್ನು ತಪ್ಪಿಸಬೇಕಾದರೆ, ತಾವು ಎಷ್ಟು ವೈದ್ಯರನ್ನು ನೇಮಕ ಮಾಡುತ್ತೀರಿ ಅದರಲ್ಲಿ ಆ ಭಾಗಕ್ಕೆ ಎಷ್ಟು ವೈದ್ಯರನ್ನು ನಿಗದಿ ಮಾಡಿದ್ದೀರಿ ಅಷ್ಟು ವೈದ್ಯರು ಅಲ್ಲಿದ್ದಾರಾ; ಎಷ್ಟು ಜನ ಸಿ.ಡಿ.ಪಿ.ಒ ಆ ಭಾಗಕ್ಕೆ ನಿಗಧಿ ಮಾಡಿದ್ದೀರಿ ಅವರು ಅಲ್ಲಿದ್ದಾರಾ ಎಂಬುದನ್ನು ಗಮನಿಸಬೇಕಾಗುತ್ತದೆ. ಎಷ್ಟೋ ಕಡೆ ಅಂಗನವಾಡಿ ಕೇಂದ್ರಕ್ಕೆ ಹೋಗಿ ನೋಡಿದರೆ ಅಲ್ಲಿ ಯಾರೂ ಇರುವುದಿಲ್ಲ. ಪಶು ವೈದ್ಯರುಗಳಿಲ್ಲದೆ ಸುತ್ತಮುತ್ತಲಿಂದ ಬರುವ ಜನರು ತಮ್ಮ ಜಾನುವಾರುಗಳನ್ನು ವಾಪಸ್ ತೆಗೆದುಕೊಂಡು ಹೋಗುವಂಥ ಸ್ಥಿತಿ ಬಂದಿದೆ. ಪಶುಸಂಗೋಪನೆಗೆ ನಮ್ಮ ಸರ್ಕಾರ ಸಾಕಷ್ಟು ಮಹತ್ವವನ್ನು ಕೊಟ್ಟಿದೆ. ಆದರೆ ಸಿಬ್ಬಂದಿಯು ಸರಿಯಾಗಿ ಹಂಚಿಕೆಯಾಗದಿದ್ದಾಗ ತಾವು ಎಷ್ಟು ಮಹತ್ವವನ್ನು ಯಾವುದೇ ವಿಭಾಗದಲ್ಲಿ ಕೊಟ್ಟರೂ ಸಹ ಪ್ರಯೋಜನವಾಗುವುದಿಲ್ಲ. ಒಂದು ದೇಶ, ಜಿಲ್ಲೆಯನ್ನು, ಅಲ್ಲಿಯ ಸೌಲಭ್ಯ, ಶ್ರೀಮಂತಿಕೆಯನ್ನು ಗುರುತಿಸಬೇಕಾದರೆ ಅಲ್ಲಿನ ಜಾನುವಾರುಗಳು ಸರಿಯಾಗಿದೆಯೇ ಎಂಬುದು ಮುಖ್ಯ. ಏಕೆಂದರೆ, ಅಲ್ಲಿ ಹಾಲು ಮತ್ತು ಹೈನಿನ ಉತ್ಪಾದನೆ ಚೆನ್ನಾಗಿರುತ್ತದೋ ಅಲ್ಲಿನ ಗ್ರಾಮಾಂತರ ಪ್ರದೇಶದ ಜನರು ಸುಖವಾಗಿರುತ್ತಾರೆ. ಅಲ್ಲಿ ಗ್ರಾಮಾಂತರ ಜನರು ಸುಖವಾಗಿರುತ್ತಾರೋ ಅಲ್ಲಿ ನಗರ ಪ್ರದೇಶದ ಜನರೂ ಸುಖವಾಗಿರುತ್ತಾರೆ. ಆದ್ದರಿಂದ ನೀರಾವರಿ ಮತ್ತು ಪಶುಸಂಗೋಪನೆಯನ್ನು ಮೂಲತಃ ಸರ್ಕಾರ ಜೋಪಾನ ಮಾಡುವಾಗ ಎಲ್ಲಾ ಕಡೆಯೂ ಅದು ಸರಿಯಾದ ರೀತಿಯಲ್ಲಾಗಬೇಕು. ಬೆಂಗಳೂರು, ಮೈಸೂರು, ದಾವಣಗೆರೆ, ಶಿವಮೊಗ್ಗ ಮುಂತಾದ ಹುಲುಸಾಗಿ ಮೇಯಲು ಸಾಧ್ಯವಾಗಿರುವ ಪ್ರದೇಶವನ್ನು ಮಾತ್ರ ನೋಡಿಕೊಂಡು ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶದ ಕಡೆ ಅವರು ಗಮನಹರಿಸದಿರುವುದನ್ನು ನೋಡಿದಾಗ ಆ ಭಾಗದ ಜನರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆಂದು ಹೇಳಬಯಸುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ತಾವು ಯಾವ್ಯಾವ ಮೂಲದಿಂದ ಎಷ್ಟೆಷ್ಟು ಹಣವನ್ನು ಪಿ.ಡಬ್ಲ್ಯೂ.ಡಿ.ಗೆ ಅಥವಾ ಬೇರೆ ಬೇರೆಯದಿಕ್ಕೆ ಕೊಡುತ್ತೀರೋ ಅದು ಬೇರೆ ವಿಚಾರ. ಆದರೆ ಈಗ ಏನು ಪದ್ಧತಿ ಇದೆ ಅದು ಸರಿಯಾಗಿಲ್ಲ. ಗುತ್ತಿಗೆದಾರರಾಗಲಿ, ಅಧಿಕಾರಿಗಳಾಗಲಿ ಯಾವ ರೀತಿಯಲ್ಲಿ ಎಷ್ಟು ಕಿಲೋಮೀಟರ್ ರಸ್ತೆ ಆಗಬೇಕು, ಯಾವುದು ಡಾಂಬರೀಕರಣವಾಗಬೇಕು, ಯಾವುದು ಮುರಂಹಾಕಿ ಮಾಡಬೇಕು ಎಂಬುದನ್ನು ವೈಜ್ಞಾನಿಕವಾದ ರೀತಿಯಲ್ಲಿ ಮಾಡುತ್ತಿಲ್ಲ. ಹಳ್ಳಿ ರಸ್ತೆಗಳಿಗೆ ಕೂಡು ರಸ್ತೆಗಳಾಗಿಲ್ಲ, ನಗರ ರಸ್ತೆಗಳಿಗೆ ಸಹ ಸರಿಯಾದ ಡಾಂಬರೀಕರಣವಾಗದೆ ಕೇವಲ ಕೆಲವೇ ರಾಷ್ಟ್ರೀಯ ಹೆದ್ದಾರಿಗಳು ಯೋಗ್ಯವಾಗಿದೆಯೇ ಹೊರತು, ತಾಲ್ಲೂಕಿನ, ಗ್ರಾಮಾಂತರ ರಸ್ತೆಗಳ ಕೆಲಸವಾಗಿಲ್ಲ. ಮಾಡಿರುವ ಕೆಲಸ ತೃಪ್ತಿಕರವಾಗಿಲ್ಲ. ರಸ್ತೆಗಳ ಕೆಲಸವನ್ನು ಸರಿಯಾಗಿ ಮಾಡದಿದ್ದರೆ ನಾವು ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡಲು ಸಾಧ್ಯವಾಗುವುದಿಲ್ಲ. ಇನ್ನು 'ನಿರ್ಮಲ ಕರ್ನಾಟಕ' ಎನ್ನತಕ್ಕ ಯೋಜನೆ ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ಶೌಚಾಲಯಗಳ ಮಹತ್ವ ಗ್ರಾಮೀಣ ಜನರಿಗೆ ಗೊತ್ತಿಲ್ಲ. ಸರ್ಕಾರ ಒದಗಿಸುವ ಈ ಸೌಲಭ್ಯವನ್ನು

ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವಂಥ ಪ್ರಚಾರವನ್ನೂ ಸಹ ಅಧಿಕಾರಿಗಳು ಮಾಡುತ್ತಿಲ್ಲ. ಚುನಾಯಿತ ಪ್ರತಿನಿಧಿಗಳೂ ಸಹ ಇದರ ಬಗ್ಗೆ ಸರಿಯಾಗಿ ತಿಳಿಸಿ ಹೇಳುತ್ತಿಲ್ಲ. ಆದ್ದರಿಂದ ಸಾವಿರ ಗುರಿ ಸಾಧಿಸಬೇಕೆಂದಿದ್ದರೆ ನೂರೂ ಸಹ ಆಗುತ್ತಿಲ್ಲ.

ಈ ಗ್ರಾಮೀಣ ಪ್ರದೇಶಗಳಿಗೆ ಹಳ್ಳಿಗಳ ಕಡೆ ಹೋದರೆ ಸಾಯಂಕಾಲ ಹೋದರೆ ಮಹಿಳೆಯರು ಪುರುಷರು ಸಾಲಾಗಿ ರಸ್ತೆಗಳು ಇರುವುದನ್ನು ನೋಡುತ್ತಾರೆ. ಅವರಿಗೆ ಬೇರೆ ಎಲ್ಲೂ ಕೂಡ ದಾರಿ, ಜಾಗ ಇರುವುದಿಲ್ಲ, ಆ ವಾಸನೆ ಎಷ್ಟು ಇರುತ್ತದೆ ಎಂದರೆ ನೀವು ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಷ್ಟೊಂದು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಮತ್ತು ಬೇರೆ ಊರುಗಳಿಂದ ಬಂದಂತಹ ಜನ ಈ ತಾಲ್ಲೂಕುಗಳನ್ನು, ಊರುಗಳನ್ನು ನೋಡಿ ಅಸಹ್ಯಪಟ್ಟುಕೊಳ್ಳತಕ್ಕಂತಹ ಪರಿಸ್ಥಿತಿ ಇದೆ. ಆದ್ದರಿಂದ ಈ ಯೋಜನೆಯನ್ನು ಸ್ವಲ್ಪ ಮಟ್ಟಿಗೆ ಯಾವುದೇ ರೀತಿ ಈ ಫಲಾನುಭವಿಗಳಿಗೆ ಮುಟ್ಟುವ ರೀತಿಯಲ್ಲಿ ಮಾಡುವುದಕ್ಕೆ ಆಲೋಚನೆ ಮಾಡಬೇಕು. ಈಗಿರುವಂತಹ ಯೋಜನೆ ಸಕ್ಸಸ್ ಆಗದೇ ಇದ್ದರೆ ಅದನ್ನು ಬೇರೆ ರೀತಿಯನಲ್ಲಿ ಕೊಡುವುದಕ್ಕೆ ಸಾಧ್ಯವಾ? ಊರ ಹೊರಗಡೆ ಸುಲಭ ಶೌಚಾಲಯ ಮಾಡುವುದಕ್ಕೆ ಸಾಧ್ಯವಾ? ಅದನ್ನು ಯೋಜನೆ ಮಾಡಬೇಕು. ಏಕೆಂದರೆ ಎರೆ ಮಣ್ಣು ಇರುವ ಕಡೆ ರಾಯಚೂರು ಮತ್ತು ಗುಲ್ಬರ್ಗಾ ಪ್ರದೇಶಗಳಲ್ಲಿ ಎರೆ ಮಣ್ಣು ಇರುವಂತಹ ಪ್ರದೇಶ ಮಳೆಗಾಲದಲ್ಲಿ ಮಹಿಳೆಯರು ಹೋದಾಗ ಕಾಲಿಗೆ ಚಪ್ಪಲಿ ಹಾಕಿಕೊಂಡು ಹೋದರೆ ಕೆಸರಿನಲ್ಲಿ ಸಿಕ್ಕಿಕೊಳ್ಳುತ್ತೇವೆ. ಬರಿಗಾಲಿನಲ್ಲಿ ಹೋದರೆ ಮುಳ್ಳು ನೆಡುತ್ತವೆ. ಅವರ ಪಾಡು ನಿಜವಾಗಿಯೂ ನೋಡುವುದಕ್ಕೆ ಭಯಾನಕವಾಗುತ್ತದೆ. ತಂಬಿಗೆ ತೆಗೆದುಕೊಂಡು ಹೋಗುವ ಪದ್ಧತಿ ಬಗ್ಗೆ ನಾವು ಹೆಚ್ಚು ಕಾಳಜಿ ವಹಿಸಬೇಕಾಗಿದೆ. ಪ್ರತಿ ಹಳ್ಳಿ, ಪ್ರತಿ ಮನೆ ಮನೆಗೂ ಎಲ್ಲಾದರೂ ಜಾಗ ಇರುವ ಕಡೆ ಶೌಚಾಲಯಗಳನ್ನು ನಿರ್ಮಾಣ ಮಾಡಿ ಮಹಿಳೆಯರ ಗೌರವವನ್ನು ಕಾಪಾಡುವ ಕೆಲಸ ಮಾಡುವುದಕ್ಕೆ ಸಾಧ್ಯವಾ ಎನ್ನುವುದನ್ನು ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಅದು ಅಷ್ಟು ಮುಖ್ಯವಾದುದು. ನಮ್ಮಲ್ಲೂ ಈ ಸಾರಿ ಬರಗಾಲ ಬಂದಿತ್ತು. ಬರಗಾಲ ಬಂದಾಗ ಬರಗಾಲದ ಹಣ ಬಿಡುಗಡೆ ಆಯಿತು ಎಂದು ಹೇಳುವುದು ಅಷ್ಟೆ. ನಿಜವಾಗಿಯೂ ಅದು ನಮಗೆ ಮುಟ್ಟಲಿಲ್ಲ. ಬರೀ ಕುಡಿಯುವ ನೀರಿನ ವ್ಯವಸ್ಥೆಗೆ ಸ್ವಲ್ಪ ಮಟ್ಟಿನ ಹಣ ಬಿಡುಗಡೆ ಆಯಿತು. ಆದರೆ ಬಡ ಜನರಿಗೆ ಬೀದರ್‌ನಲ್ಲಿ ಹೇಗೆ ಆತ್ಮಹತ್ಯೆ ಮಾಡಿಕೊಂಡರು. ಇಲ್ಲಿ ಆತ್ಮ ಹತ್ಯೆ ಮಾಡಿಕೊಂಡಿರುವುದು ಮಾತ್ರ ಗೊತ್ತಾಗುತ್ತಿದೆ. ಆತ್ಮಹತ್ಯೆ ಮಾಡಿಕೊಳ್ಳದೆ, ಜೀವಂತವಾಗಿ ಸತ್ತಿರುವ ಜನಗಳೂ ಕೂಡ ಬಹಳ ಇದ್ದಾರೆ. ಅವರೆಲ್ಲರೂ ಕೂಡ ವಲಸೆ ಹೋಗುತ್ತಿದ್ದಾರೆ. ಈ ಸಾರಿ ಚುನಾವಣೆಯಲ್ಲಿ ಅದರ ಪ್ರಭಾವ ಬಿದ್ದಿದೆ. ಬಹಳಷ್ಟು ಜನ ಈ ಸರ್ಕಾರದ ಪರವಾಗಿ ಇರುವ ಜನ ಇವತ್ತು ವಲಸೆ ಹೋಗಿದ್ದಾರೆ. ಸಾವಿರಾರು ಜನ ವಲಸೆ ಹೋಗಿ ಇವತ್ತು ಒಂದೊಂದು ಕುಟುಂಬ ಸಹ ಬಹಳ ಕಷ್ಟ ಅನುಭರಿಸುತ್ತಿದೆ. ಆದ್ದರಿಂದ ಯಾವ ಸಂದರ್ಭದಲ್ಲಿ ಅವರಿಗೆ ಸಹಾಯಧನ ಕೊಡಬೋಕು, ಯಾವಾಗ ಬರಗಾಲ ಅಥವಾ ಅತಿವೃಷ್ಟಿ ಅಥವಾ ಅನಾವೃಷ್ಟಿ ಆದಂತಹ ಸಂದರ್ಭದಲ್ಲಿ ಆ ಜನಗಳ ಕಡೆ ಹೆಚ್ಚು ನಿಗಾ ವಹಿಸಬೇಕು. ತುರ್ತಾಗಿ ಬೇಗನೆ, ಮಾಡಬೇಕು ಯಾವಾಗಲೋ ಹೊಟ್ಟೆ ಹಸಿದರೆ, ಯಾವಾಗಲೋ ಊಟ ಕೊಡುವುದು ಅಲ್ಲ. ಯಾವಾಗ ಅವರು ತೊಂದರೆಗೀಡಾಗಿರುತ್ತಾರೆ, ಆ ಸಂದರ್ಭದಲ್ಲಿ ಅವರಿಗೆ ಸರಿಯಾದ

ವ್ಯವಸ್ಥೆ ಮಾಡಿದಾಗ ಆ ಜನ ಮತ್ತೆ ವಲಸೆ ಹೋಗುವುದು ತಪ್ಪಿ ಅವರವರ ಜಾಗದಲ್ಲಿ ಇದ್ದು ಅವರು ಹೊಟ್ಟೆ ತುಂಬಿ ಊಟ ಮಾಡುವಂತಹ ಮತ್ತು ತಮ್ಮ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಈ ವಲಸೆ ಹೋಗುವುದನ್ನು ತಪ್ಪಿಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನು ಈ ಲಂಬಾಣಿ ತಾಂಡಗಳು ಇವತ್ತು ನೂರಾರು ಮನೆಗಳು ಇರುವ ತಾಂಡಗಳಾಗಿವೆ. ಆದರೆ ನಮ್ಮ ಸರ್ಕಾರದಲ್ಲಿ ಎಷ್ಟು ರೆವಿನ್ಯೂ ಆಗಬಹುದಾಗಿತ್ತು ಅಷ್ಟು ರೆವಿನ್ಯೂ ಆಗಲಿಲ್ಲ. ನಾಲ್ಕೈದು ತಾಂಡಗಳಿರುತ್ತವೆ ಅದರಲ್ಲಿ 40 ರಿಂದ 100 ಮನೆಗಳು ಸುತ್ತಮುತ್ತ ಇರುತ್ತದೆ. ಅವೆಲ್ಲವನ್ನೂ ಸೇರಿಸಿ ಒಂದು ತಾಂಡದಲ್ಲಿ ದನ ಇರಬೇಕೆಂದು ಒಂದು ನಿಯಮ ಇದೆಯೋ ಅದರ ಪ್ರಕಾರ ಒಂದು ನಾಲ್ಕೈದು ತಾಂಡವನ್ನು ಒಂದು ಕಂದಾಯ ಗ್ರಾಮವನ್ನಾಗಿ ಮಾಡುವುದರಿಂದ ಅವರಿಗೆ ಬೇಕಾದ ಸೌಲಭ್ಯಗಳನ್ನು ಮಾಡಿ ಕೊಟ್ಟಾಗ ಅವರೆಲ್ಲರೂ ಈ ಜನ ವಾಹಿನಿಯಲ್ಲಿ, ಸಮಾಜದಲ್ಲಿ ಒಂದಾಗಿ ಬೆರೆತು ಅವರೂ ಕೂಡ ತಮ್ಮ ಅನ್ನವನ್ನು ದುಡಿದು ತಿನ್ನುವ ವ್ಯವಸ್ಥೆಗೆ ಬರುತ್ತಾರೆ. ಇಲ್ಲದಿದ್ದರೆ ಅವರು ಯಾವಾಗಲೂ ಬಡತನದಲ್ಲಿರುತ್ತಾರೆಂದು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ಹೈದರಾಬಾದ್ ಕರ್ನಾಟಕದ ಪ್ರದೇಶದ ಕಡೆ ಒಂದು ಎತ್ತಿನ ಬಂಡಿ ಇದ್ದರೆ ಒಬ್ಬ ಶ್ರೀಮಂತ. ಆ ಎತ್ತಿನ ಬಂಡಿಯಲ್ಲಿ ಇಡೀ ದಿನ ಅವರು ಸೌದೆ ಕಡಿದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ರಾತ್ರಿಯಾದರೆ ಆ ಎತ್ತಿನ ಬಂಡಿ ಕೆಳಗಡೆ ಅವರು ಮಲಗುತ್ತಾರೆ. ಅದೇ ಅವರ ಮನೆ. ಒಂದು ಗುಡಿಸಲೂ ಕೂಡ ಇಲ್ಲ. ಇವತ್ತು ನಮ್ಮಲ್ಲಿ ಸಾಕಷ್ಟು ಮನೆಗಳನ್ನು ಹಂಚುತ್ತಿದ್ದಾರೆ, ಆದರೆ ಇಷ್ಟೊಂದು ಜನಸಂಖ್ಯೆ ಏತ್ತುತ್ತಿರುವ ಸಂದರ್ಭದಲ್ಲಿ ಆ ಮನೆಗಳನ್ನು ಯಾವ ರೀತಿಯಿಂದ ಕೂಡ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲೂ ಕೂಡ ಇವತ್ತು ನನ್ನನ್ನು ದೂಷಣೆ ಮಾಡುವಂತಹ ಜನ ಬಹಳ ಇದ್ದಾರೆ. ಇದರಿಂದ ಅವರೇ ದುಡಿದು ಅವರ ಮನೆಯನ್ನು ಅವರೇ ಕಟ್ಟಿಕೊಳ್ಳುವಂತಹ ವ್ಯವಸ್ಥೆ, ಅವರ ಆಹಾರವನ್ನು ಅವರೇ ಬೆಳೆಸಿಕೊಳ್ಳುವಂತಹ ವ್ಯವಸ್ಥೆಗೆ ನಾವು ಮನಸ್ಸು ಮಾಡಿದ್ದೇ ಆದರೆ ನಾವು ಭಿಕ್ಷೆ ಕೊಡುವುದು ಬೇಕಾಗಿಲ್ಲ. ಅವರಾಗಿ ಅವರೇ ದುಡಿದು ತಿನ್ನುವ ವ್ಯವಸ್ಥೆ ತರುವ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕು. ಎಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ರಾಜ್ಯದಲ್ಲಿ 43,500 ದೇವಸ್ಥಾನಗಳಿವೆ ಎಂದು ಮಾನ್ಯ ಸಚಿವರು ಹೇಳಿದರು. ಇದರಲ್ಲಿ ನಗರ ಪಟ್ಟಣಗಳಲ್ಲಿ ಈ ದೇವಸ್ಥಾನಗಳನ್ನು ಹೆಚ್ಚು ಕೊಡಬಾರದು. ಏಕೆಂದರೆ ಅವರಿಗೆ ಮನಗಳಿರುತ್ತವೆ. ಈ ದೇವಸ್ಥಾನಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಕುಗ್ರಾಮದಲ್ಲಿ ಅವುಗಳನ್ನು ಕೊಟ್ಟಿದ್ದೇ ಆದರೆ ಅವರಿಗೆ ಅದು ಸಮುದಾಯ ಭವನವಾಗಿ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ. ಕಲ್ಯಾಣ ಮಂಟಪವಾಗಿ ಕೆಲಸಕ್ಕೆ ಬರುತ್ತದೆ. ನಮ್ಮಂತಹ ರಾಜಕೀಯ ಜನ ಹೋದಾಗ ಅಲ್ಲಿ ಕೂತು ಎರಡು ಮಾತನಾಡಬಹುದು. ಈ ಎಲ್ಲಾ ದೃಷ್ಟಿಯಿಂದ ಒಂದು ಹಳ್ಳಿಗೆ ಒಂದು ಅಥವಾ ಎರಡು ಉತ್ತಮವಾದ ಗುಡಿಗಳನ್ನು ಮಾಡುವುದಕ್ಕೆ ನಮ್ಮ ಸಚಿವರು ಮನಸ್ಸು ಮಾಡಬೇಕು. ಯಾರೋ ಕೇಳುತ್ತಾರೆಂದು ಬಹಳ ಶ್ರೀಮಂತ ಭೋಗಸ್ತ ಇರುತ್ತಾರೆ, ಅವರ ಪಾಪಗಳನ್ನು ತೊಳೆದುಕೊಳ್ಳುವುದಕ್ಕೆ ಬಹಳ ಸುಲಭದಲ್ಲಿ ಒಂದು ಗುಡಿ ಕಟ್ಟಿಸಿ ಬಿಡುತ್ತಾರೆ. ಅವರು ದುಡ್ಡು ಹಾಕುವುದಲ್ಲದಗೆ ಮತ್ತೆ ಸರ್ಕಾರದ ಕಡೆಯಿಂದ ತೆಗೆದುಕೊಳ್ಳುತ್ತಾರೆ. ಕೇವಲ ಪಾಪವನ್ನು ತೊಳೆಯುವುದಕ್ಕೆ ದೇವಸ್ಥಾನಗಳು ಆಗಬಾರದು. ಅದರಿಂದ ಗ್ರಾಮೀಣ ಜನರಿಗೆ ಉಪಯೋಗವಾಗಬೇಕು. ಅದು ಸಾರ್ವಜನಿಕರಿಗೆ ಸಮಾನತೆಯನ್ನು ಕೊಡುವ ಒಂದು ಸ್ಥಳ

ಆಗಬೇಕು. ಆದ್ದರಿಂದ ಈ ದೇವಸ್ಥಾನಗಳನ್ನು ಕೊಡುವಂತಹ ವಿಷಯದಲ್ಲಿ ಆರಾಧನಾ ಯೋಜನೆ ಬಹಳ ಉಪಯೋಗವಾಗಿದೆ. ಈ ಆರಾಧನಾ ಯೋಜನೆಯಡಿಯಲ್ಲಿ ನಮ್ಮ ಸರ್ಕಾರ ಎಷ್ಟು ಕೊಟ್ಟಿದೆ ಎಂದರೆ, ಹಿಂದೆ ಎಂದೂ ಕೊಡಲಾರದಷ್ಟು ದೇವಸ್ಥಾನಗಳನ್ನು ಕೊಟ್ಟಿದ್ದಾರೆ. ಆದರೆ ಅದನ್ನು ಸ್ವಲ್ಪ ವೈಜ್ಞಾನಿಕವಾಗಿ ಆಲೋಚನೆ ಮಾಡಿ ಕೊಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಇದು ಕೇವಲ ಮೋಜಿಗೆ ಶೋಕಿಗೆ ಅಲ್ಲ, ಇನ್ನೂ ಒಂದು ತಾವು ಗಮನಿಸಬೇಕು, ದೇವಸ್ಥಾನಗಳಿಗೆ ಹೋಗುವಂತಹ ಜನ ಏನಾದರೂ ಒಂದು ತಪ್ಪು ಮಾಡಿರುವಂತಹ ಜನ ಇರುತ್ತಾರೆ. ಆದರೆ ಆ ತಪ್ಪನ್ನೇ ಮಾಡಲಾರದೆ ನಾವು ಶಿಸ್ತಿನಿಂದ ಜೀವನ ಸಾಗಿಸಬೇಕೆಂದು ಮಹಾ ಪುರುಷರ ಹತ್ತಿರ ಯಾರೂ ಹೋಗುವುದಿಲ್ಲ. ಗಾಂಧಿ ಪ್ರತಿಮೆ ಇಟ್ಟಿಲ್ಲ, ಅಂಬೇಡ್ಕರ್ ಪ್ರತಿಮೆ ಇಡುವುದಿಲ್ಲ, ಸ್ವಾಮಿ ವಿವೇಕಾನಂದರ ಪ್ರತಿಮೆ ಇಡುವುದಿಲ್ಲ, ಬುದ್ಧನ ಪ್ರತಿಮೆ ಸಿಗುವುದಿಲ್ಲ, ಏಕೆಂದರೆ ಅವರೆಲ್ಲರೂ ಏನು ಹೇಳುತ್ತಾರೆಂದರೆ, ನೀವು ಜೀವನದಲ್ಲಿ ಶಿಸ್ತನ್ನು ಕಾಪಾಡಬೇಕೆಂದು ಹೇಳುವಂತಹ ಮಹಾ ಪುರುಷರು ಅವರಿಂದ ಹೆದರಿಕೊಳ್ಳಬೇಕಾಗುತ್ತದೆ. ದೇವರುಗಳ ಹೆದರಿಕೆ ಇಲ್ಲ. ಅವರು ಯಾವುದನ್ನೂ ಕೇಳುವುದಿಲ್ಲ. ಯಾವ ಶಿಸ್ತನ್ನೂ ಬಯಸುವುದಿಲ್ಲ. ಅಲ್ಲಿಯೇ ಜಾಸ್ತಿ ಎಲ್ಲಾ ಹೋಗುತ್ತಾರೆ. ಏಕೆಂದರೆ ಸುಲಭದಲ್ಲಿ ಆಗಿಬಿಡಬಹುದು. ಮಾಡುವ ಪಾಪ ಮಾಡಬೇಕು, ಕುಡಿಯುವುದನ್ನು ಕುಡಿಯಬೇಕು, ಮಾಡುವ ಅತ್ಯಾಚಾರ ಮಾಡಬೇಕು, ಆದರೂ ಒಳ್ಳೆಯವನಾಗಬೇಕು. ಅದಕ್ಕೆ ಇದು ಪೂರಕ ಆಗಬಾರದು. ಏನಾದರೂ ಒಳ್ಳೆಯದಾಗುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಇದನ್ನು ವಿಸ್ತರಿಸಬೇಕು. ವರದಕ್ಷಿಣೆ ಬಗ್ಗೆ ತಾವು ದಿನಾ ಪತ್ರಿಕೆಯಲ್ಲಿ ನೋಡುತ್ತಿದ್ದೀರಿ. ಏಕೆ ಹೆಣ್ಣು ಮಕ್ಕಳನ್ನು ಸೀಮೆ ಎಣ್ಣೆ ಹಾಕಿ ಸುಡುವ ಪರಿಸ್ಥಿತಿ ಬಂದಿದೆ, ಏಕೆ ನೇಣು ಹಾಕುತ್ತಿರುತ್ತಾರೆ, ದಿನ ಬೆಳಗಾದರೆ 10 ಆದರೂ ಇಂಥ ಕೇಸುಗಳು ಪತ್ರಿಕೆಯಲ್ಲಿ ಬಂದಿರುತ್ತವೆ. ನಿಮಗೆ ಎಷ್ಟು ಸಹಜವಾಗಿದೆ ಎಂದರೆ, ಹೆಣ್ಣು ಮಕ್ಕಳ ಮೇಲೆ ಆಗುವ ದೌರ್ಜನ್ಯ ಅದು ಸಹಜ ಎನ್ನುವ ಮಟ್ಟಿಗೆ ಬಂದಿದೆ. ಅಪರ್ಣ ಎಂಬ ಮಹಿಳೆ ಬಗ್ಗೆ ಪೇಪರಿನಲ್ಲಿ ಬಂದಿದೆ, ಅವಳನ್ನು ಅಮೇರಿಕಾಗೆ ಕರೆದುಕೊಂಡು ಹೋಗಿ ಅಲ್ಲಿ 15 ದಿವಸಗಳು ಕೂಡ ಇರಿಸಲಿಲ್ಲ, ಅಲ್ಲಿಂದ ಒಂದು ರೀತಿಯ ಕೋಮಾ ಸ್ಟೇಜಿನಲ್ಲಿ ತಂದು ಬಿಟ್ಟು ಹೋದರು. ಇದಕ್ಕೆ ಕಾರಣ ಅವರ ಮನೆಯವರೂ ವರದಕ್ಷಿಣೆ ಕೊಡಲಿಲ್ಲ ಎಂದು ಇಂತಿಂಥ ದೊಡ್ಡವರ ಕತೆಯೇ ಹೀಗಾದರೆ ಇನ್ನು ಮಧ್ಯಮವರ್ಗದ ಜನಗಳ ಕಥೆ ಏನು? ಮಂಡ್ಯದ ಶೈಲಜ ಎನ್ನುವ ಒಬ್ಬ ಯುವತಿಯ ವಿಚಾರ ಕೂಡ ನಿನ್ನೆ ಪ್ರಸ್ತಾಪವಾಯಿತು. ಬಲವಂತವಾಗಿ ನೀವು ಯಾರ ಮನಸ್ಸನ್ನೂ ತಿದ್ದುವುದಕ್ಕಾಗುವುದಿಲ್ಲ. ಒಬ್ಬ ಹೆಣ್ಣು ಮಗಳ ಮೇಲೆ ಏನಾದರೂ ಆಪಾದನೆ ಬಂದಾಗ, ಅಥವಾ ಗಂಡನ ಮನೆಯವರು ಬೇಡವೆಂದು ಹೇಳಿದಾಗ ಅವರನ್ನು ಬಲವಂತವಾಗಿ ಕಳಿಸುವುದು, ಅಥವಾ ಬಲವಂತದ ಮದುವೆ ಮಾಡುವುದು ಏನಿದೆ ಇದು ಬಹಳ ಅಪಾಯಕಾರಿ. ಏಕೆಂದರೆ ಅವರು ಅವಳನ್ನು ಉಳಿಸುವುದಿಲ್ಲ, ಕೆಲವೇ ದಿವಸದಲ್ಲಿ ಏನಾದರೂ ಮಾಡುತ್ತಾರೆ. ಆದುದರಿಂದ ಕಾನೂನು ಪ್ರತಿಯೊಬ್ಬ ಇಂತಹ ಕಷ್ಟದಲ್ಲಿರುವ ಯುವತಿಯರಿಗೆ .....

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಶೈಲಜ ಪ್ರಕರಣದಲ್ಲಿ ಬಲವಂತದ ಮದುವೆ ಮಾಡುವ ಪ್ರಶ್ನೆ ಇಲ್ಲ. ಹುಡುಗ ಹುಡುಗಿ ಇಬ್ಬರೂ ಒಪ್ಪಿಕೊಂಡಿದ್ದಾರೆ. ಹುಡುಗ ಹುಡುಗಿ ಇಬ್ಬರನ್ನು ಮದುವೆ ಮಾಡುವುದಕ್ಕೆ ಮಧ್ಯವರ್ತಿಗಳಿಂದ ಅನಾಹುತ ಆಗಿದೆಯೇ ಹೊರತು ಇವರಿಬ್ಬರಿಗೂ

ಪ್ರೀತಿ ಇಲ್ಲದಿದ್ದರೆ ಒಬ್ಬರಿಗೊಬ್ಬರಿಗೆ ಪ್ರೀತಿಸುವ ಸಮಸ್ಯೆನೇ ಬರುತ್ತಿರಲಿಲ್ಲ. ಅವರು ಪ್ರೀತಿಸತಕ್ಕಂತಹ ಸಮಯದಲ್ಲಿ ಇವರಿಬ್ಬರನ್ನು ಮದುವೆಮಾಡಬೇಕೆಂದು ಹೇಳಿದಾಗ, ವೈಯುಕ್ತಿಕವಾದ ದ್ವೇಷದಿಂದ ಅವರ ಸೋದರ ಮಾವ ಕೆಂಪೇಗೌಡ ಮತ್ತು ಕುಳೇಗೌಡ ಇಬ್ಬರ ಕಾರಣದಿಂದ ಆ ಹುಡುಗ ಹುಡುಗಿ ಮದುವೆ ಆಗುತ್ತಿಲ್ಲ ಅಷ್ಟೇ ಹೊರತು ಮಧ್ಯಸ್ಥರು ಸರಿಯಾಗಿದ್ದರೆ ಯಾವ ಸಮಸ್ಯೆಯೂ ಇರಲಿಲ್ಲ. ಅದಕ್ಕೆ ಸರ್ಕಾರ ಪ್ರವೇಶ ಮಾಡಿ ಈ ಕಾರ್ಯಕ್ರಮ ಮಾಡಬೇಕೆಂದು ಹೇಳಿದ್ದು. ಇದು ಬಲವಂತದ ಮದುವೆ ಪ್ರಶ್ನೆ ಅಲ್ಲ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್:- ನಾನು ಉದಾಹರಣೆಗೆ ಹೇಳಿದೆ. ಒಂದು ಕೇಸ್ ಈ ತರಹ ಇರಬಹುದು, ಆದರೆ ಬಹಳಷ್ಟು ಇದೆ. ಮಂಡ್ಯದಲ್ಲಿ ಒಬ್ಬ ಹುಡುಗಿಗೆ ಅನ್ಯಾಯವಾದಾಗ ಅವರ ತಂದೆ ತಾಯಿಗಳಿಗೆ ಕರೆಸಿ ಕೇಳಿದರೆ ಪೋಲೀಸ್ ಸಬ್ ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಬೈದು ಕಳುಹಿಸಿದ್ದರು. ಏನು ಮಾಡಿಕೊಳ್ಳುತ್ತೀರಿ ಮಾಡಿಕೊಳ್ಳಿ, ನಮ್ಮ ಮಗ ಏನೋ ಒಪ್ಪಿಬಿಟ್ಟಿದ್ದ, ನಾವು ಮದುವೆ ಮಾಡಿಕೊಡುವುದಿಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಈ ಭಂಡತನ ಕೂಡ ತೋರಿಸಿದ್ದಾರೆ. ನಾನೇ ಒಂದು ತಿಂಗಳ ಕಾಲ ಹೋರಾಟ ಮಾಡಿದೆ ಅದು ಆಗಲಿಲ್ಲ. ಕೊನೆಗೂ ಆ ಹುಡುಗಿಗೆ ಆಗಿನ ವಿಜಯಕುಮಾರ್ ಎಂಬ ಎಸ್‌ಪಿ ಎಂಬ ಹೆಸರನ್ನು ಆಕೆಯ ಮಗುವಿಗೆ ಇಟ್ಟಿದ್ದು ಈಗ ತಾಯಿಗೆ ಕೆಲಸ ಕೊಡಿಸಿದ್ದೇವೆ, ತಾಯಿ ಮಗುವನ್ನು ಸಾಕಿಕೊಂಡಿದ್ದಾಳೆ. ಕೊನೆಗೂ ಅವನು ಮದುವೆನೆ ಆಗಲಿಲ್ಲ. ಅವನಿಗೆ ಶಿಕ್ಷೆಯೂ ಆಗಲಿಲ್ಲ. ಏಕೆಂದರೆ ಕಾನೂನಿನಿಂದ ನುಣುಚಿಕೊಂಡ. ಹೀಗೆ ಬಹಳಷ್ಟು ಕೇಸ್‌ಗಳಿವೆ. ಯಾವುದೇ ಒಂದು ರೀತಿಯಿಂದ ಹೆಣ್ಣನ್ನು ಶೋಷಣೆ ಮಾಡುವಂತಹ ಈ ಪದ್ದತಿ ಏನಿದೆ, ಈ ನೀಚ ಪದ್ಧತಿ ಹೋಗಬೇಕಾದರೆ ಹೆಣ್ಣಿಗೂ ಕೂಡ ಒಂದು ಗೌರವಯುತವಾದ ಸ್ಥಾನ ಸಿಗಬೇಕು. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ 35,000 ಚುನಾಯಿತ ಮಹಿಳಾ ಪ್ರತಿನಿಧಿಗಳಿದ್ದಾರೆ. ಆ ವಿಷಯದಲ್ಲಿ ನಾನು ಎರಡು ಮಾತನಾಡುವುದಿಲ್ಲ. ಮಹಿಳೆಯರಿಗೆ ಎಷ್ಟು ಗೌರವ ಕೊಡಬೇಕು, ಅಷ್ಟು ಕೊಟ್ಟಿದೆ, ಮತ್ತು ಕೊಡುತ್ತಾ ಬಂದಿದೆ. ಈ ವಿಷಯದಲ್ಲಿ ಎರಡು ಮಾತಿಲ್ಲ. ಇದನ್ನು ನಾವು ಒಳಹೊಕ್ಕು ನೋಡಿದಾಗ ಮಹಿಳೆಯರಿಗೆ ಕೇವಲ ಪ್ರಾತಿನಿಧ್ಯಗಳನ್ನು ಕೊಟ್ಟರೆ ಸಾಲದು ಅವಳಿಗೆ ಗೌರವದಿಂದ ಬಾಳುವಂತಹ ವಾತಾವರಣ ಸೃಷ್ಟಿಯಾಗಿಲ್ಲ. ಇದಕ್ಕೆ ಏನಾದರೂ ಉಪಾಯ ಹುಡುಕುವುದಾದರೆ ಅದನ್ನು ಶಿಕ್ಷಣದಿಂದಲೇ ಮಾಡಬೇಕು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಮೊದಲು ನಾವು ಪಾಠಶಾಲೆಗಳಿಗೆ ಮಕ್ಕಳನ್ನು ಕಳುಹಿಸುವಾಗ ಹೆಣ್ಣು ಮತ್ತು ಗಂಡು ಎನ್ನುವಂತಹ ಬೇಧವನ್ನು ಮಾಡುತ್ತೇವೆ. ಅದು ಮೊದಲಿನಿಂದ ನಡೆಯುತ್ತಾ ಬಂದಿದೆ. ಇನ್ನು ನಡೆಯುತ್ತಿದೆ. ಅದು ದೈಹಿಕವಾಗಿ ಮಾತ್ರವಲ್ಲ ಮಾನಸಿಕವಾಗಿಯೂ ನಾವು ಭೇದವನ್ನು ಮಾಡುತ್ತಿದ್ದೇವೆ. ಹೆಣ್ಣುಮಗಳು ಹುಟ್ಟಿದಾಗ ಅವಳಿಗೆ ಒಡವೆಗಳನ್ನು ಮಾಡಿಸುತ್ತಾರೆ ಅವಳ ತಂದೆ ತಾಯಿ ಆದರೆ ಅವಳ ಜ್ಞಾನದ ಬಗ್ಗೆ ಅವರು ಗಮನವನ್ನು ಕೊಡುವುದಿಲ್ಲ. ಈಗೀಗ ಕೆಲವು ಮಧ್ಯಮ ಮತ್ತು ಮೇಲು ವರ್ಗದ ಜನರು ಹೆಣ್ಣು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಗಂಡಿಗೆ ಯಾವ ರೀತಿ ವಿದ್ಯೆ ಕೊಡುತ್ತಾರೆ, ಅವನಿಗೆ ಬೇರೆ ಬೇರೆ ಕಸಬುಗಳ ಬಗ್ಗೆ, ಅವನು ದುಡಿದು ತಿನ್ನುವಂತಹ ದಾರಿಯನ್ನು ತೋರಿಸುತ್ತಾರೆ, ಆ ರೀತಿಯಲ್ಲಿ ಹೆಣ್ಣುಮಕ್ಕಳನ್ನು ಸಾಕುವುದಿಲ್ಲ. ಎಲ್ಲಿಯವರೆಗೆ ಈ ಪದ್ಧತಿ

ಬದಲಾವಣೆಯಾಗುವುದಿಲ್ಲ ಅಲ್ಲಿಯವರೆಗೆ ಈ ವರದಕ್ಷಿಣೆ ಕೇಳುವ ಒಂದು ನೀಚ ಪದ್ಧತಿ ಮುಂದುವರೆದುಕೊಂಡು ಹೋಗುತ್ತದೆ. ಇವರು ಕದ್ದು ಮುಚ್ಚಿ ಕೊಡುತ್ತಲೇ ಹೋಗುತ್ತಾರೆ. ಇದನ್ನು ಹೋಗಲಾಡಿಸಬೇಕಾದರೆ ಪ್ರಾಥಮಿಕ ಶಿಕ್ಷಣದಲ್ಲಿ ಮತ್ತು ಶಾಲಿ-ಕಾಲೇಜುಗಳ ಪಠ್ಯ ಪುಸ್ತಕಗಳಲ್ಲಿ ಹೆಣ್ಣಿನ ಬಗ್ಗೆ ಗೌರವ ಭಾವನೆ ತಾಳುವ ರೀತಿಯಲ್ಲಿ ಪಠ್ಯಗಳನ್ನು ರಚನೆ ಮಾಡಬೇಕು. ಮತ್ತು ಸಮಾಜ ತಾನು ಮೊದಲಿನಿಂದ ನಡೆದುಕೊಂಡು ಬಂಧ ದೃಷ್ಟಿಕೋನವನ್ನು ಬದಲಾವಣೆ ಮಾಡಬೇಕು. ಇವತ್ತು ಸಾಕಷ್ಟು ಮಹಿಳಾ ಸಂಘಟನೆಗಳು ಇವೆ. ಆ ಮಹಿಳಾ ಸಂಘಟನೆಗಳು ಅಂದರೆ ಕೆಲವು ಪುರುಷರು ಗೇಲಿ ಮಾಡುತ್ತಾರೆ ಅಲ್ಲಿ ಹೋಗಿ ಅವರು ಸೀರೆ ಬಗ್ಗೆ ಮತ್ತು ಒಡವೆಗಳ ಬಗ್ಗೆ ಮಾತನಾಡುತ್ತಿರುತ್ತಾರೆ ಎಂದು. ಕೆಲವು ಮಟ್ಟದಲ್ಲಿ ಅದು ನಿಜ ಇರಬಹುದು. ಅದು ಶತಮಾನಗಳಿಂದ ತಲೆಯಲ್ಲಿ ಬಂದದ್ದು. ಅದು ಸ್ವಲ್ಪ ಇದ್ದೇ ಇರುತ್ತದೆ. ಆದರೆ ಶೇ. 40, 50 ರಷ್ಟು ಬದಲಾವಣೆಯಾಗಿವೆ. ನಾನು ಹೇಳುವುದು ಬರೀ ಮಹಿಳೆ ಬದಲಾವಣೆಯಾಗುವುದು ಅಲ್ಲ, ಪುರುಷರಲ್ಲಿಯೂ ಕೂಡ ಬದಲಾವಣೆಯಾದಾಗ ಮಹಿಳೆಗೆ ಆಗಿರತಕ್ಕ ಶೋಷಣೆಯನ್ನು ನಾನು ಮಾತನಾಡಿದ್ದೇನೆ. ಕುಡಿಯುವ ನೀರಿನ ವ್ಯವಸ್ಥೆಯಾಗಿದೆ. ಆದರೆ ಮನೆಗಳನ್ನು ಕಟ್ಟುವಂತಹ ವ್ಯವಸ್ಥೆ ಏನು ಇದೆ ಅದು ಸರಿಯಾದ ರೀತಿಯಲ್ಲಿ ಹಂಚಿಕೆಯಾಗಿಲ್ಲ. ಈ ಅಧಿಕಾರ ವಿಕೇಂದ್ರೀಕರಣ ಆಗುವಂತಹ ಸಮಯದಲ್ಲಿ ಅಲ್ಲಿ ಇರುವಂತಹ ಅಧಿಕಾರಿಗಳು, ಪ್ರತಿನಿಧಿಗಳ ಬಗ್ಗೆ ಬಹಳ ಕೀಳಾಗಿ ಕಾಣುವಂತಹ ವ್ಯವಸ್ಥೆ ಇದೆ. ಇದನ್ನು ಸರಿಪಡಿಸಬೇಕಾದರೆ ಈ ಪ್ರತಿನಿಧಿಗಳನ್ನು ಸ್ವಲ್ಪಮಟ್ಟಿಗೆ ವಿದ್ಯಾವಂತರಾಗುವಂತೆ ಮಾಡಬೇಕು, ಅದನ್ನು ಗಮನದಲ್ಲಿ ಇಟ್ಟುಕೊಂಡು ನಾವು ಚುನಾಯಿತ ಪ್ರತಿನಿಧಿಗಳನ್ನು ತಂದಾಗ ಸ್ವಲ್ಪಮಟ್ಟಿಗೆ ಈ ಅಧಿಕಾರಿಗಳು ಗೌರವದಿಂದ ಸರಿಯಾಗಿ ದಕ್ಷತೆಯಿಂದ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನು ಗಮನಿಸಬೇಕಾದುದು ಮುಖ್ಯ ಅಂಶ. ಇನ್ನು ಈ ದೂರದರ್ಶನ ಮತ್ತು ಮಾಧ್ಯಮಗಳು ಬಹಳ ಹೀನವಾಗುತ್ತಾ ಇವೆ. ಇವು ಯಾವ ರೀತಿಯ ಚಿತ್ರಣ ಮಾಡುತ್ತಾರೆ ಎಂದರೆ ಹಿಂದೆ ಅನೇಕ ಶತಮಾನಗಳ ಹಿಂದೆ ಏನು ಹೇಳಿದರು ಅದನ್ನು ಈಗ ಹೇಳುತ್ತಾ ಹೋಗುತ್ತಿದ್ದಾರೆ. ಇದು ಯಾರಿಗೂ ಕೂಡ ಗೌರವ ತರುವಂತಹ ಸಂಗತಿಯಲ್ಲ. ಈಗ ಒಂದು ಜಾಹಿರಾತನ್ನು ತೋರಿಸುತ್ತಾರೆ. ಅದರಲ್ಲಿ ಹೆಣ್ಣಿನ ಅವಶ್ಯಕತೆ ಇರುವುದಿಲ್ಲ. ಆದರೂ ಕೂಡ ಹೆಣ್ಣನ್ನು ತೋರಿಸುತ್ತಾರೆ. ಇಂತಹ ಅಗತ್ಯ ಇಲ್ಲದ ಕಡೆ ತೋರಿಸುವಂತಹ ಪದ್ಧತಿಯನ್ನು ಖಂಡಿಸಬೇಕಾಗುತ್ತದೆ. ಹೆಣ್ಣು ಹರಾಜಿಗೆ ಇಟ್ಟ ವಸ್ತುವಲ್ಲ; ಅವಳಿಗೂ ಕೂಡ ಒಂದು ಗೌರವ ಇದೆ ಎನ್ನುವುದನ್ನು ಈ ಮಾಧ್ಯಮಗಳು ಅರ್ಥಮಾಡಿಕೊಂಡಲ್ಲಿ ಒಳ್ಳೆಯದು. ಇನ್ನು ಈ ಪ್ರಳಯದ ಬಗ್ಗೆ ಬಹಳ ಮೂಢನಂಬಿಕೆ ಬಂದು ಬಿಟ್ಟಿದೆ. ಈ ಮೂಢನಂಬಿಕೆ ಬರಲು ಕಾರಣ ವಿದ್ಯೆ ಇಲ್ಲದೆ ಇರುವುದು. ಮತ್ತು ಸರಿಯಾದ ವೈಚಾರಿಕೆ ಇಲ್ಲದಿದ್ದಾಗ ಈ ರೀತಿಯಾಗುತ್ತವೆ. ಈ ಕೇಂದ್ರದಲ್ಲಿ ಯಾವುದಾದರೂ ಒಂದು ಕೋಮವಾದಿ ಪಕ್ಷ ಬಂದರೆ ಅದು ಪ್ರಳಯವಾದ ಹಾಗೆಯೇ ಎಂದು ನಾನು ಭಾವಿಸುತ್ತೇನೆ. ಅದನ್ನು ಬಹಳಷ್ಟು ಜನರು ಅರ್ಥಮಾಡಿಕೊಂಡಿಲ್ಲ. ನಾವೆಲ್ಲಾ ಪ್ರಳಯ ಎಂದರೆ ಜಗತ್ತು ಮುಳುಗುತ್ತದೆ ಎಂದು ತಿಳಿದಿದ್ದೇವೆ. ಆ ರೀತಿ ಅಲ್ಲ, ಬಹುಶಃ ಈ ರೀತಿ ಎಂದು ಹೇಳಬಹುದು. ಜನರಿಗೆ ಮೋಸವಾಗುವಂತಹ, ವಂಚನೆ ಆಗುವಂಥ ಜನರ ಮನಸ್ಸನ್ನು ಒಂದು ಮೊಗ್ಗಿನಲ್ಲಿ ಇಡುವಂತಹ ಪಕ್ಷ ಬಂದಿದ್ದೇ ಆದರೆ ಅದೂ ಕೂಡ ಪ್ರಳಯ ಎಂದು ಭಾವಿಸುತ್ತೇವೆ. ಸರ್ಕಾರದವರು 5 ವರ್ಷ ಕಾಲ ಸರಿಯಾದ ರೀತಿಯಲ್ಲಿ ಅವು ಸ್ಥಿರವಾಗಿ ನಿಂತು ಜನರಿಗೆ ಸೇವೆಯನ್ನು ಮುಟ್ಟಿಸುವಂತಹ ದಿಕ್ಕಿನಲ್ಲಿ

ನಾವು ಕೆಲಸವನ್ನು ಮಾಡಬೇಕಾಗಿದೆ. ಸರ್ಕಾರ ಕೂಡ ಇವತ್ತು ಸರಿಯಾದ ಯೋಜನೆಗಳನ್ನು ಹಾಕಿಕೊಳ್ಳಬೇಕು, ನಿಯಮಗಳನ್ನು ಹಾಕಿಕೊಳ್ಳಬೇಕು. ಸರ್ಕಾರ ಸರಿಯಿಲ್ಲ ಎಂದಾಗ ಅದನ್ನು ಮುರಿಯುವುದು, ಎಲ್ಲೋ ಓಡಿ ಹೋಗುವುದು, ಯಾರನ್ನೋ ತರಲು ನೋಡುವುದು, ಇದರಲ್ಲಿಯೇ ನಮ್ಮ ಶಕ್ತಿಯ ವ್ಯಯವಾದರೆ ನಾವು ಜನರ ಕೆಲಸವನ್ನು ಮಾಡುವುದು ಯಾವಾಗ? ಈ ಐದು ಕೋಟಿ ಜನಸಂಖ್ಯೆಯಲ್ಲಿ ಕೆಲವರಿಗೆ ಮಾತ್ರ ಈ ಕೆಲಸ ಮಾಡುವಂತಹ ಅವಕಾಶ ಸಿಕ್ಕಿದೆ. ಹಿರಿಯ ಅಧಿಕಾರಿಗಳಾಗಿರಬಹುದು, ಶಾಸಕರಾಗಿರಬಹುದು, ಇದು ಏನೂ ಕಡಿಮೆ ಜವಾಬ್ದಾರಿ. ಕೆಲಸವಲ್ಲ. ನಮ್ಮ ಕ್ಷೇತ್ರವನ್ನು ಪುಣ್ಯಕ್ಷೇತ್ರವೆಂದು ಭಾವಿಸಿ ನಮ್ಮ ಕೆಲಸವನ್ನು ನಾವು ಸರಿಯಾದ ದಿಕ್ಕಿನಲ್ಲಿ ಆಲೋಚನೆ ಮಾಡಿ ಕೆಲಸ ಮಾಡಿದಾಗ ಈ ಸರ್ಕಾರವನ್ನು ಬೀಳಿಸುವುದು, ನಿಲ್ಲಿಸುವುದು ಇಂತಹ ಕೆಟ್ಟ ಭಾವನೆಗಳು ತಲೆಯಿಂದ ಹೋಗಿ ಒಳ್ಳೆಯ ರೀತಿಯಲ್ಲಿ ನಮ್ಮ ಅವಧಿ ಮುಗಿಸಿ ಆಮೇಲೆ ಮತದಾರನು ಮುಂದೆ ಹೋಗಬೇಕು, ಅವನಿಗೆ ಇಷ್ಟವಿದ್ದರೆ ಸ್ವೀಕರಿಸುತ್ತಾರೆ, ಇಲ್ಲದಿದ್ದರೆ ದೂರ ಸರಿಸುತ್ತಾರೆ. ಅದನ್ನು ಬಿಟ್ಟು ನಡುವೆ ಕೆಟ್ಟ ಮಾಡಿ ನಮ್ಮ ಸಮಯವನ್ನು ಇದರಲ್ಲಿಯೇ ವ್ಯರ್ಥ ಮಾಡುವುದು ಬೇಡ, ಒಂದೊಂದು ನಿಮಿಷಗಳನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳೋಣ ಎನ್ನುವ ಮಾತನ್ನು ನನಗೆ ನಾನೇ ಹೇಳಿಕೊಳ್ಳುವ ರೀತಿಯಲ್ಲಿ ತಮ್ಮ ಮುಂದೆ ಇಡುತ್ತೇನೆ. ಇನ್ನು ಹಸಿರು ಕಾರ್ಡ್ ವಿಷಯದಲ್ಲಿ ಸಚಿವರಿಗೆ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದ್ದಾರೆ, ಆ ವಿಷಯವನ್ನು ನಾನು ಎತ್ತಲು ಹೋಗುವುದಿಲ್ಲ. ಆದರೂ ಎತ್ತುವಂತಹ ತೀವ್ರತೆ ಅದರಲ್ಲಿ ಇದೆ. ಈ ಸಾರಿಯ ಚುನಾವಣೆಯಲ್ಲಿ ಅದು ಬಹಳ ಪರಿಣಾಮವನ್ನು ಬೀರಿದೆ. ಯಾರು ಅರ್ಹರಿಲ್ಲ, ಯಾರು ಮೋಸದಿಂದ ಈ ಕಾರ್ಡನ್ನು ತೆಗೆದು ಕೊಂಡಿದ್ದಾರೆ ಅವುಗಳನ್ನು ಆದಷ್ಟು ಬೇಗ ತಿರುಗಿ ಕೊಡಬೇಕಾಗಿದೆ. ಕಾರ್ಡನ್ನು ತೆಗೆದುಕೊಂಡರು ನಮಗೆ ಮೋಸ ಮಾಡಿದ್ದರು, ನಮ್ಮಿಂದ ಕಿತ್ತುಕೊಂಡರು ಎನ್ನುವ ಕೂಗು ಜನರಲ್ಲಿ ಕೇಳಿ ಬರುತ್ತಾ ಇದೆ. ಅವರು ಕಾಯುತ್ತಿದ್ದಾರೆ ಆದ್ದರಿಂದ ಅವುಗಳನ್ನು ಅರ್ಹರಿದ್ದವರಿಗೆ ತಿರುಗಿ ಕೊಡಬೇಕು. ಮತ್ತು ಜನರ ಮನಸ್ಸಿಗೆ ಸಂತೋಷವಾಗುವ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ, ನಮ್ಮ ರಾಜ್ಯಪಾಲರ ಮಂಡಿಸಿದ ಭಾಷಣದ ವಂದನಾ ನಿರ್ಣಯದಲ್ಲಿ ನಾನು ಸಂತೋಷದಿಂದ ಭಾಗವಹಿಸಿ ಅದಕ್ಕೆ ಪೂರಕವಾದ ಮಾತನ್ನು ಆಡಿದ್ದೇನೆ. ನಮಸ್ಕಾರ.

+ ಶ್ರೀ ಡಿ.ವಿ. ಸದಾನಂದಗೌಡ(ಪುತ್ತೂರು):- ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಈಗಾಗಲೇ ಮಾತನಾಡಿದ ಆಡಳಿದ ಪಕ್ಷದ ಕೆಲವರು ರಾಜಕೀಯ ಕ್ಷೇತ್ರ ಎಂದರೆ ಪುಣ್ಯಕ್ಷೇತ್ರ ಎಂದು ಹೇಳಿದರು. ಯಾವುದೇ ಪುಣ್ಯಕ್ಷೇತ್ರದಲ್ಲಿರುವಂಥ ವ್ಯಕ್ತಿಗಳು ಪಾಪ ಮಾಡಬಾರದು. ನಮ್ಮ ಹಿರಿಯರು ಒಂದು ಶ್ಲೋಕವನ್ನು ಹೇಳಿದ್ದಾರೆ. "ಅನ್ಯಕ್ಷೇತ್ರೇ ಕೃತಂ ಪಾಪಂ, ಪುಣ್ಯಕ್ಷೇತ್ರೇ ವಿನಶ್ಯತಿ ಪುಣಕ್ಷೇತ್ರ ಕೃತಂ ಪಾಪಂ, ವಜ್ರಲೇಪೇತ್ ಭವಿಷ್ಯತಿ ಎಂದು ಹೇಳಿದ್ದಾರೆ" ಯಾವುದೇ ಅನ್ಯಕ್ಷೇತ್ರದಲ್ಲಿ ಕೆಲಸ ಮಾಡುವಂಥ ಜನ ಪಾಪ ಮಾಡಿದರೆ ಯಾವುದಾದರೂ ಪುಣ್ಯಕ್ಷೇತ್ರಕ್ಕೆ, ಮೆಕ್ಕಾಕ್ಕೋ, ಕಾಶಿಗೋ, ಮಥುರಾಕ್ಕೋ ಅಥವಾ ತಿರುಪತಿಗೆ ಹೋಗುವಂಥದ್ದು ಅಥವಾ ಬೇರೆ ಯಾವುದಾದರೊಂದು ಪುಣ್ಯಕ್ಷೇತ್ರಕ್ಕೆ ಹೋಗಿ ನಮ್ಮ ಪಾಪವನ್ನು ಪರಿಹಾರ ಮಾಡಿಕೊಳ್ಳಬಹುದು. ಆದರೆ ಪುಣ್ಯಕ್ಷೇತ್ರದಲ್ಲಿರುವವರು ಪಾಪ ಮಾಡಿದರೆ, ವಜ್ರಲೀಪಿ ಭವಿಷ್ಯತಿ, ಅಂದರೆ ವಜ್ರದ ರೀತಿಯಲ್ಲಿ, ವಜ್ರ ಕವಚವಾಗಿ ಅದು ಅವನಿಗೆ ಅವನ ಮಕ್ಕಳಿಗೆ, ಅವನ ಸಂತಾನಕ್ಕೆ ಅದು ಅಂಟಿಕೊಳ್ಳುತ್ತದೆ ಹಾಗೂ ಆ ಪಾಪದಿಂದ ಮುಕ್ತ ಆಗಲಿಕ್ಕೆ ಆಗುವುದಿಲ್ಲ.

ಈಗ ಏನು ಪುಣ್ಯಕ್ಷೇತ್ರ ಎಂದು ಹೇಳಿದ್ದಾರೆ, ಅಲ್ಲಿ ಮೂರು ವರ್ಷದಿಂದ ಇವರು ಏನು ಮಾಡಿದ್ದಾರಲ್ಲಾ, ಇದು ಅವರಿಗೆ ವಜ್ರಲೀಪಿ ಭವಿಷ್ಯವಲ್ಲವೇ? ಏಕೆಂದರೆ ಇವರು ಯಾವ ಜನರಿಗೆ ಯಾವ ಕೆಲಸ ಮಾಡಿದ್ದಾರೆಂದು ನಾವು ಇವೊತ್ತು ಕೇಳಬೇಕಾಗಿದೆ. ಕಳೆದ ಮೂರು ವರ್ಷ ಸತತವಾಗಿ ಅವರು ಏನು ಕೆಲಸವನ್ನು ಮಾಡಬೇಕಾಗಿತ್ತೋ ಆ ಕೆಲಸವನ್ನು ಮಾಡದೆ, ಕರ್ತವ್ಯ ಪ್ರಜ್ಞೆಯ ಅರಿವಿಲ್ಲದೆ ಕೇವಲ ಅಂಕಿ ಅಂಶಗಳ ಆಧಾರದ ಮೇಲೆ ಪ್ರಚಾರಕ್ಕಾಗಿ ವಿಚಾರಗಳನ್ನು ಹೊಂದಾಣಿಕೆ ಮಾಡಿಕೊಳ್ಳುವಂಥ ಪ್ರಯತ್ನಗಳನ್ನು ಮಾತ್ರ ಮಾಡಿದ್ದಾರೆಯೇ ಹೊರತು ಆಡಳಿತ ಮಾಡುವಂಥ ಪಕ್ಷ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜನಹಿತ ಕಾರ್ಯಕ್ರಮಗಳನ್ನು ಮಾಡಲಿಲ್ಲ. ಈಗಾಗಲೇ ಅವರ ಪಾಪದ ಕೊಡ ತುಂಬಿದೆ. ಅದರ ಅರಿವು ಅವರಿಗೆ ಮೊನ್ನೆ ಚುನಾವಣೆಯಲ್ಲಿ ಆಗಿದೆ. ಆದಕಾರಣ ಇನ್ನು ಮುಂದಾದರೂ ಯಾವುದೇ ಸಂದರ್ಭದಲ್ಲಿ ಪ್ರಚಾರ ಪ್ರೀಯರಾಗಬೇಡಿ ಎಂದು ನಾನು ವಿನಂತಿ ಮಾಡಿಕೊಳುತ್ತಿದ್ದೇನೆ. ಅದರ ಬದಲು ವಿಚಾರ ಪ್ರೀಯರಾಗಿ. ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ಕೇವಲ ಅಂಕಿ ಅಂಶಗಳ ಆಧಾರದಲ್ಲಿ ಘೋಷಣೆಗಳನ್ನು ಮಾಡಿದರೆ ಇದರಿಂದ ಯಾವುದೇ ಕಾರ್ಯಕ್ರಮ ಅನುಷ್ಠಾನ ಆಗುವುದಿಲ್ಲ. ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ಪ್ರತಿಯೊಂದು ಸಂಗತಿಗಳಲ್ಲಿ ಕೂಡ ಇಷ್ಟು ಕೋಟಿ ರೂಪಾಯಿಗಳನ್ನು ನಾವು ಕ್ರೂಢೀಕರಣ ಮಾಡಿದ್ದೇವೆ. ಇಷ್ಟು ಕೋಟಿ ರೂಪಾಯಿಗಳನ್ನು ನಾವು ಅನುಷ್ಠಾನ ಮಾಡಲಿಕ್ಕೆ ಮಾಡುತ್ತೇವೆ ಎಂದು ಹೇಳಿದ್ದಾರೆಯೇ ಹೊರತು ಯೋಜನೆಗಳನ್ನು ಅನುಷ್ಠಾನ ಮಾಡುವ ರೀತಿ ರಿವಾಜುಗಳನ್ನು ಹೇಳಲಿಲ್ಲ. ಕೇಳಲ ಅಂಕಿ ಅಂಶಗಳ ಆಧಾರದ ಒಂದು ಕಿರು ಹೊತ್ತಿಗೆ ಆಗಿದೆಯೇ ಹೊರತು ನಿಜವಾಗಿ ಒಂದು ರಾಜ್ಯಕ್ಕೆ ಭವಿಷ್ಯದಲ್ಲಿ ಕೊಡತಕ್ಕಂಥ ಯೋಜನೆಗಳ ಉಲ್ಲೇವ ಇಲ್ಲದಂಥ ಒಂದು ರಾಜ್ಯಪಾಲರ ಭಾಷಣ ಇದಾಗಿದೆ. ಆದಕ್ಕಾಗಿ ಇವೊತ್ತು ನಾನು ಹೇಳುವುದೇನೆಂದರೆ ಸರ್ಕಾರ ಈವತ್ತು ಕೆಲಸಗಳನ್ನು ಮಾಡುವಂಥ ಸಂದರ್ಭದಲ್ಲಿ ಜನ ಯಾವ ವಿಶ್ವಾಸದಿಂದ ಅವರಿಗೆ ಮತ ಕೊಟ್ಟಿದ್ದಾರೆ ಆ ವಿಶ್ವಾಸಕ್ಕೆ ಪ್ರತಿ ವಿಶ್ವಾಸವಾಗಿ ನಾವು ಕೆಲಸ ಮಾಡಿದಾಗ ಮಾತ್ರ ನಾವು ಜನ ಪ್ರತಿನಿಧಿಗಳಾಗಿ ಸಮಾಜದಲ್ಲಿ, ಪುಣ್ಯಕ್ಷೇತ್ರದಲ್ಲಿ ನಾವು ಕೆಲಸ ಮಾಡಿದ ಹಾಗೆ ಆಗುತ್ತದೆ. ಇಲ್ಲದಿದ್ದರೆ ನಾವು ಮತ್ತೆ ಪಾಪಿಗಳಾಗಿ ಸಮಾಜದ ಜನರ ಕ್ರೋಧಕ್ಕೆ ಒಳಗಾಗಿ ಪಾಪಿಗಳಾಗುವಂಥ ಸಂದರ್ಭ ನಿರ್ಮಾಣ ಆಗುತ್ತದೆ. ನಾವು ಪ್ರಾರಂಭದಲ್ಲಿ ಈ ಮಾತನ್ನು ಏತಕ್ಕೆ ಹೇಳಿದ ಎಂದರೆ ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಂಥ ರೀತಿಯಲ್ಲಿ ಆದಾಯಗಳ ಕ್ರೂಢೀಕರಣ ನಿಜವಾಗಿ ಸಮರ್ಪಕವಾಗಿ ಕಾರ್ಯಗತವಾದರೆ ಪ್ರಾಯಶಃ ಒಳ್ಳೆಯ ರೀತಿಯ ಕೆಲಸಗಳು ಆಗಬಹುದು. ಆದರೆ ಇದು ಆಗುತ್ತದಾ ಇಲ್ಲಿಯವರೆಗೆ ಮೂರು ವರ್ಷದಲ್ಲಿ ಆಗಿಲಿಲ್ಲ? ಯಾರು ಇದನ್ನು ಮಾಡಿದ್ದು? ಈ ರಾಜ್ಯದಲ್ಲಿಯ ಅಧಿಕಾರಿಗಳು ಲಂಗು ಲಗಾಮಿಲ್ಲದೆ ವರ್ತನೆ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಆಡಳಿತ ಮಾಡುವಂಥ ಆಡಳಿತ ಪಕ್ಷದವರು ಕುರ್ಚಿಗೆ ಅಂಟಿಕೊಳ್ಳುವ ಸಲುವಾಗಿ ಒಳಜಗಳಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಅವರ ಒಳ ಜಗಳದಿಂದ ಈ ಕಾರ್ಯಕ್ರಮಗಳು ಅನುಷ್ಠಾನವಾಗದಂತೆ ಮಾಡಿದಂಥ ಕೆಲಸ ಕಳೆದ ಮೂರು ವರ್ಷದಿಂದ ಆಗಿದೆ. ಅಧಿಕಾರ ಪ್ರಾರಂಭದ ದಿನದಿಂದಲೇ ಅವರ ಕಚ್ಚಾಟ ಪ್ರಾರಂಭವಾಗಿದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಮಂತ್ರಿಗಳ ಬೇರೆ ಬೇರೆ ಹೇಳಿಕೆಗಳು ನಿರ್ಧಿಷ್ಟ ರೀತಿಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ತೊಂದರೆಯಾಗುತ್ತಿರುವುದನ್ನು ನಾವು ಇವೊತ್ತು ನೋಡುತ್ತಿದ್ದೇವೆ. ಆದಕಾರಣ

ಕಾರ್ಯಕ್ರಮಗಳು ಅನುಷ್ಠಾನವಾಗಬೇಕಾದರೆ ಯೋಜನೆಗಳ ರೂಪೀಕರಣ ಒಳ್ಳೆಯ ರೀತಿಯಲ್ಲಿ ಆಗಬೇಕಾಗಿದೆ. ಜನ ತಮಗೆ ಇರುವಂಥ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಬೇಕಾಗುತ್ತದೆ. ಪ್ಯಾರಾ ಹನ್ನೊಂದರಿಂದ ಹತ್ತೊಂಭತ್ತರವರೆಗೆ ಈ ರಾಜ್ಯದಲ್ಲಿರುವಂಥ ಎಲ್ಲಾ ರಸ್ತೆಗಳ ಬಗ್ಗೆ ಎಲ್ಲದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿದ್ದಾರೆ. ಬಹುಶಃ ಇವರು ಮೊನ್ನೆ ಚುನಾವಣೆಗೆ ಹೋದಾಗ ನೋಡಿರಬಹುದು. ಕೆಲವು ಹಳ್ಳಿಗಳಿಗೆ ಇವರಿಗೆ ಹೋಗಲು ಬಿಡಲಿಲ್ಲ, ನೀವು ಬರಬೇಡಿ ವಾಪಸ್ಸು ಹೋಗಿ ಎಂದು ಹೇಳಿದ್ದಾರೆ. ಆದ್ದರಿಂದ ಹಲವಾರು ಮಾರ್ಗಗಳಲ್ಲಿ ಯಾವ ರೀತಿ ಹೊಂಡಗಳು ಇವೆ ಎಂದು ಆಡಳಿತ ಪಕ್ಷದವರಿಗೆ ಗೊತ್ತಿಲ್ಲ. ಪ್ಯಾರಾ 11ರಿಂದ 19ರಲ್ಲಿ ಉಲ್ಲೇಖ ಮಾಡಿದ್ದಾರೆ. ಬೇರೆ ಬೇರೆ ಕಡೆಯಿಂದ ಇಷ್ಟಿಷ್ಟು ಮೊತ್ತವನ್ನು ಕ್ರೂಢೀಕರಣ ನಾವು ಮಾಡಿದ್ದೇವೆ, ಈ ರೀತಿ ವರ್ತುಲ ರಸ್ತೆಗಳು, ಈ ರೀತಿ ರಾಜ್ಯ ಹೆದ್ದಾರಿಗಳು, ಈ ರೀತಿ ರಾಷ್ಟ್ರೀಯ ಹೆದ್ದಾರಿಗಳಿಗೆ ದುಡ್ಡು ಮಾಡಿದ್ದೇವೆ ಎಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇನ್ನುವರೆಗೆ ಡಾಂಬರೀಕರಣಕ್ಕೆ ಟಾರ್ ಬರಲಿಲ್ಲ. ಹನ್ನೆರಡು ಕೋಟಿ ರೂಪಾಯಿ ಇಂಡೆಂಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಯಾವಾಗ ಮಾಡುತ್ತೀರಿ ಸ್ವಾಮಿ ಮಳೆ ಬಂದ ಮೇಲೆ ನೀವು ಮಾಡುತ್ತೀರಾ? ಯೋಜನೆಗಳನ್ನು ಅನುಷ್ಠಾನ ಮಾಡುವ ರೀತಿ ಇದಾ? ಏನು ಯಾವುದಾದರೊಂದು ಎಸ್ಟಿಮೇಟಿಗೆ ಜಿಲ್ಲಾಪಂಚಾಯ್ತಿಗೆ ಅಥವಾ ಲೋಕೋಪಯೋಗಿ ಇಲಾಖೆಗೆ ಹೋದರೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಲಿಕ್ಕೆ ಎಷ್ಟು ಸಮಯ ಬೇಕು? ಕನಿಷ್ಟ ಆರು ತಿಂಗಳ ಕಾಲ ಸಣ್ಣ ಸಣ್ಣ ಕ್ವೆರೀಸ್ ಹಾಕಿ ಕಳುಹಿಸುವಂಥದ್ದು, ನಾನೇ ಶಾಸಕನಾಗಿ ಜಿಲ್ಲಾಪಂಚಾಯತ್ತಿನ ಒಂದು ಎಸ್ಟಿಮೇಟ್ ಹೋಗಿದೆ ಅದು ಏಕೆ ಅಡ್ಮಿನಿಸ್ಟ್ರೇಟ್ ಅಪ್ರೂವಲ್ ಆಗಿಲ್ಲ ಎಂದು ಹೋಗಿ ಹೇಳಿದಾಗ ಸ್ವಾಮಿ ನೀವು ಇಂಜಿನಿಯರನ್ನು ಕಳುಹಿಸಿ ನಾಡಿದ್ದು ಕೊಡುತ್ತೇನೆಂದು ಹೇಳಿದರು. ಮೂರು ಬಾರಿ ಕಳುಹಿಸಿದರೂ ಕೊಡಲಿಲ್ಲ. ಮತ್ತೆ ಇಂಜಿನಿಯರ್‌ರವರಲ್ಲಿ ಕಾಂಟ್ರ್ಯಾಕ್ಟರ್‌ರವರನ್ನು ಕಳುಹಿಸಿ ಎಂದು ಹೇಳಿದ್ದರಂತೆ. ಮತ್ತೆ ನನಗೆ ಏಕೆ ಇದು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗುವುದಿಲ್ಲ, ಏಕೆ ಇದು ಟೆಕ್ನಿಕಲ್ ಅಪ್ರೂವಲ್ ಆಗುವುದಿಲ್ಲ ಎಂಬುದು ಗೊತ್ತಾಯಿತು. ಏಕೆಂದರೆ ಅಲ್ಲಿ ಕೂಡ ಅವರನ್ನು ಹೋಗಿ ನೋಡಬೇಕು. ಹೀಗಾದರೆ ಹೇಗೆ ಅವರು ಕೆಲಸ ಪೂರ್ತಿ ಮಾಡಬೇಕು? ಡಾಂಬರೀಕರಣ ಒಳ್ಳೆಯದು ಮಾಡಿ ಎಂದರೆ ಹೇಗೆ ಮಾಡುವುದು ಅವರು? ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಮಾಡುವಾಗಲೂ ಕೂಡ ಆ ಅಧಿಕಾರಿಯ ಪಕ್ಕಕ್ಕೆ ಕಂಟ್ರಾಕ್ಟರ್ ಹೋಗಿ ಅಲ್ಲಿ ಭ್ರಷ್ಟಾಚಾರ ನಡೆಯಬೇಕು ಎನ್ನುವಂಥ ವ್ಯವಸ್ಥೆ ಈ ಸರ್ಕಾರದಲ್ಲಿದ್ದರೆ ಬಹುಶಃ ಯಾವ ರೀತಿ ಆಗಬಹುದು ಎಂದು ನೀವು ಆಲೋಚನೆ ಮಾಡಿ ನೋಡುವಂಥ ಒಂದು ಪರ್ವಕಾಲ ಇದು. ಈ ರೀತಿಯಾದಾಗ ಬಹುಶಃ ನಾವು ಸಮರ್ಪಕವಾಗಿ ಕೆಲಸ ಮಾಡಲು ಆಗುವುದಿಲ್ಲ. ಬಹುಶಃ ನಿಮಗೆಲ್ಲಾ ಗೊತ್ತಿದೆ ನಮ್ಮ ಕರ್ನಾಟಕದಲ್ಲಿ ಯಾವ ರೀತಿ ರಸ್ತೆಗಳು ಇವೆ ಎಂದು. ಹಲವಾರು ವರ್ಷಗಳಿಂದ ಅವು ರಿಪೇರಿ ಕಾಣಲಿಲ್ಲ. ಬಹುಶಃ ಸುಮಾರು 13 ವರ್ಷದಿಂದ ರಾಜ್ಯ ಹೆದ್ದಾರಿಗಳು ರಿಪೇರಿ ಕಾಣಲಿಲ್ಲ ಎಂದು ನಾನು ಕೇಳಿದ್ದೇನೆ. ಇನ್ನು ಹೊಂಡಗಳ ಬಗ್ಗೆ ಹೇಳಬೇಕಾದರೆ, ಕಾಂಟೆಸ್ಸಾ ಕಾರ್‌ಗಳಲ್ಲಿ ಹೋಗುವಾಗ ಅವುಗಳು ಸ್ವಲ್ಪ ಗೊತ್ತಾಗಲಿಕ್ಕಿಲ್ಲ ಆದರೆ ನಮ್ಮಂಥವರು ಸಾಮಾನ್ಯವಾದ ಅಂಬಾಸಿಡರ್ ಕಾರ್‌ನಲ್ಲಿ ಹೋದರೆ ನಮ್ಮ ಮಂಗಳೂರಿನಲ್ಲಿ ಸೊಂಟಕ್ಕೆ ಹಚ್ಚುವ ಎಣ್ಣೆ ಸಿಗುತ್ತದೆ, ಅದನ್ನು ಹಚ್ಚಿ ಮನೆಯಲ್ಲಿ ಸ್ನಾನ ಮಾಡಬೇಕಾಗುತ್ತದೆ. ಆಗ ಆ ನೋವು ಹೋಗುತ್ತದೆ. ಕಾರಿನ ರಿಪೇರಿಗಳು,

ಹಾಗೂ ಅದರ ವ್ಯವಸ್ಥೆ ಯಾವ ರೀತಿ ಆಗುತ್ತದೆಂದು ದೇವರೇ ಬಲ್ಲ. ತಾವೆಲ್ಲಾ ಅದನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಅದರ ಜೊತೆಗೆ ಕಳಪೆ ಕಾಮಗಾರಿಗಳು ಆಗಿವೆ, ಇದರಿಂದ ಸೇತುವೆಗಳು ಬಿರುಕು ಬಿಟ್ಟಿವೆ. ಆದರೆ ಜೊತೆಗೆ ನಿಗಧಿತ ಸಮಯದಲ್ಲಿ ಹಣ ಸಿಗದೇ ಪೂರ್ತಿಯಾಗದ ಕಾಮಗಾರಿಗಳು, ರಸ್ತೆಯಲ್ಲಿ ಹೊಂಡವೋ, ಹೊಂಡದಲ್ಲಿ ರಸ್ತೆಯೋ ಎನ್ನುವಂಥ ಪರಿಸ್ಥಿತಿ ಗೊತ್ತಿಲ್ಲದ್ದಾಗಿದೆ. ಬಹುಶಃ ಈ ರಾಜ್ಯದ ಈ ವ್ಯವಸ್ಥೆ ಇವೊತ್ತು ಕೈಗನ್ನಡಿಯಾಗಿದೆ. ನಾವು ಕೇರಳ ರಾಜ್ಯದ ಪಕ್ಕದಲ್ಲಿರುವವರು. ಇವೊತ್ತು ಕೇರಳದಿಂದ ಕರ್ನಾಟಕಕ್ಕೆ ಬಂದಾಗ ಸ್ವಾಗತ ಎಂದು ಬೋರ್ಡು ನೋಡಬೇಕಾಗಿಲ್ಲ, ಅವರು ಮೊದಲು ಹೊಂಡಕ್ಕೆ ಬಿದ್ದ ಕೂಡಲೇ ಹೇಳುತ್ತಾರೆ ನಾವು ಕರ್ನಾಟಕಕ್ಕೆ ಬಂದಿದ್ದೇವೆ ಎಂದು. ಈ ಪರಿಸ್ಥಿತಿಯ ರಸ್ತೆಗಳು ಈ ರಾಜ್ಯದಲ್ಲಿದ್ದರೆ ನಮ್ಮ ರಾಜ್ಯದ ಪರಿಸ್ಥಿತಿ ಹೇಗೆ ಎಂದು ಆಲೋಚನೆ ಮಾಡಬೇಕು. ಏಕೆ ಇದಾಗುತ್ತದೆ. ಕನ್ನಡಿಗರು ತಲೆ ತಗ್ಗಿಸುವಂಥ ವ್ಯವಸ್ಥೆ ಇವೊತ್ತು ಕನ್ನಡ ರಾಜ್ಯದಲ್ಲಿ ಆಗುತ್ತಿದೆ. ಇದಕ್ಕೆ ಗಮನ ಕೊಡುವಂಥ ಪ್ರಯತ್ನ ಸರ್ಕಾರ ಏತಕ್ಕೆ ಮಾಡುತ್ತಿಲ್ಲ? ಇವೆಲ್ಲ ಆಲೋಚನೆ ಮಾಡುವಂಥ ಸಂಗತಿಗಳು. ನೀವು ಸಮಯಕ್ಕೆ ಸರಿಯಾಗಿ ಯಾವುದೇ ವ್ಯವಸ್ಥೆಗಳನ್ನು ಮಾಡುವುದಿಲ್ಲ. ಇವೊತ್ತು ಸಿಮೆಂಟಿಗಾಗಲೀ, ಸ್ಟೀಲಾಗಲೀ ನೀವು ಸಮಯಕ್ಕೆ ಸರಿಯಾಗಿ ಕೊಡುತ್ತೀರಾ? ನಮ್ಮಲ್ಲಿಯ ಒಂದು ಕಾಲೇಜು ಕಟ್ಟಡ ಕಳೆದ ಐದು ವರ್ಷದಿಂದ ನಡೆಯುತ್ತಿದೆ. ಅದು ಪೂರ್ತಿ ಆಗುತ್ತಿಲ್ಲ. ಮೊನ್ನೆ ನಾನು ಆ ಕಾಂಟ್ರಾಕ್ಟರ್‌ಗೆ ಕೇಳಿದರೆ ನಮಗೆ ಸಿಮೆಂಟ್ ಕೊಡಲಿಲ್ಲ, ಸ್ಟೀಲ್ ಕೊಡಲಿಲ್ಲ ಎಂದು ಹೇಳಿದರು. ಆದ್ದರಿಂದ ಸಮಯಕ್ಕೆ ಸಂದರ್ಭಕ್ಕೆ ಬೇಕಾದರೆ ಸರಿಯಾದ ವ್ಯವಸ್ಥೆಗಳನ್ನು ನೀವು ಮಾಡುತ್ತಿಲ್ಲ. ಈ ಸಂದರ್ಭದಲ್ಲಿ ಮಲೆನಾಡು ಪ್ರದೇಶಗಳಲ್ಲಿ ನೀವು ಟಾರ್ ಕೊಡಬೇಕು. ಏಕೆಂದರೆ ಅಲ್ಲಿ ಏಪ್ರಿಲ್ ಹದಿನೈದರ ನಂತರ ಮಳೆ ಬರುತ್ತದೆ. ಕೊಟ್ಟಿದ್ದೀರಾ ಸ್ವಾಮಿ ನೀವು? ರಾಜ್ಯಪಾಲರ ಭಾಷಣದಲ್ಲಿ ನಾವು ಇಷ್ಟು ಕ್ರೋಡೀಕರಣ ಮಾಡಿದ್ದೇವೆ, ಇಷ್ಟು ವ್ಯವಸ್ಥೆಗಳನ್ನು ಮಾಡುತ್ತೇವೆ ಎಂದು ಹೇಳುತ್ತೀರಲ್ಲಾ ಏತಕ್ಕೆ ಇದನ್ನು ಮಾಡಲಿಲ್ಲ? ಇದರಿಂದ ಎಷ್ಟು ಕಾಮಗಾರಿಗಳು ಅರ್ಧದಲ್ಲಿ ನಿಂತಿವೆ ಎಷ್ಟು ಕಾಮಗಾರಿಗಳು ನಾಲ್ಕೈದು ವರ್ಷಗಳಿಂದ ಅರ್ಧದಲ್ಲಿ ನಿಂತು ಇವೊತ್ತು ರಿವೈಸ್ಡ್ ಎಸ್ಟಿಮೇಟ್ ಮಾಡಿ ಹಿಂದಿನ ಕಾಮಗಾರಿಯ ಮೊತ್ತಕ್ಕಿಂತ ನಾಲ್ಕು ಪಟ್ಟು ಜಾಸ್ತಿಯಾಗಿ, ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದನ್ನು ನಾವು ನೋಡುತ್ತಿದ್ದೇವೆ. ಏಕೆ ಇದನ್ನು ಮಾಡುತ್ತಿಲ್ಲ? ಕರ್ನಾಟಕ ರಾಜ್ಯದಲ್ಲಿ ನಾವು ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಿಲ್ಲ, ಯಾವ ಕಾಮಗಾರಿಗಳು ಅರ್ಧಂಭರ್ಧದಲ್ಲಿ ನಿಂತಿವೆ ಅವುಗಳನ್ನು ಪೂರ್ತಿ ಮಾಡಿದ ನಂತರವೇ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವಂಥ ಒಂದು ವ್ಯವಸ್ಥೆಯನ್ನು ಮಾಡಿ. ಅದು ಶಾಲಾ ಕಟ್ಟಡ ಇರಬಹುದು, ಕಟ್ಟಡ ಇರಬಹುದು, ಡಾಂಬರೀಕರಣದ ವ್ಯವಸ್ಥೆ ಇರಬಹುದು ಅವುಗಳನ್ನು ಮಾಡುತ್ತೇವೆ ಎಂದು ಹೇಳಿ. ಆದರೆ ನಿಮಗೆಲ್ಲಾ ನಲವತ್ತೈದು ಮಂತ್ರಿಗಳಿಗೆ ಒಂದು ಚಟ ಇದೆ. ಅದೇನೆಂದರೆ ಹೊಸ ಕಾಮಗಾರಿಗಳಿಗೆ ಕಲ್ಲು ಹಾಕಿ ಉದ್ಘಾಟನೆ ಮಾಡುವಂಥದ್ದು. ಬಹುಶಃ ಗೋವಿಂದೇಗೌಡರನ್ನು ಮಾತ್ರ ನಾನು ಅದರಿಂದ ಹೊರಗಿಡಬೇಕಾಗಿದೆ. ಏಕೆಂದರೆ ಅವರು ನನ್ನ ಕ್ಷೇತ್ರಕ್ಕೆ ಬಂದಾಗ ನಾನು ಇದರ ಬಗ್ಗೆ ಕೇಳಿದಾಗ ನಾನು ಕೆಲಸಕ್ಕೆ ಕಲ್ಲು ಹಾಕಲಿಕ್ಕೆ ಬರುವುದಿಲ್ಲ, ಯಾವುದಾದರು ಕಾಮಗಾರಿ ಪೂರ್ತಿಯಾದರೆ ಅದರ ಉದ್ಘಾಟನೆಗೆ ಮಾತ್ರ ಬರುತ್ತೇನೆ ಎಂದು ಹೇಳಿದರು. ಬಹುಶಃ ನಿಮ್ಮ ಮಂತ್ರಿಮಂಡಲದಲ್ಲಿ ಅಪವಾದರಹಿತವಾದ ಒಬ್ಬ ಮಂತ್ರಿಗಳು ಇದ್ದಾರೆ ಅವರು ಕೇವಲ ಉದ್ಘಾಟನೆಗೆ ಮಾತ್ರ ಬರುತ್ತಾರೆ ನೀವೆಲ್ಲಾ ಅವರ

ಆದರ್ಶವನ್ನು ಪಾಲಿಸಬೇಕು. ಆದರೆ ನೀವೇನು ಮಾಡುತ್ತೀರಿ. ಮುಖ್ಯಮಂತ್ರಿಗಳು ಬಂದು ಕಲ್ಲು ಹಾಕಬೇಕು, ಉಪ ಮುಖ್ಯಮಂತ್ರಿಗಳು ಬಂದು ಕಲ್ಲು ಹಾಕಬೇಕು, ಲೋಕೋಪಯೋಗಿ ಇಲಾಖೆಯ ಸಚಿವರು ಬಂದು ಕಲ್ಲು ಹಾಕಬೇಕು. ಕರ್ನಾಟಕದ ಐದು ಕೋಟಿ ಜನತೆಗೆ ಕಲ್ಲು ಹಾಕುವಂಥ ಕೆಲಸವನ್ನು ಕಳೆದ ಐದು ವರ್ಷದಿಂದ ನೀವು ಮಾಡಿದ್ದೀರಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಐದು ಕೋಟಿ ಜನತೆಗೆ ಕಲ್ಲು ಹಾಕುವಂಥ ಕೆಲಸದಲ್ಲಿ ನನ್ನನ್ನು ಸೇರಿಸಿಕೊಂಡರಲ್ಲಾ.

ಶ್ರೀ ಡಿ.ವಿ. ಸದಾನಂದಗೌಡ:- ನಾವೇನು ಮಾಡಿದ್ದೇವೆ ಎಂದರೆ ಪ್ರತಿ ಸಂದರ್ಭಗಳಲ್ಲಿ ಕೂಡ ಯಾವುದೇ ಕಾಮಗಾರಿಗಳು ಅರ್ಧದಲ್ಲಿ ನಿಂತಾಗ, ಒಂದು ಕ್ಷೇತ್ರದಲ್ಲಿ ಹೊಸ ಶಾಸಕ ಬಂದಾಗ ಏನಾಗುತ್ತದೆ, ನಮ್ಮ ಕಾರ್ಯಕರ್ತರು ಅಪೇಕ್ಷೆ ಮಾಡುತ್ತಾರೆ, ಎಂದರೆ ಹೊಸ ಶಾಸಕ ಬಂದಿದ್ದಾರೆ ಆದಕಾರಣ ನಮ್ಮೂರಿಗೆ ಏನಾದರೊಂದು ವ್ಯವಸ್ಥೆ ಈ ಸಾರಿ ಆಗಬಹುದು ಎಂದು ತಿಳಿದುಕೊಳ್ಳುತ್ತಾರೆ. ಆ ವ್ಯವಸ್ಥೆ ಮಾಡಲಿಕ್ಕೆ ಹೋದರೆ ಇನ್ನೊಂದೂರಿನಲ್ಲಿ ಅರ್ಧದಲ್ಲಿ ನಿಂತ ಕೆಲಸ ಅಲ್ಲೇ ನಿಲ್ಲಿಸಬೇಕಾದಂಥ ಪರಿಸ್ಥಿತಿ ಉಂಟಾಗುತ್ತದೆ. ನಿಮ್ಮಲ್ಲಿ ಹೆಚ್ಚು ಹಣ ಕೇಳಿದರೆ ಇಲ್ಲ, ಇರುವ ಹಣ 45 ಕಾರು ಓಡಾಟಕ್ಕೆ 45 ಬಂಗಲೆಗಳಿಗೆ ಆಯಿತು. ಸಾಮಾನ್ಯ ಮನುಷ್ಯನ ರೀತಿ ನೀತಿಗೆ ಸ್ಪಂದನ ಮಾಡುವಂಥ ಕೆಲಸಗಳು ನಿಮ್ಮಲ್ಲಿ ಎಲ್ಲಿವೆ? ಕರ್ತವ್ಯದ ಪ್ರಜ್ಞೆ ಇದೆಯಾ ನಿಮ್ಮಲ್ಲಿ? ಸಾಮಾಜಿಕ ಕಳಕಳಿ ಇದೆಯೇ? ಜನತೆ ಕೊಟ್ಟ ವಿಶ್ವಾಸವು ನೂರಕ್ಕೆ ಒಂದು ಭಾಗವಾದರೂ.....

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ನಾನು ಕಿಲ್ಡ್ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದಲ್ಲಿರುವ ಜನ ಕೇವಲ ಜನರಿಗೆ ಮಾತ್ರ ತೊಂದರೆ ಕೊಡುವುದಿಲ್ಲ, ಈ ವಿಧಾನಸೌಧದಲ್ಲಿ ಒಬ್ಬ ಶಾಸಕರು ಮಾತನಾಡುವಾಗ ಕೂಡ ತೊಂದರೆ ಕೊಡುವಂಥ ವ್ಯಕ್ತಿಗಳು. ಇವರಿಗೆ ಸಮಾಜದ ಬಗ್ಗೆ ಕಳಕಳಿ ಇದೆಯೇ?

(ಗೊಂದಲ)

ಮಾನ್ಯ ಸದಸ್ಯರು:- ಇದು ಡೆಮಾಕ್ರಸಿ. ಡೆಮಾಕ್ರಸಿಯಲ್ಲಿ ಒಪ್ಪಿಕೊಳ್ಳಬೇಕಾದದ್ದು ಇಲ್ಲ. ನೀವು ಹೇಳುವುದನ್ನು ಹೇಳಿ. ನಾವು ಹೇಳುವುದನ್ನು ಹೇಳುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ರಸ್ತೆಗಳಲ್ಲಿ ಹೊಂಡಗಳು ಇದ್ದಂತೆ ಈ ವಿಧಾನ ಸೌಧದಲ್ಲಿ ಈ ಶಾಸಕರು. ನಮಗೆ ತೊಂದರೆ ಮಾಡುವಂಥ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಸಮಯಕ್ಕೆ ಸರಿಯಾಗಿ ಮಾಡುವಂಥ ಎಲ್ಲಾ ಕೆಲಸಗಳನ್ನು ಮಾಡಿದರೆ ಸಮರ್ಪಕವಾಗಿ ಜನರಿಗೆ ಬೇಕಾಗುವ ರೀತಿಯಲ್ಲಿ ಆಗುತ್ತದೆ. ಇವೊತ್ತು ಮಾರ್ಗದಲ್ಲಿ ಗ್ಯಾಂಗ್‌ಮೆನ್‌ಗಳು ಇದ್ದಾರಾ? ಮೊದಲು ಗ್ಯಾಂಗ್‌ಮನ್‌ಗಳಿದ್ದರು, ಅವರು ಹೊಂಡ ಬಿದ್ದರೆ ಸ್ವಲ್ಪ ಮಟ್ಟಿಗೆ ಮಣ್ಣು ಹಾಕಿಯಾದರೂ ಸಾಧಾರಣವಾಗಿ ಸಾಮಾನ್ಯ ಮನುಷ್ಯರು ನಡೆದು ಹೋಗಲು ವ್ಯವಸ್ಥೆ ಮಾಡುತ್ತಿದ್ದರು. ಈ ಸರ್ಕಾರದವರು ಏನು ಮಾಡಿದರು, ಇದ್ದ ಗ್ಯಾಂಗ್‌ಮೆನ್‌ಗಳನ್ನು ಬೇರೆ ಬೇರೆ ಆಫೀಸ್‌ಗಳಿಗೆ ಅಟೆಂಡರ್ ಆಗಿ ಕಳುಹಿಸುವಂಥ ಕೆಲಸವನ್ನು

ಮಾಡಿದರು. ಇದರಿಂದಾಗಿ ಇವೊತ್ತು ಮಾರ್ಗದ ಪರಿಸ್ಥಿತಿ ಏನಾಗಿದೆ. ಅದನ್ನು ನೋಡುವಂಥ ಜನ ಇಲ್ಲ. ಮೆಂಟೇನನ್ಸ್‌ನ್ನು ನೋಡುವ ಸಂಗತಿಯೇ ಇಲ್ಲ. ಇವರು ಕಿ.ಮೀ.ಗೆ ಮೆಂಟೆನೆನ್ಸ್‌ಗೆ ನಿಗದಿ ಮೊತ್ತವೆಷ್ಟು? ಸಾಮಾನ್ಯವಾಗಿ ಎರಡು ಹೊಂಡ ಮುಚ್ಚಲಿಕ್ಕೆ ಆಗದಂಥ ಪರಿಸ್ಥಿತಿ ಇವರದ್ದು. ಇವತ್ತು ರಸ್ತೆಯ ಇಕ್ಕೆಲದಲ್ಲಿ ಏನಾಗಿದೆ ಸ್ವಾಮಿ? ನಾವು ನೋಡುತ್ತಿದ್ದೇವೆ, ಎಷ್ಟು ಸಣ್ಣ ಸಣ್ಣ ಅಂಗಡಿಗಳು ರಾತ್ರಿ ಬೆಳಗಾದರೆ ಎದ್ದು ನಿಲ್ಲುತ್ತದೆ. ಹಾಗೆ ನೀರು ಸರಬರಾಜು ಮಂಡಳಿಯವರು ನೀರಿನ ಪೈಪ್‌ಗೋಸ್ಕರ ರಸ್ತೆಯನ್ನು ಅಗೆಯುತ್ತಾರೆ, ಅದರ ರಿಪೇರಿಗಾಗಿ ಅವರನ್ನು ಕೇಳಿದರೆ ಅವರು ಲೋಕೋಪಯೋಗಿ ಇಲಾಖೆಯವರನ್ನು ಕೇಳಿ ಎಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ನೀರು ಸರಬರಾಜು ಮಂಡಳಿಯವರನ್ನು ಕೇಳಿ ಎಂದು ಹೇಳುತ್ತಾರೆ. ಇವರಿಬ್ಬರ ಜಂಜಾಟದಲ್ಲಿ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ. ಇನ್ನು ಡಾಂಬರ್ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಹಾಗೆಯೇ ಜನ ನಿಬಿಡ ಪ್ರದೇಶಗಳಲ್ಲಿ ಈ ಸಣ್ಣ ಸಣ್ಣ ಗುಡಿಸಲುಗಳು ಹಾಗೂ ಅನಧಿಕೃತವಾಗಿ ಎದ್ದ ಕಟ್ಟಡಗಳನ್ನು ಇನ್ನು ಸ್ವಲ್ಪ ಸಮಯದಲ್ಲಿ ತೆಗೆಯಲು ಕಷ್ಟವಾಗುತ್ತದೆ. ಏನು ಮಾಡಬೇಕು ಅದನ್ನು. 1.50 ಪಿ.ಎಂ.ಚೆನ್ನಾಗಿ ರೋಲರ್ ಅದರ ಮೇಲೆ ಹೋಗಬೇಕು. ನೀರು ಹಾಕಿ ಮಣ್ಣು ಹಾಕಿ ಸೆಟ್ ಆದರೆ ಅದರ ಮೇಲೆ ಹಾಕಿದರೆ ಡಾಂಬರೀಕರಣ ಸರಿಯಾಗಿ ನಿಲ್ಲುತ್ತದೆ. ಏನು ಮಾಡುತ್ತಾರೆ ಸ್ವಾಮಿ ಇವರು? ಗ್ರೇಡ್ (1) ಹಾಕಿದ ಮೇಲೆ ಮಣ್ಣು ಹಾಕಿದ ಮೇಲೆ ನೀರು ಹಾಕುವುದಿಲ್ಲ. ಕುಡಿಯುವುದಕ್ಕೆ ನೀರು ಕೊಡುವುದಿಲ್ಲ, ಅದಕ್ಕೆ ಏನು ಹಾಕಬೇಕು ಎಂದು ಕೇಳುತ್ತಾರೆ. ಅದು ಪ್ರಶ್ನೆ ಬೇರೆ. ಈ ಪರಿಸ್ಥಿತಿಗಳನ್ನು ಮಾಡುವಂತಹ ಈ ಸರ್ಕಾರ ಯಾವರೀತಿಯಲ್ಲಿ ನಮ್ಮ ಮುಂದಿನ ಭವಿಷ್ಯವನ್ನು ನಿರ್ಮಾಣ ಮಾಡಬಹುದು? ನಾವು ಇದನ್ನು ಆಲೋಚನೆ ಮಾಡುವಂತಹ ಅವಶ್ಯಕತೆ ಇಲ್ಲವೆ? ಇವತ್ತು ಇದಕ್ಕೆ ಬೇಕಾದಂತಹ ಹೊತ ಯೋಜನೆಗಳನ್ನು ಆಲೋಚನೆ ಮಾಡಬೇಕು. ಕೇವಲ ಹಿಂದಿನಿಂದ ನಡೆದುಕೊಂಡು ಬಂದ ರೀತಿಯಲ್ಲಿ ಡಾಂಬರೀಕರಣ ಅಲ್ಲ. ಹೊಸ ರೀತಿಯ ವ್ಯವಸ್ಥೆ ಎಂದರೆ ಹೊಸ ತಾಂತ್ರಿಕತೆ ಉಪಯೋಗಿಸಿಕೊಂಡು ಮಾರ್ಗದಲ್ಲಿ ಇರುವಂತಹ ವಾಹನ ದಟ್ಟಣೆಯನ್ನು ಗಮನಕ್ಕೆ ತೆಗೆದುಕೊಂಡು ಡಾಂಬರೀಕರಣ ವ್ಯವಸ್ಥೆ ಮಾಡಿದರೆ ಮಾತ್ರ ಚೆನ್ನಾಗಿ ಆಗುತ್ತದೆಯೇ ಹೊರತು ನೀವು ಕೇವಲ ಭೂಷಣಕ್ಕೆ ಆ ಮಾರ್ಗಕ್ಕೆ ಡಾಂಬರೀಕರಣ ಮಾಡುತ್ತೀರಿ. ಕೇವಲ ಬ್ಲಾಕ್ ಪೇಂಟ್ ಮಾಡಿದ ಹೇಗೆ ಮಾಡಿದರೆ ಆ ಕೆಲಸ ಚೆನ್ನಾಗಿ ಆಗುವುದಿಲ್ಲ ಸ್ವಾಮಿ, ರೋಡ್ ಟ್ಯಾಕ್ ಇವರಿದೆ ಬರುವುದು ಕಡಿಮೆ ಇದೆಯೇ? ರೋಡ್ ಟ್ಯಾಕ್ಸ್ ಎಷ್ಟು ಬರುತ್ತದೆ? ಬಂದ ರೋಡ್ ಟ್ಯಾಕ್ಸ್‌ನ್ನು ಸರಿಯಾಗಿ ಮಾರ್ಗದ ವ್ಯವಸ್ಥೆಗಳಿಗೆ ವಿನಿಯೋಗ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ಮಾರ್ಗದ ದುರವಸ್ಥೆ ಈ ರೀತಿಯಾಗುತ್ತಿರಲಿಲ್ಲ. ನಮ್ಮ ರಾಜ್ಯದ ಈ ಮಾರ್ಗಗಳಲ್ಲಿ ಇರತಕ್ಕಂಥ ಈ ದುರವಸ್ಥೆಗೆ ಕಾರಣ ಇಲ್ಲಿರತಕ್ಕಂಥ ಆಡಳಿತದವರು ಮಾತ್ರ ಅಲ್ಲ, ಅಧಿಕಾರಿಗಳೂ ಕೂಡ ಅಷ್ಟೇ ಕಾರಣ. ಏನು ಮಾಡುತ್ತಾರೆ ಅಧಿಕಾರಿಗಳು? ಅವರು ಕೊಡುವಂತಹ ಮಾಹಿತಿಗಳನ್ನು ತಪ್ಪು ಕೊಡುತ್ತಾರೆ. ಇಂಜಿನಿಯರ್ ಕೆಲವು ವ್ಯವಸ್ಥೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಕಂಟ್ರಾಕ್ಟರ್ ಜೊತೆ ಶಾಮೀಲಾಗಿ ಮಾಡುವಂತಹ ಕೆಲಸವಾಗುತ್ತದೆ. ಇವತ್ತು ಇಂಜಿನಿಯರ್ ಕಂಟ್ರಾಕ್ಟ್‌ಇಬ್ಬರೂ ಸೇರಿಕೊಂಡು ಈ ದುರಸ್ಥೆಗೆ ಕಾರಣವಾಗಿದೆ. ಆ ಇಂಜಿನಿಯರ್ ಮತ್ತು ಕಂಟ್ರಾಕ್ಟರ್ ಮೇಲೆ ಇವರಿಗೆ ಹತೋಟಿ ಇಲ್ಲ. ಇವರ ಒಳಗಿನ ಹತೋಟಿ ಮಾಡುವುದಕ್ಕೆ ಇವರಿಗೆ ಆಗದೇ ಇದ್ದ ಮೇಲೆ ಬಾಕಿಯವರ ಮೇಲೆ ಹತೋಟಿ ಮಾಡುವಂತಹ ವ್ಯವಸ್ಥೆಯನ್ನು

ಮಾಡುತ್ತೀರಾ? ಈ ರೀತಿ ಸಮರ್ಪಕವಾದಂತಹ ಒಂದು ವ್ಯವಸ್ಥೆ ಇವತ್ತು ಸರ್ಕಾರದಿಂದ ಇಲ್ಲದೆ ಸಾರಿಗೆ ವ್ಯವಸ್ಥೆ ಸರಿಆಗುತ್ತಾ ಇಲ್ಲ. ಅದಕ್ಕೆ ಸರ್ಕಾರದವರು ಅಗ್ರಹ ಮಾಡುತ್ತಿದ್ದೇನೆ, ಏನು ರೋಡ್ ಟ್ಯಾಕ್ಸ್ ಬರುತ್ತದೆ ಅದಕ್ಕೆ ಕೇಂದ್ರ ಸರ್ಕಾರದ ಪಾಲು ಏನು ಕೊಡಬೇಕೆಂದು ಇದೆ ಅದನ್ನು ಯಾವುದಾದರೂ ಮೂಲದಿಂದ ಭರಿಸಿಕೊಂಡು ಈ ರೋಡ್ ಟ್ಯಾಕ್ಸ್‌ನ್ನು ಪೂರ್ತಿಯಾಗಿ ರಸ್ತೆ ವ್ಯವಸ್ಥೆಗೆ ತೊಡಗಿಸಿಕೊಳ್ಳುವಂತಹ ಒಂದು ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ಹೊಸ ತಾಂತ್ರಿಕ ವ್ಯವಸ್ಥೆಗಳನ್ನೂ ಕೂಡ ಈ ಕಾಮಗಾರಿಗೆ ಅಳವಡಿಸಿಕೊಳ್ಳಬೇಕು. ಈಗ ಏನಾಗಿದೆ ಓಬೇರಾಯನ ಕಾಲದಲ್ಲಿ ಇದ್ದಂತಹ ತಾಂತ್ರಿಕತೆಯನ್ನು ಹಳೇ ರೀತಿಯ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿದ್ದಾರೆ. ಇದರಿಂದಾಗಿ ಈಗಿನ ವ್ಯವಸ್ಥೆಗೆ ಅದು ಸರಿ ಹೊಂದುವುದಿಲ್ಲ. ಅದಕ್ಕೋಸ್ಕರ ಆಧುನಿಕವಾದಂತಹ ಹೊಸ ತಾಂತ್ರಿಕ ವಿಧಾನಗಳ ಬಗ್ಗೆ ಅಗತ್ಯವಿದೆ. ಈ ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಂಡು ಕಾಮಗಾರಿಗಳನ್ನು ಮಾಡಿದರೆ ಅದು ಸ್ವಲ್ಪ ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸ್ವಾಮಿ, ಬಹಳ ಸಣ್ಣ ಸಂಗತಿಗಳನ್ನು ನಾನು ಉಲ್ಲೇಖ ಮಾಡಬೇಕಾಗಿದೆ. ಅಬಕಾರಿ ನೀತಿಯ ಬಗ್ಗೆ ಈ ಸರ್ಕಾರದ ಧೋರಣೆ ಏನು? ಇವತ್ತು ಅಬಕಾರಿ ಲ್ಯಾಬ್ ಇದೆ. ಇವತ್ತು ಆಡಳಿತ ಮಾಡತಕ್ಕಂಥ ಆಡಳಿತ ಮಾಡತಕ್ಕಂಥ ಆಡಳಿತ ಪಕ್ಷಕ್ಕೆ ಆ ಲಾಬಿಯವರ ಪೂರ್ತಿ ಬೆಂಬಲವಿದೆ. ಈ ಅಬಕಾರಿಯವರದ್ದು ಒಂದು ಲಾಬಿ. ಆದರೆ ಬಹುಶಃ ಈ ರಾಜ್ಯದಲ್ಲೇ ರೈತರದ್ದು ಒಂದು ಲಾಬಿಯಿಲ್ಲ. ಆದುದರಿಂದ ಇವರು ಬಚಾವ್. ಇಲ್ಲದಿದ್ದರೆ ರೈತರ ಲಾಬಿ ಇದ್ದಿದ್ದರೆ ಇವರೂ ವಿಧಾನಸೌಧ ಓಡಾಡಬೇಕಾದಂತಹ ಪರಿಸ್ಥಿತಿಯಾಗುತ್ತಿತ್ತು. ಅಬಕಾರಿ ನೀತಿಯನ್ನು ಏನು ಮಾಡಿದರು? ಅದರಲ್ಲೂ ಮುಖ್ಯವಾಗಿ ವಿಧಾನಸಭೆಯಲ್ಲಿ ಚರ್ಚೆಯಾದ ನಂತರ ಏನು ಹೇಳಿದರು ಇವರು, ಗ್ರಾಮಾಂತರ ಮಟ್ಟದಲ್ಲೆ ಸಾಮಾನ್ಯ ಪಂಚಾಯತ್ ಮಟ್ಟದಲ್ಲಿ ಸ್ವಲ್ಪ ವ್ಯವಸ್ಥೆಗಳನ್ನು ಮಾಡುತ್ತೇವೆ, ಅಲ್ಲಿ ಸಣ್ಣ ರೀತಿಯಲ್ಲಿ ಆ್ಯಕ್ಷನ ಮಾಡುವಂತಹ ವ್ಯವಸ್ಥೆಗಳನ್ನು ಮಾಡುತ್ತೇವೆ ಎಂದು ಹೇಳಿದರು. ಇದರಿಂದ ಬಹುಶಃ ಸಾವಿರಾರು ಜನ ನಿರುದ್ಯೋಗಿ ಯುವಕರು ಇವತ್ತು ಅಬಕಾರಿ ನೀತಿಗೆ ವಿರೋಧವಾಗಿದ್ದರೂ ಕೂಡ ಅವರು ಬದುಕಬೇಕು, ಕುಟುಂಬವನ್ನು ಪೋಷಣೆ ಮಾಡಬೇಕೆನ್ನುವ ದೃಷ್ಟಿಯಿಂದ ಆ್ಯಕ್ಷನ್‌ಗೆ ನಿತರು. ಇದಕ್ಕೆ ಇಷ್ಟು ಡೆಪಾಸಿಟ್ ಇಟ್ಟರೆ ಮಾತ್ರ ಆ್ಯಕ್ಷನ್‌ನಲ್ಲಿ ಭಾಗವಹಿಸಬಹುದು ಎಂದು ಸರ್ಕಾರ ನೀತಿ ಮಾಡಿತ್ತು. ಅದಕ್ಕೆ 50 ಸಾವಿರ ರೂಪಾಯಿ ಡೆಪಾಸಿಟ್ ಇಡಬೇಕಾಯಿತು. ಯುವಕರು ಮನೆಯಲ್ಲೇ ಇರುವಂತಹ ಆಭರಣವನ್ನು ಅಥವಾ ನೆರೆಯ ಫೈನಾನ್ಸ್‌ನಿಂದ ಸಾಲ ತೆಗೆದುಕೊಂಡು ಡೆಪಾಸಿಟ್ ಇಟ್ಟು ಆ್ಯಕ್ಷನ್‌ಗೆ ನಿಂತರಲ್ಲಾ ಸ್ವಾಮಿ. ಏನಾಯಿತು ಈಗ ಪರಿಸ್ಥಿತಿ? ದೊಡ್ಡದೊಡ್ಡ ಅಬಕಾರಿ ಕಂಟ್ರಾಕ್ಟ್ ದಾರರು ಕೋರ್ಟಿಗೆ ಹೋಗಿ ಸ್ಟೇ ತಂದಿರಬಹುದು. ಅದು ಪ್ರತ್ಯೇಕ, ಆದರೆ ಈ ಪಾಪದ ಹುಡುಗರು ಏನು ಮಾಡಬೇಕು? ಯಾವುದು ಆ್ಯಕ್ಷನ್ ಬಂತು? ಏನು ಬೆಡ್ ಬಂತು? ಡೆಪಾಸಿಟ್ ಮಾಡಿದಂತಹ ಹಣವನ್ನು ಹಿಂದೆ ತಿರುಗಿಸಿ ಅದಕ್ಕೆ ನಮಗೆ ಬಡ್ಡಿ ಕೊಡುವುದಕ್ಕೆ ಆಗುತ್ತಿಲ್ಲ, ನಾವು ಕಣ್ಣೀರಿನಲ್ಲಿ ಕೈ ತೊಳೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರೂ ಕೂಡ ಏನೂ ಇಲ್ಲ. ಹೈಕೋರ್ಟಿಗೆ ಹೋಗಿ ಬೇಕಾದಂತಹ ರೀತಿಯಲ್ಲಿ ಕೇಸನ್ನು ನಡೆಸುವಂತಹ ವ್ಯವಸ್ಥೆಯನ್ನೂ ಮಾಡಲಿಲ್ಲ. ಕಂಗಾಲಾಗಿರುವಂತಹ ಹುಡುಗ ಯಾರು ಆ ಬೆಡ್‌ಗೆ 50 ಸಾವಿರ ರೂಪಾಯಿ ಡೆಪಾಸಿಟ್ ಮಾಡಿದ್ದಾನೆ ಅವರ ಹಣವನ್ನು ಮರುಪಾವತಿ ಮಾಡುವಂತಹ ಸೌಜನ್ಯ ಕೂಡ ಸರ್ಕಾರಕ್ಕೆ ಇಲ್ಲ. ಈ ಕಡೆ ಹಣನೂ ಇಲ್ಲ, ಶಾಪ್ ಇಲ್ಲ. ಆ ಕಡೆ ಸಾಲ ತೆಗೆದ

ಹಣದ ಮೇಲೆ ಬಡ್ಡಿ. ನಿರುದ್ಯೋಗಿ ಯುವಕನಾಗಿ ತಂದೆತಾಯಿಗಳಿಗೆ ಭಾರವಾಗಿ ಸಮಾಜಕ್ಕೆ ಭಾರವಾಗಿ ನಡೆದುಕೊಂಡು ಹೋಗುವಂತಹ ವ್ಯವಸ್ಥೆಯನ್ನು ಈ ಸರ್ಕಾರ ಮಾಡಿತಲ್ಲ ಸ್ವಾಮಿ.ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ಈ ಲಿಕ್ಕರ್ ಲಾಬ್ ಎಷ್ಟು ದೊಡ್ಡ ರೀತಿಯಲ್ಲಿ ಇದೆ ಎಂದರೆ ಬಹುಶಃ ಸಮಾಜದಲ್ಲೆ ಇರುವಂತಹ ಎಲ್ಲಾ ವರ್ಗದ ಜನರನ್ನು ಹಿಡಿತದಲ್ಲಿ ಇಟ್ಟುಕೊಳ್ಳುವಂತಹ ವ್ಯವಸ್ಥೆಯಾಗಿದೆ. ಇವತ್ತು ಆಡಳಿತ ಮಾಡುವಂತಹ ಜನರನ್ನು ಹಿಡಿತದಲ್ಲಿ ಇಟ್ಟುಕೊಳ್ಳುವಂತಹ ರೀತಿಯಲ್ಲಿ ಇದಾಗಿದೆ. ನಾನು ಈ ಅಗ್ರಹ ಮಾಡುತ್ತೇನೆ, ನೀವು ಅವರಿಗೆ, ಅವರು ಏನು 50 ಸಾವಿರ ರೂಪಾಯಿ ಡೆಪಾಸಿಟ್ ಮಾಡಿದ್ದಾರೆ, ನೀವು ಶಾಪ್ ಕೊಡುವುದು ಬೇಡ, ಆ ಹಣವನ್ನು ದಯವಿಟ್ಟು ಬಡ್ಡಿ ಸಹಿತ ಮರುಪಾವತಿ ಮಾಡಿ. ಅವರು ಯಾವ ದಿವಸದಿಂದ ಡೆಪಾಸಿಟ್ ಮಾಡಿದ್ದಾರೆ, ಆ ನಿರುದ್ಯೋಗಿ ಯುವಕರಿಗೆ, ಯಾರು ಗ್ರಾಮಾಂತರ ಮಟ್ಟದಲ್ಲಿ ಆ್ಯಕ್ಷನ್‌ಗೆ ನೀತಿದ್ದಾರೆ ಅವರಿಗೆ ಮರುಪಾವತಿ ಮಾಡಬೇಕೆನ್ನುವ ವಿನಂತಿಯನ್ನು ಮಾಡುವುದಕ್ಕೆ ಇಚ್ಛಿಪಡುತ್ತೇನೆ. ನಾನು ಹಲವಾರು ವಿಚಾರಗಳನ್ನು ಇಲ್ಲಿ ಉಲ್ಲೇಖ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿ ಯಾವುದಕ್ಕೂ ಕೊರತೆ ಇಲ್ಲ. ನಮ್ಮ ರಾಜ್ಯದಲ್ಲಿ ಸಂಪನ್ಮೂಲ ಕ್ರೂಢೀಕರಣಕ್ಕೆ ಕೊರತೆ ಇಲ್ಲ. ರಾಜ್ಯಪಾಲರ ಭಾಷಣದ ಪ್ರತಿಯಲ್ಲಿ ಪ್ಯಾರಾ 4ರಲ್ಲಿ ಹೇಳಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು 5,400 ಕೋಟಿ ರೂಪಾಯಿಗಳ ವಿದೇಶಿ ನೇರ ಬಂಡವಾಳವನ್ನು ಆಕರ್ಷಣೆ ಮಾಡಿದೆ ಎಂದು. ಪ್ಯಾರಾ ಸಂಖ್ಯೆ 8 ರಲ್ಲಿ 1997-98ನೇ ಸಾಲಿನಲ್ಲಿ 6 ಸಾವಿರ ಕೋಟಿ ರೂಪಾಯಿ ಯೋಜನೆಯ ಬಂಡವಾಳ ಹೂಡಿಕೆಗೆ 16 ಬೃಹತ್ ಯೋಜನೆಯಾಗುತ್ತದೆ. ಪ್ಯಾರಾ 11ರಲ್ಲಿ ಹೇಳಿದ್ದಾರೆ 8ನೇ ಯೋಜನೆಯಲ್ಲಿ 273 ಕೋಟಿ ರೂಪಾಯಿಗಳನ್ನು ಈ ವಲಯಕ್ಕೆ ಖರ್ಚು ಮಾಡುತ್ತೇವೆ ಎಂದು 12ನೇ ಪ್ಯಾರಾದಲ್ಲಿ ಅಭಿವೃದ್ಧಿ ಸುಧಾರಣೆಗಳನ್ನು ಗಮನದಲ್ಲಿಟ್ಟುಕೊಂಡು 900 ಕೋಟಿ ರೂಪಾಯಿ ಯೋಜನೆಯನ್ನು ಸರ್ಕಾರ ವಿಶ್ವ ಬ್ಯಾಂಕ್ ನೆರವಿನಿಂದ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ. 13ನೇ ಪ್ಯಾರಾದಲ್ಲಿ ಸುಮಾರು 250 ಕೋಟಿ ರೂಪಾಯಿ ವೆಚ್ಚದ ಕಾಮಗಾರಿ ಅನುಮೋದನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದೇ ರೀತಿ ಬೇರೆ ಬೇರೆ ಪ್ಯಾರಾಗಳಲ್ಲಿ ಒಂದೊಂದು ಹೇಳುತ್ತಾ, 17ನೇ ಪ್ಯಾರಾದಲ್ಲಿ ಸುಮಾರು 125 ಕೋಟಿ ರೂಪಾಯಿ ಮುನ್ಸಿಪಲ್ ಬಾಂಡ್ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಪ್ಯಾರಾ 22 ರಲ್ಲಿ ಸುಮಾರು 120.43 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ವಿವಿಧ ನಗರ ಪ್ರದೇಶಗಳಿಗೆ ನೀರಿನ ಉದ್ದೇಶಕ್ಕೆ ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿ 219 ಕೋಟಿ ರೂಪಾಯಿಗಳು ಪಟ್ಟಣಗಳ ನೀರು ಸರಬರಾಜು ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ. 1.093 ಕೋಟಿ ರೂಪಾಯಿಯನ್ನು ಸರ್ಕಾರ ಕೃಷ್ಣಾ ಜಲ ಭಾಗ್ಯ ನಿಗಮದ ಮೂಲಕ ಸಂಗ್ರಹಣೆ ಮಾಡಿದೆ ಎಂದು ಹೇಳಿದ್ದಾರೆ. ಈ ರೀತಿಯಲ್ಲಿ ಯಾವುದಕ್ಕೂ ಕೊರತೆ ಇಲ್ಲ ಸ್ವಾಮಿ. ಈ ರಾಜ್ಯದಲ್ಲಿ ಮಾತ್ರ ಸಂಪನ್ಮೂಲ ಕ್ರೂಢೀಕರಣಕ್ಕೆ ಯಾವುದೇ ಕೊರತೆಯಿಲ್ಲ. ಆದರೆ ಆತ್ಮವಿಶ್ವಾಸದ ಅಂತಃಕರಣ ಶುದ್ಧಿಯ ಇಚ್ಛಾಸಕ್ತಿಯ ಕೊರತೆಯಿದೆ. ಈ ರಾಜ್ಯದಲ್ಲಿ ಆಡಳಿತ ಮಾಡುವಂತಹ ಆಡಳಿತ ಪಕ್ಷಕ್ಕೆ ಇಚ್ಛಾಸಕ್ತಿ ಕೊರತೆ ಇದೆ. ಜನರಿಗೆ ಏನು ಮಾಡಬೇಕು ಎನ್ನುವ ವಿಚಾರದಲ್ಲಿ ಕೆಲಸಗಳನ್ನು ಮಾಡುವ ಕರ್ತವ್ಯಪ್ರಜ್ಞೆ ಇಲ್ಲ. ಏಕೆ ಇಲ್ಲಿ ಕುಳಿತುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಗೌಡರೇ, ತಾವು ಒಂದು ನಿಮಿಷ ಯೀಲ್ಡ್ ಆದರೆ, ರಿಸೋರ್ಸಸ್ ಮೊಬಲೈಸ್ ಮಾಡುವುದಕ್ಕೆ ಯಾವ ತೊಂದರೆ ಕೂಡ ಇಲ್ಲ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಮತ್ತು ವಿಶೇಷವಾಗಿ ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಬಾಂಡನ್ನು ತೆಗೆದುಕೊಂಡು ಹಣ ಸಂಗ್ರಹಣೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಆದರೆ ಅದರ ಗತಿ ಏನಾಗಿದೆ ಎಂದರೆ ಹೋದಸಲ 17 ಪರ್ಸೆಂಟ್ ಇಂಟರೆಸ್ಟ್ ಕೊಡುತ್ತೇವೆ ಎಂದು ಹೇಳಿ ಅನೌನ್ಸ್ ಮಾಡಿದರು. ಆಗ ಸಾಕಷ್ಟು ಹಣ ಬಂತು. ಈಗ ಅದನ್ನು 12-13 ಪರ್ಸೆಂಟ್ ಮಾಡಬೇಕೆಂದು ಹೇಳಿದ ಮೇಲೆ ಇವರ ಹತ್ತಿರ ಒಂದು ನಯಾಪೈಸೆ ಕೂಡ ಬರಲಿಲ್ಲ. ಈಗ ಹಣ ಸಂಗ್ರಹಣೆ ಮಾಡುವುದಕ್ಕಾಗಲಿಲ್ಲ, ಕೃಷ್ಣಾ ಭಾಗ್ಯ ಜಲ ನಿಮದಲ್ಲಿ, ಅದಕ್ಕಾಗಿ ಈ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತಹ ಪರಿಸ್ಥಿತಿಯಾಗಿದೆ. ಏಕೆಂದರೆ ಬಜೆಟ್‌ನಲ್ಲಿ ಹಣ ಇಲ್ಲ. ಇದಕ್ಕೆ ಬಜೆಟ್‌ನಲ್ಲಿ ಇರುವುದು 18 ಕೋಟಿ ರೂಪಾಯಿಗಳು ಮಾತ್ರ. ಬರೀ ಸಾಲದ ರೂಪದಲ್ಲಿ ಆದರೂ ಹಣ ಕಲೆಕ್ಟ್ ಮಾಡುತ್ತೇವೆ ಎಂದು ಹೇಳಿದ್ದರೂ ಅದನ್ನು ಈವತ್ತು ಸಂಗ್ರಹಣೆ ಮಾಡುವುದಕ್ಕಾಗಲಿಲ್ಲ. ಇವತ್ತು ಬಡ್ಡಿ ಕಡಿಮೆ ನಿಗದಿಪಡಿಸಿದ್ದರಿಂದ ಇವರ ಬಾಂಡ್‌ನ್ನು ತೆಗೆದುಕೊಳ್ಳುವುದಕ್ಕೆ ಒಬ್ಬರೂ ಕೂಡ ಬರುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಂತಹ ಮಾತು ಸಂಪೂರ್ಣವಾದಂಥ ಸತ್ಯ ಅಲ್ಲ. ಹಿಂದೆ ನೋಡಿದ್ದಕ್ಕಿಂತಲೂ ಕೂಡ ಈಗ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಹೆಚ್ಚು ಜನರಿದ್ದಾರೆ. ಎಸ್‌ಬಿಐ ಕ್ಯಾಪ್ಸ್‌ನವರು ಇದ್ದಾರೆ. ಬೇರೆ ಬೇರೆ ಖಾಸಗಿ ಸಂಸ್ಥೆ ಕೂಡ ಮುಂದೆ ಬಂದಿದೆ. ಆ ತರಹ ನೋಡಿದರೆ 13.75 ಇರುವುದಾದರೂ ಒಳ್ಳೆಯದಾಗಿತ್ತು. ಈಗ 200 ಕೋಟಿ ರೂಪಾಯಿಗಳನ್ನು ಶಾರ್ಟ್ ಟರ್ಮ್ ಲೋನ್‌ಗಾಗಿ ವ್ಯವಸ್ಥೆ ಮಾಡಿಕೊಂಡಿರತಕ್ಕಂಥ ಸಂದರ್ಭದಲ್ಲಿ ಫುಲ್ಲಿ ಸಬ್‌ಸ್ಕ್ರೈಬ್ ಆಗಿದೆ. ಕರ್ನಾಟಕ ಸರ್ಕಾರದ ಖಾತ್ರಿ ಇರುವುದರಿಂದ ನೀವು ಹೇಳುವಂತಹ ಮಾರ್ಕೆಟ್‌ನಲ್ಲಿ ಹಣ ಸಂದಾಯವಾಗಿರುತ್ತದೆ. ನಾವು ಕೆಲಸ ಕಾರ್ಯಗಳನ್ನು ಸಂಪೂರ್ಣವಾಗಿ ಕೈಗೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಇಂಟರೆಸ್ಟ್ ಕಡಿಮೆ ಮಾಡಿದ್ದುದು ಸತ್ಯ. ಅದಕ್ಕೆ ಯಾರೂ ಬರುತ್ತಿಲ್ಲ. ಶಾರ್ಟ್ ಟರ್ಮ್ ಲೋನ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆಯೇ ಹೊರತು ಜನರಿಂದ ಬರುತ್ತಿಲ್ಲ. ಇವರು ಬ್ಯಾಂಕ್ ಮೇಲೆ ಪ್ರೆಷರ್ ಹಾಕಿ ಏನಾದರೂ ಮಾಡುತ್ತಿರಬೇಕು. ಆದರೆ ಜನ ವಾಲಂಟರಿಯಾಗಿ ಬಂದ ತೆಗೆದುಕೊಳ್ಳಬೇಕು ಅದು ಸಾಧ್ಯವಾಗುತ್ತಾ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಈಗ ಉದಾಹರಣೆ ಹೇಳುತ್ತಿದ್ದೇನೆ. ಪಿಯರ್‌ಲೆಸ್ ಕಂಪನಿಯಿಂದ ದೊಡ್ಡ ಬಡ್ಡಿಗೆ ತೆಗೆದುಕೊಂಡು ಬಂದಿರತಕ್ಕಂಥ ಸಾಲವನ್ನು ನಾವು ಇತ್ತೀಚೆಗೆ ಕಡಿಮೆ ದರದ ಬಡ್ಡಿಯಲ್ಲಿ ತೆಗೆದುಕೊಂಡು ಬಂದು ಅವರ ಸಾಲವನ್ನು ತೀರಿಸಬೇಕು ಎನ್ನುವ ನಿರ್ಧಾರವನ್ನು ಕೂಡ ಮಾಡಿದ್ದೇವೆ. ಈಗ ಮಾರ್ಕೆಟ್‌ನಲ್ಲಿ ಬಡ್ಡಿಯ ದರ ಕಡಿಮೆಯಾಗಿದೆ. ಆದುದರಿಂದ ಬಡ್ಡಿಯ ದರವನ್ನು ಕಡಿಮೆ ಆದ ರೀತಿಯಲ್ಲಿ ತೆಗೆದುಕೊಳ್ಳಬೇಕು ಎಂದು ನಮ್ಮ ನಿರ್ಧಾರ ಅಷ್ಟೇ. ಹಣದ ಮುಗ್ಗಟ್ಟು ಏನಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸ್ವಾಮಿ, ತಾವು ಫಿಗರ್ಸ್ ನೋಡಿ. ತಾವು ಈ ವರ್ಷ ಯು.ಕೆ.ಪಿ.ಗೆ ಖರ್ಚು ಮಾಡುತ್ತೇವೆಂದು ನೀವು ಹೇಳಿದಂತೆ ಓವರ್‌ಆಲ್ ಇರಿಗೇಷನ್ ಪ್ರಾಜೆಕ್ಟ್ಸ್‌ಗೆ ಬಜೆಟ್‌ನಲ್ಲಿ 1,289 ಕೋಟಿ ರೂಪಾಯಿಗಳು ಇತ್ತು. ಇಲ್ಲಿಯವರೆಗೆ ತಾವು ಬಿಡುಗಡೆ ಮಾಡಿದ್ದು 588 ಕೋಟಿ ರೂಪಾಯಿಗಳು ಮಾತ್ರ. ಎಷ್ಟು ವ್ಯತ್ಯಾಸವಾಯಿತು? 50 ಪರ್ಸೆಂಟ್ ಕಡಿಮೆಯಾಯಿತು. ಎಂದರೆ ಯಾವ ಕೆಲಸಗಳು ನಡೆಯುತ್ತವೆ? ಆದ್ದರಿಂದ ಹಣದ ಕೊರತೆ ಇಲ್ಲವೆಂದು ಹೇಳಬೇಡಿ. ಎಂದು ಕಡೆ ಹಣವನ್ನು ಸಂಗ್ರಹಣೆ ಮಾಡುವುದಕ್ಕೆ ಬಾಂಡ್ಸ್‌ಗಳನ್ನು ಮಾರಿ ಷೇರು ಬಂಡವಾಳವನ್ನು ಕೂಡಿಸಬೇಕೆಂದು ಒಂದು ಕಡೆ ಇದ್ದರೆ, ಇನ್ನೊಂದು ಕಡೆ ನಿಮ್ಮ ಓನ್ ರಿಸೋರ್ಸ್ಸ್ ಮತ್ತು ಸ್ಟೇಟ್ ರಿಸೋರ್ಸ್ಸ್ ಮೊಬಲೈಸ್ ಆಗಲಿಲ್ಲ ಎನ್ನುವುದಕ್ಕೆ ಇದೇ ಉದಾಹರಣೆ. ಇಲ್ಲದಿದ್ದರೆ ಇಷ್ಟೊಂದು ಹೈಯರ್ ಟಾರ್ಗೆಟ್ ಇಟ್ಟುಕೊಂಡು ಕೇವಲ 588 ಕೋಟಿ ರೂ ರಿಲೀಸ್ ಮಾಡುತ್ತಿದ್ದೀರಾ?

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಛೇರ್ಮನ್‌ರವರೇ, ಕೃಷ್ಣಾ ಜಲಭಾಗ್ಯ ನಿಗಮದಿಂದ ಒಟ್ಟು ಬೇರೆ ಬೇರೆ ರೀತಿಯಲ್ಲಿ ಹಂತಗಳಲ್ಲಿ 1030 ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ನಾವು ಬಾಂಡ್‌ಗಳ ಮೂಲಕ ಸಂಗ್ರಹಿಸಿದ್ದೇವೆ. ನಾವು ಬೆಂಗಳೂರು ಸಿಟಿ ಕಾರ್ಪೊರೇಷನ್‌ನವರಿಗೆ ಸುಮಾರು 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಅದು ಸಂಪೂರ್ಣ ಸಬ್‌ಸ್ಕ್ರೈಬ್ ಆಗಿದೆ. ಹಾಗೆಯೇ ಕೆಇಬಿಗೂ ಕೂಡ ಅಧಿಕಾರವನ್ನು ಕೊಟ್ಟಿದ್ದೇವೆ. ಸರ್ಕಾರ ಗ್ಯಾರಂಟಿಯಾಗಿ ನಿಲ್ಲತಕ್ಕಂತಹ ಸಂದರ್ಭ ಬಂದರೆ ಅದಕ್ಕೆ ಸಂಪೂರ್ಣ ಹಣ ಬರುತ್ತದೆ. ಹಣ ಖರ್ಚು ಆಗದೇ ಇರುವುದಕ್ಕೆ ಬೇರೆ ಬೇರೆ ಕಾರಣಗಳು ಇರುತ್ತವೆ. ಟೆಂಡರನ್ನು ಕರೆದು ಕೊಡಬೇಕು ಎಂದು ನಿರ್ಧಾರ ಮಾಡಿದ್ದೇವೆ. ಇಲ್ಲದಿದ್ದರೆ ಅದಕ್ಕೊಂದು ಆಪಾದನೆ ಮಾಡುತ್ತಾರೆ. ಈಗಲೂ ಕೂಡ ಇನ್ನು ಕೆಲವೇ ದಿವಸಗಳಲ್ಲಿ ನಾವು ಹಣವನ್ನು ಸಂಗ್ರಹಣೆ ಮಾಡುತ್ತೇವೆ, ಕಡಿಮೆ ಬಡ್ಡಿ ದರದಲ್ಲಿ ಹಣವನ್ನು ಸಂಗ್ರಹಣೆ ಮಾಡುತ್ತೇವೆ. ಅದು ಯಾವುದೇ ಕಾರಣಕ್ಕಾಗಿದ್ದರೂ ಕೂಡ ಕೃಷ್ಣಾ ಮೇಲ್ದಂಡೆ ಕೆಲಸ ಸ್ಥಗಿತವಾದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಛೇರ್ಮನ್‌ರವರೇ, ನಾನು ಹೇಳಿದ್ದು ಎಲ್ಲಾ ಬೇರೆ ಬೇರೆ ರೀತಿಯಲ್ಲಿ ಸಾಲವಾಗಲಿ, ಮೂಲವಾಗಲಿ, ಯಾವುದೇ ಆಗಲಿ ಕ್ರೋಢೀಕರಣ ಮಾಡುವಂತಹ ವ್ಯವಸ್ಥೆ ಇದೆ ಎಂದು ಹೇಳಿದೆ. ಆದರೆ ಆತ್ಮಸಾಕ್ಷಿಯಾಗಿ ಆಧಾರಿತವಾದಂತಹ ಕರ್ತವ್ಯ ನಿರ್ವಹಣೆ ಮಾಡುವಂತಹ ಒಂದು ಕೊರತೆ ಇದೆ. ಇದ್ದ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳುವಂತಹ ಸ್ವಜನಶೀಲ ನಾಯಕತ್ವದ ಕೊರತೆ ಇದೆ. ಸ್ವಾಭಿಮಾನಿ ಜನಪ್ರತಿನಿಧಿ ಆಗಲೇಬೇಕೆನ್ನುವ ಸಂಕಲ್ಪಶಕ್ತಿ ಆಡಳಿತ ಪಕ್ಷ ಜನತಾದಳದಲ್ಲಿ ಯಾರಿಗೂ ಇಲ್ಲ. ವಿಚಾರಗಳಿಗೆ ಒತ್ತುಕೊಡುವಂತದ್ದು ಯಾರಿಗೂ ಇಲ್ಲ, ಒತ್ತು ಕೊಡದೆ ಪ್ರಚಾರಕ್ಕೆ ಮಾತ್ರ ಅಂಟಿಕೊಳ್ಳುವಂತಹ ಜಾಯಮಾನ ಜಾಸ್ತಿಯಾಗಿದೆ. ಇದನ್ನು ಅರಿತ ಕವಿ ಬಾರಿ ಹಿಂದೆ ಒಂದು ಸಂಗತಿ ಹೇಳಿದ್ದ "ಈ ದೇಶದಲ್ಲಿರುವಂತಹ ಆಚಾರವಿಚಾರ ಸಂಸ್ಕೃತಿ ಪರಂಪರೆಗಳನ್ನು ಬಳಸಿಕೊಂಡು ಈ ದೇಶದಲ್ಲಿ ಆಡಳಿತ ಮಾಡಿದರೆ ಮಾತ್ರ ಈ ದೇಶ ಸುವ್ಯವಸ್ಥೆಯಾಗುತ್ತದೆ". ಈ ದೇಶದಲ್ಲಿರುವಂತಹ ಸಂಸ್ಕೃತಿ, ಪರಂಪರೆ ಈ ದೇಶದ ಮಣ್ಣಿನ ಕಣಕಣಗಳಲ್ಲೂ ಇರುವಂತಹ ವಿಚಾರಧಾರೆ. ಆದರ ಹಿನ್ನೆಲೆಯಲ್ಲಿ ಈ ದೇಶದ ರಾಜಕಾರಣವಾದರೆ ಮಾತ್ರ ದೇಶೀಯ ಸಂಸ್ಕೃತಿಯ ಆಧಾರದಲ್ಲಿ

ರಾಜಕೀಯ ಭವಿಷ್ಯ ಇದೆ ಎಂದು ಹಿರಿಯರು ಹೇಳಿದ್ದಾರೆ. ಇದು ಅವನು ಬಹಳ ಹಿಂದೆ ಹೇಳಿದಂತಹ ಮಾತು. ಬಹುಶಃ ಈ ಜನತಾದಳ ಅಧಿಕಾರಕ್ಕೆ ಬರುತ್ತದೆ ಎಂದು ಗೊತ್ತಿದ್ದೇ ಅವನು ಹೇಳಿರಬೇಕೆಂದು ನನಗೆ ಕಾಣಿಸುತ್ತದೆ. " ನೂರು ಶಾಸನ, ನೂರು ಮಂದಿರ, ದೈವ ಸಾವಿರನಿದ್ದರೆ, ಗಂಗೆ ಇದ್ದರೆ, ತುಂಗೆ ಇದ್ದರೆ, ವರಹಿಮಾಲಯವಿದ್ದರೆ, ವೇದವಿದ್ದರೆ, ಶಾಸ್ತ್ರವಿದ್ದರೆ, ಶೃತಿಪುರಾಣಗಳಿದ್ದರೆ, ಮಾತು ಇದ್ದರೆ, ಮಮತೆ ಇದ್ದರೆ, ಅಧಿಕಾರ ಪೀಠಗಳಿದ್ದರೆ, ಏನು ಸಾರ್ಥಕ ಮನೆಯ ಮಕ್ಕಳು ಮಲಗಿ ನಿದ್ರಿಸುತ್ತಿದ್ದರೆ" ಎಂದು ಹೇಳುತ್ತಾನೆ. ಇವತ್ತು ಜನತಾದಳದ ಎಲ್ಲಾ ಈ ಆಡಳಿತ ನಡೆಸುವಂತಹ ವ್ಯಕ್ತಿಗಳು ಈ ದೇಶದಲ್ಲಿರುವಂತಹ ಸಂಸ್ಕೃತಿ.

ಮಾನ್ಯ ಸದಸ್ಯರು:- ಅವರು ನಿದ್ರೆ ಮಾಡುತ್ತಿದ್ದಾರೆ ಸಾರ್.

ಶ್ರೀ ಡಿ.ವಿ. ಸದಾನಂದಗೌಡ:- ನಿಮ್ಮಂತವರಿಗೆ ಹರಿಕಥೆಯನ್ನೆ ಮಾಡಬೇಕು. ಬೇರೆ ಬುದ್ಧಿಯೇ ಬರುವುದಿಲ್ಲ. ಛೇರ್ಮನ್‌ರವರೇ, ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗ ಹರಿಕಥೆಯ ಬಗ್ಗೆ ಕೇಳಿದರು, ಹರಿಕಥೆಯ ಬಗ್ಗೆ ಒಂದು ಕಥೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಹರಿಕಥೆಯನ್ನು ಸದನದಲ್ಲಿ ಮಾತನಾಡುವುದು ಬೇಡ, ಸದನದಲ್ಲಿ ಮಾತನಾಡುವ ವಿಷಯವನ್ನು ಮಾತನಾಡಲಿ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಛೇರ್ಮನ್‌ರವರೇ, ಹಿಂದೆ ಒಬ್ಬ ಹರಿಕಥೆಯನ್ನು ಕೇಳಲಿಕ್ಕೆ ಹೋಗಿದ್ದರಂತೆ, ಅವನಿಗೆ ನಿದ್ರೆ ಬಂದಿತ್ತು. ನಿದ್ರೆ ಬಂದು ಎಚ್ಚೆತ್ತಾಗ ಬಾಯಲ್ಲಿ ಉಪ್ಪುಪ್ಪು ಆಗುತ್ತಾ ಇತ್ತಂತೆ. ಅವನು ಹರಿಕಥೆ ಕೇಳಿರಲಿಲ್ಲ, ಆದರೆ ಬಾಯಿ ಉಪ್ಪುಪ್ಪು ಆದ ಕತೆಯೇನು ಎಂದು ಕೇಳಿದನಂತೆ. ಅದು ಏನಾಗಿದೆ ಎಂದು ಅವರು ತಿಳಿದುಕೊಂಡರೆ ಸಾಕು. ನಾನು ಹರಿಕಥೆಯ ಬಗ್ಗೆ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಈ ರೀತಿಯ ಒಂದು ರಾಜಕಾರಣ ಈ ರಾಜ್ಯದಲ್ಲಿರುವಂತಹ ಅವಶ್ಯಕತೆ ಇಲ್ಲ. ಕೇವಲ ರಾಜ್ಯಪಾಲರ ಒಂದು ಭಾಷಣದಲ್ಲಿ ಅಂಕಿ ಅಂಶಗಳ ಆಧಾರದ ಮೇಲೆ ರಾಜಕಾರಣ ಮಾಡಬೇಕು ಎಂದು ಹೇಳುವಂತಹ ವ್ಯವಸ್ಥೆಗಳನ್ನು ಇವರೇನು ಮನಸ್ಸು ಮಾಡಿ ಬರೀ ಅಂಕಿಅಂಶಗಳ ಆಧಾರದ ಮೇಲೆ ಮಾಡಿದರೆ ಈ ರಾಜ್ಯಕ್ಕೆ ಭವಿಷ್ಯವಿಲ್ಲ. ಈ ಕಾರ್ಯಕ್ರಮಗಳನ್ನು ಯೋಜಿತ ರೀತಿಯಲ್ಲಿ ಅನುಷ್ಠಾನವಾಗುವಂತಹ ವ್ಯವಸ್ಥೆ ಮಾಡುವಂತಹ ಕೆಲಸಗಳು ಆದಾಗ ಮಾತ್ರ ಆ ಕೆಲಸಗಳು ಆಗುತ್ತದೆ. ನಿಮಗೆ ಇನ್ನಾದರೂ ದೇವರು ಬುದ್ಧಿಯನ್ನು ಕೊಡಲಿ. ಆ ಕನ್ನಡಮಾತೆ ನಿಮಗೆ ಒಳ್ಳೆಯ ಬುದ್ಧಿ ಕೊಟ್ಟರೂ ಸ್ವಲ್ಪ ದಿವಸವೇ ನೀವು ಇರುವುದು; ಬಿಡಿ, ಅದು ಬೇರೆ ಪ್ರಶ್ನೆ, ಆದರೂ ಕೂಡ ಇದ್ದಷ್ಟು ದಿನ ಸ್ವಲ್ಪ ಒಳ್ಳೆಯ ಕೆಲಸವನ್ನು ಮಾಡಿ ಒಂದು ಹೇಳುವಂತಹ ವಿನಂತಿಯನ್ನು ಮಾಡಿಕೊಳ್ಳುತ್ತಾ ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಛೇರ್ಮನ್‌ನವರೇ, ನಾನು ಪೂರ್ಣವಾಗಿ ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತಾ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಛೇರ್ಮನ್‌ರವರೇ, ಕೇಳುವಾಗ ಎದ್ದೆದ್ದು ನಿಂತು ಈ ಸರ್ಕಾರ ಇರಲಿ, ಇರಲಿ ಎಂದು ಹೇಳುತ್ತಿದ್ದೀರಿ, ಇದನ್ನು ನೋಡಿದರೆ ನಾನು ವಿರೋಧಿಸುತ್ತೇನೆಂದು ಹೇಳುತ್ತೀರಿ.

ಒಬ್ಬ ಮಾನ್ಯ ಸದಸ್ಯರು:- ಛೇರ್ಮನ್‌ರವರೇ, ನಾವು ನೋಡಿ ಸ್ಪಷ್ಟವಾಗಿ ಹೇಳುತ್ತೇವೆ. ಚುನಾವಣೆ ಆಗಲಿ, ಹೊಸ ಸರ್ಕಾರ ಬರಲಿ, ಯಾರಿಗೇ ಜನಾದೇಶ ಕೊಡಲಿ ಗಟ್ಟಿಮುಟ್ಟಾದಂತಹ ಸರ್ಕಾರ ಬರುತ್ತದೆ, ನಿದ್ಧೆ ಮಾಡುವಂತಹ ಸರ್ಕಾರ ತೆಗೆದುಕೊಂಡು ಏನು ಮಾಡುವುದಕ್ಕಾಗುತ್ತದೆ? ಇದರಿಂದ ನಿಮಗೂ ಪ್ರಯೋಜನವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಛೇರ್ಮನ್‌ರವರೇ, ಅದರಿಂದ ನಾವು ತಮಗೆ ಹೇಳುತ್ತೇನೆ. ಈಗ ಏನು ಖರ್ಗೆಯವರು ಹೇಳುತ್ತಾರೆ. ಅದನ್ನು ನಾನು ನೂರಕ್ಕೆ ನೂರು ಒಪ್ಪುವುದಿಲ್ಲ. ಆ ಪ್ರಶ್ನೆ ಬೇರೆ. ಆದರೆ ಅವರ ಮನಸ್ಸಿನಲ್ಲೂ ಕೂಡ ಈ ಸರ್ಕಾರ ಹೋಗಬೇಕು ಎನ್ನುವ ಉದ್ದೇಶ ಯಾರಿಗೂ ಇಲ್ಲ. ಇನ್ನು ಎರಡು ವರ್ಷದವರೆಗೆ ಚುನಾವಣೆಗೆ ಹೋಗುವುದಕ್ಕೆ ಯಾರು ತಯಾರಾಗಿದ್ದಾರೆ?

ಮಾನ್ಯ ಸದಸ್ಯರು:- ಅವರು ಬಹಿರಂಗವಾಗಿ ಹೇಳುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಚುನಾವಣೆಗೆ ನಾವು ರೆಡಿಯಾಗಿದ್ದೇವೆಂದು ಹೇಳುತ್ತಿದ್ದೇವಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಛೇರ್ಮನ್‌ರವರೇ, ನನಗೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಶಾಸನಸಭೆ ಇನ್ನು ಎರಡು ವರ್ಷ ಅಧಿಕಾರವಿರುವಾಗ ಚುನಾಯಿತ ಶಾಸನ ಸಭೆಯನ್ನು ವಿಸರ್ಜನೆ ಮಾಡಿ ಮತ್ತೆ ಚುನಾವಣೆಗೆ ಹೋಗಬೇಕು ಎಂದು ಹೇಳತಕ್ಕಂಥದ್ದು ಇದು ಒಳ್ಳೆಯ ಮಾರ್ಗವೇನಲ್ಲ. ನಾನು ತಮಗೆ ಒಂದು ವಿಚಾರವನ್ನು ಮಾತ್ರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಲೋಕಸಭೆ ಚುನಾವಣೆಯಾಯಿತು. ನಂತರ ದೇಶದಲ್ಲಿ ಹೊಸ ಸರ್ಕಾರ ಬರುತ್ತದೆ ಎಂದು ಚಿಂತನೆ, ಸರ್ಕಾರ ಬಲಿ, ಅದರ ಬಗ್ಗೆ ನಮ್ಮದೇನು ಇಲ್ಲ. ಅದನ್ನು ಸ್ವಾಗತ ಮಾಡುತ್ತೇನೆ. ವಾಜಪೇಯಿಯರು ಪ್ರಧಾನಿಯಾಗುತ್ತಾರೆಂದು ಚಿಂತನೆ ಇತ್ತು, ಅದರ ಬಗ್ಗೆ ನನ್ನ ತಕರಾರು ಇಲ್ಲ. ವಾಜಪೇಯಿಯವರು ಆಗಲಿ ಬಹಳ ಸಂತೋಷ ಅದರ ಬಗ್ಗೆ ಎರಡಾಭಿಪ್ರಾಯವಿಲ್ಲ. ಆದರೆ ಇವತ್ತಿನ ಪರಿಸ್ಥಿತಿಯನ್ನು ನಾವು ನೋಡಿದಾಗ ಸರ್ಕಾರ ಅಲ್ಲಿ ರಚನೆ ಆಗುತ್ತದೆ ಎನ್ನುವಂತಹ ವ್ಯವಸ್ಥೆ ಇಲ್ಲ. ಬಹಳ ಗೊಂದಲದ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ನಾವೆಲ್ಲರೂ ಇವತ್ತು ಪಕ್ಷರಹಿತವಾಗಿ ಈ ಪಕ್ಷ, ಬೇರೆ ಪಕ್ಷ ಎಂದು ಚಿಂತನೆ ಮಾಡುವುದಕ್ಕಾಗುವುದಿಲ್ಲ, ಇವತ್ತು ಕಾಂಗ್ರೆಸ್ ಇರಬಹುದು, ಜನತಾದಳ ಇರಬಹುದು, ಬಿಜೆಪಿ ಇರಬಹುದು, ನಮಗೆ ಈ ದೇಶ ಮುಖ್ಯ. ಈ ದೇಶದಲ್ಲಿ ಒಂದು ಸ್ಥಿರವಾದ ಸರ್ಕಾರ ಬರಬೇಕಾಗಿರುವುದು ಮುಖ್ಯ. ಆ ದೃಷ್ಟಿಯಿಂದ ನಾವೆಲ್ಲಾ ಒಂದು ರೀತಿ ಯಾವುದೇ ಚಿಂತನೆಯಿಲ್ಲದೆ ಒಂದು ಸರ್ಕಾರ ಆಗುತ್ತದೆ ಎಂದು ನಾವು ಚಿಂತನೆ ಮಾಡಿದ್ದೆವು. ಮತ್ತು ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲರು ಸಹ ಒಂದು ಕಡೆ ಹೇಳಿದರು. ಅದೇನೆಂದರೆ

ಬಿಜೆಪಿಯವರು ಸರ್ಕಾರವನ್ನು ಮಾಡಿದರೆ ಮಾಡಲಿ ನಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳಿದರೆಂದು ನನಗನ್ನಿಸುತ್ತದೆ. ಆ ಒಂದು ಚಿಂತನೆಗೆ ತಣ್ಣೀರೆರಚಿ ಪ್ರಜಾತಂತ್ರ ವ್ಯವಸ್ಥೆಗೆ ಈ ದೇಶದಲ್ಲಿ ಅಪಾಯ ಒದಗತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ; ಇದು ಆಗಬಾರದು. ಇದನ್ನು ಎಲ್ಲರೂ ಜವಾಬ್ದಾರಿಯಾಗಿ ಈ ದೇಶದಲ್ಲಿ ಚಿಂತನೆಯನ್ನು ಮಾಡಬೇಕು. ಬಿಜೆಪಿ ಅಧಿಕಾರಕ್ಕೆ ಬರಬಹುದು, ಕಾಂಗ್ರೆಸ್ ಅಧಿಕಾರಕ್ಕೆ ಬರಬಹುದು, ಜನತಾದಳ ಅಧಿಕಾರಕ್ಕೆ ಬರಬಹುದು, ನಾಳೆ ಈ ದೇಶದ ಪರಿಸ್ಥಿತಿ ಏನಾಗುತ್ತದೆ ಎಂಬುದರ ಬಗ್ಗೆ ಚಿಂತಿಸಬೇಕೆಂಬುದು ಮುಖ್ಯವಾದ ಚಿಂತನೆ ಆಗಬೇಕಾಗುತ್ತದೆ; ಆಗಬೇಕೆಂಬುದೇ ನನ್ನ ಪ್ರಶ್ನೆ. ಈ ದೃಷ್ಟಿಯಲ್ಲಿ ನನಗನಿಸುತ್ತದೆ. ಅವರು ಅನೇಕ ಪಕ್ಷಗಳನ್ನು ಒಳಗೊಂಡು ಸರ್ಕಾರವನ್ನು ರಚನೆ ಮಾಡುತ್ತೇವೆಂದು ಹೇಳಿ ಹೊರಟು ಚುನಾವಣೆಗೆ ಮುಂಚಿತವಾಗಿ ಅನೇಕ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಂಡು ಚುನಾವಣೆಗೆ ಹೋಗಿ ಮತದಾರರ ಮುಂದೆ ನಿಂತು ಅವರಿಗೂ ಮತಕೊಡಬೇಕು ನಮ್ಮ ಜೊತೆಯಲ್ಲಿ ಬರುತ್ತಾರೆಂದು ಹೇಳಿ ತಮಿಳುನಾಡು, ಆಂಧ್ರ, ಕರ್ನಾಟಕ ಎಲ್ಲಾ ಕಡೆ ಸುತ್ತಾಡಿ ಸಹ ಪಕ್ಷಗಳೆಲ್ಲಾ ಅವರದೇ ಆದಂತಹ ಒಕ್ಕೂಟ ಒಂದು ವ್ಯವಸ್ಥೆಯನ್ನು ಮಾಡಿ ಇವತ್ತು ಬರುತ್ತಾರೆಂದು ಹೇಳಿ ಯೋಜನೆ ಇತ್ತು. ಆದರೆ ಇವತ್ತು ತಮಿಳುನಾಡು ಮುಖ್ಯಮಂತ್ರಿಯವರ ಒಂದು ಧೋರಣೆ, ಮಾಜಿ ಮುಖ್ಯಮಂತ್ರಿಯವರ ಒಂದು ಧೋರಣೆಯನ್ನು ನೋಡಿದರೆ ಇದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ಆದರೆ ಇವತ್ತು ಷರತ್ತುಗಳು ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶವನ್ನು ನೀವು ಒಪ್ಪುವುದಾದರೆ ನಾವು ಬೆಂಬಲ ಕೊಡುತ್ತೇವೆ ಎಂದು ಹೇಳಿದರೆ ಯಾರ ಆಸ್ತಿಯನ್ನು ಯಾರಿಗೆ ಕೊಡುವುದು? ಇದಕ್ಕೇನು ಚಿಂತನೆ ಇದೆ? ನಮ್ಮ ರಾಜ್ಯದ ಜನ ಯಾರು? ಕರ್ನಾಟಕ ಜನ ಯಾವ ಪಕ್ಷದವರು; ಬಿಜೆಪಿಯವರನ್ನು ಒಪ್ಪಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ವಾಜಪೇಯಿಯವರು ಯಾವುದೇ ಒತ್ತಡಕ್ಕೂ ಮಣಿಯುವುದಿಲ್ಲವೆಂದು ಹೇಳಿದ್ದಾರೆ. ಇವತ್ತು ಅಭಿನಂದನೆಯನ್ನು ನಾನು ಸಲ್ಲಿಸುತ್ತೇನೆ. ಈ ಒಂದು ಸದನದಲ್ಲಿ ಹೇಳುವುದೇನೆಂದರೆ ಅವರು ನಾನು ಪ್ರಧಾನಿ ಆಗಲಿ, ಆಗದಿರಲಿ, ಈ ಒತ್ತಡಕ್ಕೆ ಮಣಿಯುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್:- ತಾವು ಬಹಳ ಒಳ್ಳೆಯ ಮಾತನ್ನು ಈ ಸಂದರ್ಭದಲ್ಲಿ ಸದನದಲ್ಲಿ ಎತ್ತಿದ್ದೀರಿ. ಅದು ಮೇಲ್ನೋಟಕ್ಕೆ ಜನಪರವಾಗಿರತಕ್ಕಂತಹ ಒಂದು ವಿಷಯದ ಮೇಲೆ ನಾನು ಚರ್ಚೆಗೆ ಇಳಿದಿದ್ದೇನೆ. ಆದರೆ ಅವರಿಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ತಾವು ಸೂಚಿಸಿದಂತಹ ವ್ಯಕ್ತಿಗೆ ಅಲ್ಲಿಯ ಹಣಕಾಸು ಇಲಾಖೆಯ ಎನ್‌ಫೋರ್ಸ್‌ಮೆಂಟ್ ಜಾರಿಗೆ ಕೊಡಿಸತಕ್ಕಂತಹ ಒಂದು ಖಾತೆ ಮತ್ತು ಕಾನೂನಿನ ಒಂದು ಖಾತೆ ಇವೆರಡೂ ಇರಬೇಕು

ಎನ್ನುವಂತಹ ಕಾರಣ. ಆದರೆ ಮೇಲ್ನೋಟಕ್ಕೆ ಮಾತ್ರ ನಾವು ಜನಪರವಾದ ನಿಲುವನ್ನು ತೆಗೆದುಕೊಂಡಿದ್ದೇವೆಂದು, ವಾಜಪೇಯಿಯವರು ಇದಕ್ಕೆ ಒಳಗಾಗಿಲ್ಲ, ನಾವು ಅವರನ್ನು ಅಭಿನಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ ಕಾವೇರಿ ನದಿ ನೀರಿನ ಹಂಚಿಕೆಯ ವಿಷಯವನ್ನು ಇವರು ತಮ್ಮ ರಾಜಕಾರಣಕ್ಕೆ ಬಳಸಿಕೊಳ್ಳುವುದು, ಭ್ರಷ್ಟಾಚಾರವನ್ನು ರಾಜಕಾರಣಕ್ಕೆ ಬಳಸಿಕೊಳ್ಳುವುದನ್ನು ಈ ಸದನ ಖಂಡಿಸಬೇಕಾಗುತ್ತದೆ. ಭ್ರಷ್ಟಾಚಾರವನ್ನು ತಪ್ಪಿಸುವುದಕ್ಕೆ ತಮಗೆ ಬೇಕಾದಂಥ ಒಬ್ಬ ಶಿಷ್ಯನನ್ನು ಅಥವಾ ಬೇಕಾದ ಒಬ್ಬ ಸಹಾಯಕನನ್ನು ಮಂತ್ರಿ ಮಾಡತಕ್ಕಂಥದ್ದು, ಆ ಮಂತ್ರಿಯಾಗತಕ್ಕಂತಹ ವ್ಯಕ್ತಿಯನ್ನು ತಾವು ನೋಡಿದ್ದೀರಿ. ಹಿಂದೆ ಡಿ.ಎಂ.ಕೆ. ಈಗ ಎ.ಐ.ಎ.ಡಿ.ಎಂ.ಕೆ. ಮುಂದೆ ಅವರದು ಯಾವ ಪಕ್ಷವೋ? ಈ ದೇಶದ ಗತಿ ಏನಾಗಬೇಕು? ಇದು ಪ್ರಜಾಪ್ರಭುತ್ವಕ್ಕೆ ತುಂಬಾ ಅಪಾಯಕಾರಿಯಾದ ಬೆಳವಣಿಗೆ. ವೈಸ್ ಛೇರ್ಮನ್‌ರವರೇ, ನಾನು ಹೇಳುತ್ತಿದ್ದೇನೆ, ಕರ್ನಾಟಕ ರಾಜ್ಯದ ಇಡೀ ಜನ ಜಯಲಲಿತಾರವರ ಒಂದು ಷರತ್ತುನ್ನು, ನಮ್ಮ ನ್ಯಾಯಮಂಡಲಿ ಕೊಟ್ಟಂತಹ ಎಂದು ತೀರ್ಪನ್ನು ಸಾರಾಸಗಟಾಗಿ ತಿರಸ್ಕರಿಸಿದ್ದೇವೆ. ನಮಗೇನೂ ಬಿ.ಜೆ.ಪಿ.ಗೆ ಬೆಂಬಲ ಕೊಡಬೇಕು ಎಂಬ ಉದ್ದೇಶವಿಲ್ಲ; ಅಂತಹದರಲ್ಲಿ ಜಯಲಲಿತಾರವರ ಷರತ್ತನ್ನು ಒಪ್ಪಿ ಎಂದು ನೀವು ಹೇಳುವುದಾದರೆ ಇದಕ್ಕೆ ಕರ್ನಾಟಕದ ಜನ ತಯಾರಾಗಿಲ್ಲ ಎಂಬ ಮಾತನ್ನು ಈ ಸದನದಲ್ಲಿ ಖಡಾಖಂಡಿತವಾಗಿ ಹೇಳುತ್ತಿದ್ದೇನೆ. ಇದನ್ನು ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಇವೊತ್ತು ಬಿ.ಜೆ.ಪಿ ಯವರು ಸರ್ಕಾರ ಮಾಡುವುದನ್ನು ಹೊರಟಿದ್ದಾರೆ. ನಾಳೆ ಕಾಂಗ್ರೆಸ್‌ನವರು ಬರಬಹುದು, ಅವರಿಗೂ ಇದನ್ನೇ ಹೇಳುತ್ತೇವೆ. ಯಾವುದೇ ಷರತ್ತಿಗೆ ಒಳಗಾಗಬಾರದು, ಈ ತರಹ ಷರತ್ತುಗಳಿಂದ ಪ್ರಜಾತಂತ್ರ ವ್ಯವಸ್ಥೆಯನ್ನು ನಡೆಸುವುದಾದರೆ ನಮ್ಮ ಇಡೀ ದೇಶದ ಒಕ್ಕೂಟಕ್ಕೆ, ಒಗ್ಗಟ್ಟಿಗೆ ಭಂಗ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವೈಸ್ ಛೇರ್ಮನ್:- ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಮಧ್ಯಹ್ನ 2.12 ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 16.03.1998 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣದಲ್ಲಿ ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತೇವೆ.